22 April 2026 Wednesday
SINCE 1957
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

**ಭಾವನಾಂತರಂಗ**

ಮನವನ್ನು ಅರಿತ ಸಂಬಂಧಕ್ಕಿಂತ,
ಧನವನ್ನು
ಅರಿತು ಬರುವ ಸಂಬಂಧವೇ ಹೆಚ್ಚು!
-ಸ್ನೇಹಾ ಆನಂದ್

# ವರ್ತಮಾನ

ಸಂಪಾದಕ: ಕೆ.ಎನ್.ರವಿ
ಭವಿಷ್ಯದ ಮುನ್ನುಡಿ

info.varthaman@gmail.com



ಮಹಿಳಾ ಮೀಸಲಾತಿ ಮಸೂದೆ ವಿಫಲ: ಕಾಂಗ್ರೆಸ್ ವಿರುದ್ಧ ಜೆಡಿಎಸ್ ಪ್ರತಿಭಟನೆ — ಪುಟ ಸಂ. 2



ವರ್ಷದಲ್ಲಿ ಪತ್ರಿಕಾ ಭವನ ನಿರ್ಮಾಣ ಪೂರ್ಣ: ಸಿ.ಪಿ.ವೈ — ಪುಟ ಸಂ. 3



ವಿದ್ಯಾರ್ಥಿಗಳು ಕೆ–ಸಿಇಟಿ, ಜೆಇಇ, ನೀಟ್ ಪರೀಕ್ಷೆಗಳಿಗೆ ಸಿದ್ಧ: ಕೆ.ಶೇಷಾದ್ರಿ — ಪುಟ ಸಂ. 4

9742504916 ಮೈಸೂರು ಮಂಡ್ಯ ಬೆಂಗಳೂರು ಹಾಸನ ಚಾಮರಾಜನಗರ ರಾಮನಗರ ಬೆಂಗಳೂರು ಗ್ರಾಮಾಂತರ ಕೊಡಗು ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್
VARTHAMAN Volume: 69 Issue: 152 Pages: 06 KA/SK/MYS/1098/2023-2025 R.N.I. No.3577/1957 www.varthaman.in Price-3


## ತೃತೀಯ ಭಾಷೆಗೆ ಗ್ರೇಡ್: ಹೈಕೋರ್ಟ್ 'ಬ್ರೇಕ್'

### ಈ ವರ್ಷ ಅಂಕವನ್ನೇ ನೀಡಲು ರಾಜ್ಯ ಸರ್ಕಾರಕ್ಕೆ ಕೋರ್ಟ್ ಆದೇಶ

**ಬೆಂಗಳೂರು:** ಹಿಂದಿಗೆ ಗ್ರೇಡ್ ನೀಡುವ ಸರ್ಕಾರದ ನಿರ್ಧಾರಕ್ಕೆ ಹೈಕೋರ್ಟ್ ಬ್ರೇಕ್ ಹಾಕಿದೆ. ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹಿಂದಿ ಸೇರಿದಂತೆ ತೃತೀಯ ಭಾಷೆಗೆ ಈ ವರ್ಷ ಗ್ರೇಡ್ ನೀಡುವುದು ಬೇಡ. ಅಂಕವನ್ನೇ ನೀಡಿ ಎಂದು ಸರ್ಕಾರಕ್ಕೆ ಹೈಕೋರ್ಟ್ ಆದೇಶಿಸಿದೆ.

ತೃತೀಯ ಭಾಷೆಗೆ ಅಂಕದ ಬದಲು ಗ್ರೇಡ್ ನೀಡುವ ಸಂಬಂಧ ಅರ್ಜಿ ವಿಚಾರಣೆ ನಡೆಸಿದ ಹೈಕೋರ್ಟ್, ಈ ವರ್ಷ ಹಳೆ ಪದ್ಧತಿಯನ್ನೇ ಮುಂದುವರಿಸುವಂತೆ ಮಂಗಳವಾರ ಆದೇಶ ನೀಡಿದೆ.

2025–26ನೇ ಸಾಲಿನ ಎಸ್‌ಎಸ್‌ಎಲ್‌ಸಿ ಮೂರನೇ ಭಾಷಾ ಪರೀಕ್ಷೆಯ ಉತ್ತರಪತ್ರಿಕೆಗಳನ್ನು ಮೌಲ್ಯಮಾಪನ ಮಾಡುವಂತೆ ರಾಜ್ಯ ಸರ್ಕಾರಕ್ಕೆ ಏಪ್ರಿಲ್ 15ರಂದು ನೀಡಿದ್ದ ಆದೇಶದಲ್ಲಿ ಹಸ್ತಕ್ಷೇಪ ಮಾಡಲು ಹೈಕೋರ್ಟ್ ನಿರಾಕರಿಸಿದೆ. ರಾಜ್ಯ ಸರ್ಕಾರ ಪ್ರಸ್ತಾಪಿಸಿದ್ದ ಗ್ರೇಡಿಂಗ್ ಪದ್ಧತಿಗೆ ಬದಲಾವಣೆ ಮಾಡುವ ಬೇಡಿಕೆಯನ್ನು ನ್ಯಾಯಾಲಯ ತಳ್ಳಿ ಹಾಕಿ ತನ್ನ ಆದೇಶದ ಯಥಾಸ್ಥಿತಿ ಕಾಯ್ದುಕೊಂಡಿದೆ. ಪರೀಕ್ಷೆಯ ಪ್ರಕಟಣೆಗೂ ಮುನ್ನ ಜಾರಿಯಲ್ಲಿದ್ದ ನಿಯಮಾವಳಿಗಳ ಪ್ರಕಾರ ಮೌಲ್ಯಮಾಪನ ವ್ಯವಸ್ಥೆಯನ್ನು ಮುಂದುವರಿಸುವುದು ಸರ್ಕಾರದ ಕರ್ತವ್ಯ. ಪುಟ 2ಕ್ಕೆ



### ಎಲ್ಲರೂ ಪಾಸ್; ಕೇಳಲು ಚಂದ!

**ಬೆಂಗಳೂರು:** ಹಿಂದಿಗೆ ಗ್ರೇಡ್ ನೀಡುವ ವಿಚಾರದಲ್ಲಿ ಸರ್ಕಾರದ ಪರ ಎಜಿ ಶಶಿಕಿರಣ್ ಶೆಟ್ಟಿ ವಾದ ಮಂಡಿಸಿದರು. ಎಸ್‌ಎಸ್‌ಎಲ್‌ಸಿ ಪರೀಕ್ಷೆ ನಡೆಸುವ ಸಂಬಂಧ 2025ರ ಅಕ್ಟೋಬರ್ 28ರಂದು ಸುತ್ತೋಲೆ ಹೊರಡಿಸಲಾಗಿದೆ. ಬಳಿಕ 2026ರ ಮಾರ್ಚ್ 18ರಿಂದ ಏಪ್ರಿಲ್ 2 ರವರೆಗೆ ಪರೀಕ್ಷೆ ನಡೆದಿದೆ. ಆದರೆ, ಪತ್ರಿಕೆಗಳ ವರದಿ ಆಧಾರದ ಮೇಲೆ ಅರ್ಜಿ ವಜಾ ಆಗಿದೆ ಎಂದು ವಾದಿಸಿದರು. ನ್ಯಾಯಮೂರ್ತಿಗಳಾದ ಇಂದಿರೇಶ್, ನಿಮ್ಮ ಅಧಿಸೂಚನೆಯ ಪುಟ 2ಕ್ಕೆ

## ಡಿಜಿಪಿಗೆ ಎಸ್‌ಪಿ ಪತ್ರ: ವರದಿ ನೀಡಲು ಸೂಚನೆ



**ಬೆಂಗಳೂರು:** ಡಿಸಿಆರ್‌ಇ ಇನ್‌ಸ್ಪೆಕ್ಟರ್‌ಗೆ ಮೇಲಧಿಕಾರಿಗಳ ಕಿರುಕುಳ ಆರೋಪ ಮತ್ತು ಮಂಗಳೂರು ನಗರ ಪೊಲೀಸ್ ಕಮಿಷನರ್ ವಿರುದ್ಧ ಡಿಜಿಪಿಗೆ ಎಸ್‌ಪಿ ಪತ್ರ ಬರೆದಿರುವ ಕುರಿತು ವರದಿ ನೀಡುವಂತೆ ಸೂಚನೆ ನೀಡಿದ್ದೇನೆ ಎಂದು ಗೃಹ ಸಚಿವ ಪರಮೇಶ್ವರ್ ಹೇಳಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮಾಧ್ಯಮಗಳಲ್ಲಿ ವರದಿ ಆಗಿರುವುದನ್ನು ಗಮನಿಸಿದ್ದೇನೆ. ಡಿಸಿಆರ್‌ಇ ಇನ್‌ಸ್ಪೆಕ್ಟರ್ ಶ್ರೀನಿವಾಸ್ ಸಾಕಷ್ಟು ಆರೋಪಗಳನ್ನು ಮಾಡಿದ್ದಾರೆ. ಈ ಸಂಬಂಧ ಎಸ್‌ಪಿ ಕಾಶಿನಾಥ್ ಪತ್ರ ಬರೆದಿದ್ದಾರೆ ಎಂದರು. ಈ ಎರಡು ಪ್ರಕರಣಗಳ ಕುರಿತು ಡಿಜಿಪಿ ಅವರಿಗೆ ವರದಿ ಕೇಳಿದ್ದೇನೆ. ವರದಿ ಬಳಿಕ ಸತ್ಯಾಸತ್ಯತೆಯನ್ನು ಆಧರಿಸಿ ಕ್ರಮ ತೆಗೆದುಕೊಳ್ಳಲಾಗುವುದು ಪುಟ 2ಕ್ಕೆ

## ಸತತ 21 ಗಂಟೆ ಕಾಲ ನಲಪಾಡ್‌ಗೆ 'ಇಡಿ ಡ್ರಿಲ್'

**ಬೆಂಗಳೂರು:** ಬಿಟ್ ಕಾಯಿನ್ ಹಗರಣ ಪ್ರಕರಣದಲ್ಲಿ ಕಾಂಗ್ರೆಸ್ ಮುಖಂಡ ಮೊಹಮ್ಮದ್ ನಲಪಾಡ್ ಮನೆ ಮೇಲೆ ದಾಳಿ ನಡೆಸಿದ್ದ ಜಾರಿ ನಿರ್ದೇಶನಾಲಯ ಸತತ 21 ಗಂಟೆ ಕಾಲ ನಲಪಾಡ್ ನಿವಾಸದಲ್ಲಿ ಶೋಧ ಕಾರ್ಯ ನಡೆಸಿದೆ. ಈ ವೇಳೆ ಹಾರ್ಡ್ಡಿಸ್ಕ್, ವಿದೇಶಿ ವ್ಯವಹಾರದ ಬ್ಯಾಂಕ್ ದಾಖಲೆಗಳನ್ನು ವಶಕ್ಕೆ ಪಡೆದುಕೊಂಡಿದೆ. ಪುಟ 2ಕ್ಕೆ

## ಸಿಎಂಗೆ ಮಾಟ–ಮಂತ್ರ ಮಾಡಿಸಿರಬಹುದೇ?: ರಾಜಣ್ಣ



**ಬೆಂಗಳೂರು:** ಮುಖ್ಯಮಂತ್ರಿ ಸಿದ್ದರಾಮಯ್ಯ ಅಸಹಾಯಕರಾಗಿ ಕಾಣುತ್ತಿದ್ದಾರೆ. ಅಗಾಧ ಶಕ್ತಿ ಇರುವ ಅವರನ್ನು ಇಂತಹ ಸ್ಥಿತಿಯಲ್ಲಿ ನಾನು ಎಂದಿಗೂ ನೋಡಿರಲಿಲ್ಲ. ಇದೆಲ್ಲವನ್ನೂ ನೋಡಿದರೆ ಯಾರಾದರೂ ಸಿಎಂ ವಿರುದ್ಧ ಮಾಟ–ಮಂತ್ರ ಮಾಡಿಸಿದ್ದಾರೆಯೇ ಎಂಬ ಆಲೋಚನೆ ಬರುತ್ತದೆ ಎಂದು ಮಾಜಿ ಸಚಿವ ಕೆ.ಎನ್.ರಾಜಣ್ಣ ಮತ್ತೊಂದು ದಾಳ ಉರುಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಪುಟ 2ಕ್ಕೆ

## ಮೇಕೆದಾಟುಗೆ ಡಿಪಿಆರ್: ಡಿಕೆಶಿ



**ಪಿರಿಯಾಪಟ್ಟಣ:** ಮೇಕೆದಾಟು ವಿಚಾರದಲ್ಲಿ ಕಾಂಗ್ರೆಸ್ ಹೋರಾಟಕ್ಕೆ ಜಯ ಸಿಕ್ಕಿದೆ. ಹತ್ತು ದಿನದೊಳಗೆ ಕೇಂದ್ರಕ್ಕೆ ಯೋಜನೆಯ ಡಿಪಿಆರ್ ಸಲ್ಲಿಸಲಿದ್ದೇವೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದರು.

ಪಿರಿಯಾಪಟ್ಟಣದಲ್ಲಿ ಮಂಗಳವಾರ 419 ಕೋಟಿ ರೂ. ವೆಚ್ಚದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಂಕುಸ್ಥಾಪನೆ ಪುಟ 2ಕ್ಕೆ

## ಮೋದಿ ವಿರುದ್ಧ ಖರ್ಗೆ ವಿವಾದಿತ ಹೇಳಿಕೆ

**ಚೆನ್ನೈ:** ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಪ್ರಧಾನಿ ನರೇಂದ್ರ ಮೋದಿ ಅವರನ್ನು ಭಯೋತ್ಪಾದಕ ಎಂದು ಟೀಕಿಸುವ ಮೂಲಕ ವಿವಾದಿತ ಹೇಳಿಕೆ ನೀಡಿದ್ದಾರೆ.

ತಮಿಳುನಾಡಿನಲ್ಲಿ ಚುನಾವಣಾ ಪ್ರಚಾರದ ಕೊನೆಯ ದಿನವಾದ ಮಂಗಳವಾರ ಚೆನ್ನೈನಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಟೆರರಿಸ್ಟ್ ಪ್ರಧಾನಿ ಮೋದಿ ಅವರೊಂದಿಗೆ ಎಐಎಡಿಎಂಕೆ ಕೈಜೋಡಿಸಿರುವುದು ನಿಜಕ್ಕೂ ವಿಷಾದನೀಯ ಎಂದು ಹೇಳಿದರು. ಪುಟ 2ಕ್ಕೆ



## ಆಕ್ಸಿಜನ್ ದುರಂತ: ಸಂತ್ರಸ್ತರಿಗೆ ನೇಮಕಾತಿ ಪತ್ರ ವಿತರಿಸಿದ ಸಿಎಂ

**ಗುಂಡ್ಲುಪೇಟೆ:** ಐದು ವರ್ಷಗಳ ಹಿಂದೆ ಕೋವಿಡ್ ಸಂದರ್ಭದಲ್ಲಿ ನಗರದ ಜಿಲ್ಲಾ ಆಸ್ಪತ್ರೆಯಲ್ಲಿ ಆಮ್ಲಜನಕ ಕೊರತೆಯಿಂದ ಮೃತಪಟ್ಟವರ ಕುಟುಂಬಗಳ ಸದಸ್ಯರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸರ್ಕಾರಿ ಹುದ್ದೆಗಳ ನೇಮಕಾತಿ ಪತ್ರ ವಿತರಿಸಿದರು.

ಪಟ್ಟಣದ ದೇವರಾಜ ಅರಸು ಕ್ರೀಡಾಂಗಣದಲ್ಲಿ ಮಂಗಳವಾರ ತಾಲ್ಲೂಕಿನ 110 ಕೆರೆಗಳಿಗೆ ನೀರು ತುಂಬಿಸುವ ಯೋಜನೆಗೆ ಚಾಲನೆ ನೀಡುವ ಕಾರ್ಯಕ್ರಮದಲ್ಲಿ 25 ಮಂದಿಗೆ ನೇಮಕಾತಿ ಪತ್ರಗಳನ್ನು ಹಸ್ತಾಂತರ ಮಾಡಿದರು. ಸಂತ್ರಸ್ತರಿಗೆ ಚಾಮರಾಜನಗರ ವೈದ್ಯಕೀಯ ವಿಜ್ಞಾನ ಸಂಸ್ಥೆಗಳ ಬೋಧನಾ ಆಸ್ಪತ್ರೆಯಲ್ಲಿ (ಸಿಮ್ಸ್) ವಿವಿಧ ವೃಂದದ ಉದ್ಯೋಗಗಳನ್ನು ನೀಡಲಾಗಿದೆ.

2021, ಮೇ 2ರಂದು ಜಿಲ್ಲಾ ಕೋವಿಡ್ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲಾಗಿದ್ದ 34 ಮಂದಿ ಆಮ್ಲಜನಕ ಸಿಗದೆ ಧಾರುಣವಾಗಿ ಮೃತಪಟ್ಟಿದ್ದರು. ದುರ್ಘಟನೆ ನಡೆದಾಗ ಬಿಜೆಪಿ ಸರ್ಕಾರ ಅಧಿಕಾರದಲ್ಲಿತ್ತು. ಭಾರತ್ ಜೋಡೋ ಪಾದಯಾತ್ರೆ ಸಂದರ್ಭ ರಾಹುಲ್ ಗಾಂಧಿ ಹಾಗೂ ಡಿ.ಕೆ.ಶಿವಕುಮಾರ್ ಆಕ್ಸಿಜನ್ ದುರಂತದಲ್ಲಿ ಪುಟ 2ಕ್ಕೆ

### ಕೈ ನಾಯಕರ ಗುರಿಯಾಗಿಸಿ ಇಡಿ ದಾಳಿ: ಸಿದ್ದರಾಮಯ್ಯ

**ಗುಂಡ್ಲುಪೇಟೆ:** ಕಾಂಗ್ರೆಸ್ ನಾಯಕರನ್ನು ಗುರಿಯಾಗಿಸಿಕೊಂಡು ಕೇಂದ್ರ ಸರ್ಕಾರ ಇ.ಡಿ ದಾಳಿ ನಡೆಸುತ್ತಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ವಾಗ್ದಾಳಿ ನಡೆಸಿದರು.

ಗುಂಡ್ಲುಪೇಟೆ ತಾಲ್ಲೂಕಿನಲ್ಲಿ 110 ಕೆರೆಗಳನ್ನು ತುಂಬಿಸುವ ಯೋಜನೆಗೆ ಚಾಲನೆ ನೀಡಲು ಮಂಗಳವಾರ ಆಗಮಿಸಿದ ವೇಳೆ ಹೆಲಿಪ್ಯಾಡ್‌ನಲ್ಲಿ ಮಾಧ್ಯಮ ಪ್ರತಿನಿಧಿಗಳ ಜತೆ ಮಾತನಾಡಿದ ಸಿಎಂ, ಬಿಜೆಪಿ ನಾಯಕರ ನಾಯಕರ ಮೇಲೆ ಇಡಿ ದಾಳಿ ನಡೆಸುವುದಿಲ್ಲ ಏಕೆ ಎಂದು ಪ್ರಶ್ನಿಸಿದರು.

ಅಂದು ಕಾಂಗ್ರೆಸ್‌ನ ಗ್ಯಾರಂಟಿ ಕಾರ್ಯಕ್ರಮಗಳನ್ನು ವಿರೋಧ ಮಾಡಿದ್ದ ಬಿಜೆಪಿ ಇಂದು ಚುನಾವಣೆ ಗೆಲ್ಲಲು ಗ್ಯಾರಂಟಿ ಯೋಜನೆಗಳನ್ನು ಘೋಷಿಸುತ್ತಿದೆ. ಗ್ಯಾರಂಟಿ ಯೋಜನೆಗಳ ಮಹತ್ವ ಬಿಜೆಪಿಗೆ ಅರಿವಾದಂತಿದೆ ಎಂದು ವ್ಯಂಗ್ಯವಾಡಿದರು. ಪುಟ 2ಕ್ಕೆ

## ನಾನೇಕೆ ಜೆಡಿಎಸ್‌ಗೆ ಹೋಗಲಿ?

### ನನಗೆ ಕಾಂಗ್ರೆಸ್ ಏನು ಕಡಿಮೆ ಮಾಡಿದೆ | ಸಚಿವ ಜಮೀರ್ ಪ್ರಶ್ನೆ

**ಬೆಂಗಳೂರು:** ನನಗೆ ಕಾಂಗ್ರೆಸ್ ಯಾವುದೇ ಕಡಿಮೆ ಮಾಡಿಲ್ಲ. ಆದರೂ ನಾನು ಯಾಕೆ ಜೆಡಿಎಸ್‌ಗೆ ಹೋಗಲಿ. ನಾನು ಜೆಡಿಎಸ್‌ಗೆ ಹೋಗುತ್ತೇನೆ ಅನ್ನೋದು ಊಹಾಪೋಹ ಎಂದು ಸಚಿವ ಜಮೀರ್ ಅಹ್ಮದ್ ಸ್ಪಷ್ಟಪಡಿಸಿದರು.

ಜಮೀರ್ ಜೆಡಿಎಸ್‌ಗೆ ಹೋಗುತ್ತಾರೆ, ಕುಮಾರಸ್ವಾಮಿ ಜೊತೆ ರಹಸ್ಯ ಮಾತುಕತೆ ಮಾಡಿದ್ದಾರೆ ಎಂಬ ವಿಚಾರಕ್ಕೆ ಬೆಂಗಳೂರಿನಲ್ಲಿ ಮಾಧ್ಯಮಗಳಿಗೆ ಮಂಗಳವಾರ ಪ್ರತಿಕ್ರಿಯೆ ನೀಡಿದ ಅವರು, ಥೂ... ಥೂ... ನಾನು ಯಾಕೆ ಜೆಡಿಎಸ್‌ಗೆ ಹೋಗಲಿ. ಇದೆಲ್ಲ ಊಹಾಪೋಹ ಸುದ್ದಿ ಎಂದರು.

ನಾನು ಜೆಡಿಎಸ್ ಬಿಟ್ಟು ಬಂದು ಮತ್ತೆ ಯಾಕೆ ಹೋಗಲಿ? ಕಾಂಗ್ರೆಸ್ ಪಕ್ಷ ನನಗೇನು ಕಡಿಮೆ ಮಾಡಿದೆ? 2017ರಲ್ಲಿ ನಾನು ಕಾಂಗ್ರೆಸ್‌ಗೆ ಬಂದೆ. 2018ರಲ್ಲಿ ಸಮ್ಮಿಶ್ರ ಸರ್ಕಾರದಲ್ಲಿ ಕುಮಾರಸ್ವಾಮಿ ಸಿಎಂ ಆಗಿದ್ದರು. ನಿರೀಕ್ಷೆ ಕೂಡಾ ಮಾಡಿರಲಿಲ್ಲ, ಯಾರನ್ನೂ ಕೇಳಿರಲಿಲ್ಲ ಆಗಲೇ ಮಂತ್ರಿ ಮಾಡಿದರು. 5 ಖಾತೆಗಳನ್ನ ಕೊಟ್ಟಿದ್ದರು. ಜೆಡಿಎಸ್‌ನಲ್ಲಿ ಕುಮಾರಸ್ವಾಮಿ ಸಿಎಂ ಆಗಿದ್ದಾಗ ವಕ್ಫ್ ಖಾತೆ ಮಾತ್ರ ಕೊಟ್ಟಿದ್ದರು. ಕಾಂಗ್ರೆಸ್ ಅವರು 5 ಖಾತೆ ಕೊಟ್ಟಿದ್ದರು. ಈಗ 2023ರಲ್ಲಿ 4 ಖಾತೆ ಕೊಟ್ಟಿದ್ದಾರೆ. ಕಾಂಗ್ರೆಸ್ ನನಗೇನು ಪುಟ 2ಕ್ಕೆ



### ಸಿದ್ದು ಈಗಲೂ ಟಗರು!

ಸಿದ್ದರಾಮಯ್ಯ ಈಗಲೂ ಟಗರು. ಅವರು ಮಾತಾಡಿದರೆ ಸೌಂಡ್ ಬೇರೆ ತರಹ ಇರುತ್ತದೆ. ಮುಂಚೆ ಹೇಗಿದ್ರೋ ಈಗಲೂ ಹಾಗೇ ಇದ್ದಾರೆ. ಅಗತ್ಯ ಇದ್ದರೆ ಸಿದ್ದರಾಮಯ್ಯ ಮಾತಾಡುತ್ತಾರೆ. ಸುಮ್ಮನೆ ಮಾತಾಡೋಕೆ ಆಗುತ್ತಾ ಎಂದು ಸಚಿವ ಜಮೀರ್ ಅಹ್ಮದ್ ಪ್ರಶ್ನಿಸಿದರು.

ಸಿದ್ದರಾಮಯ್ಯ ಅಸಹಾಯಕರಾಗಿದ್ದಾರೆ ಎಂಬ ಮಾಜಿ ಸಚಿವ ರಾಜಣ್ಣ ಹೇಳಿಕೆಗೆ ಬೆಂಗಳೂರಿನಲ್ಲಿ ಪುಟ 2ಕ್ಕೆ

## ಮಂಡ್ಯ: ಬಾಲ ಗರ್ಭಿಣಿಯರಿಗೆ ಭ್ರೂಣಲಿಂಗ ಪತ್ತೆಗೆ ಸ್ಕ್ಯಾನಿಂಗ್

### ಲೋಕಾಯುಕ್ತ ವರದಿಯಲ್ಲಿ ರಾಜ್ಯ ಸರ್ಕಾರಕ್ಕೆ ಮಾಹಿತಿ

**ಮೈಸೂರು:** ಮಂಡ್ಯ ಜಿಲ್ಲೆಯ ಕೆ.ಆರ್.ಪೇಟೆಯ ಎರಡು ಖಾಸಗಿ ಡಯಾಗ್ನಾಸ್ಟಿಕ್ ಕೇಂದ್ರಗಳಲ್ಲಿ ಲೋಕಾಯುಕ್ತ ಅಧಿಕಾರಿಗಳು ದಾಳಿ ನಡೆಸಿದ ಸಂದರ್ಭ ಬಾಲ ಗರ್ಭಿಣಿಯರಿಗೆ ಭ್ರೂಣಲಿಂಗ ಪತ್ತೆಗಾಗಿ ಸ್ಕ್ಯಾನಿಂಗ್ ಮಾಡಿರುವುದು ಸೇರಿದಂತೆ ಹಲವು ಗಂಭೀರ ಅಕ್ರಮಗಳು ಬೆಳಕಿಗೆ ಬಂದಿವೆ ಎಂದು ಲೋಕಾಯುಕ್ತ ವರದಿ ತಿಳಿಸಿದೆ.

ಲೋಕಾಯುಕ್ತ ಅಧಿಕಾರಿಗಳ ತಂಡಗಳು ಕಳೆದ ಎರಡು ದಿನಗಳಲ್ಲಿ ಹಲವು ತಾಲ್ಲೂಕು ಆಸ್ಪತ್ರೆಗಳು ಮತ್ತು ಜಿಲ್ಲೆಯಾದ್ಯಂತ ಖಾಸಗಿ ಡಯಾಗ್ನಾಸ್ಟಿಕ್ ಸೆಂಟರ್ ಮೇಲೆ ದಾಳಿ ನಡೆಸಿ ಮಾಹಿತಿ ಸಂಗ್ರಹಿಸಿದ್ದಾರೆ. ಬಾಲ ಗರ್ಭಿಣಿಯರಿಗೆ ನಿಯಮ ಬಾಹಿರವಾಗಿ ಸ್ಕ್ಯಾನಿಂಗ್ ಮಾಡಿರುವ ಆರೋಪ ಕೇಳಿಬಂದಿದೆ.

ಗರ್ಭಧಾರಣೆ ಪೂರ್ವ ಮತ್ತು ಪ್ರಸವಪೂರ್ವ ರೋಗ ನಿರ್ಣಯ ತಂತ್ರಗಳು ಕಾಯ್ದೆಯ ವಿಶೇಷವಾಗಿ ಪ್ರತಿ 90



ದಿನಗಳಿಗೊಮ್ಮೆ ಸ್ಕ್ಯಾನಿಂಗ್ ಕೇಂದ್ರಗಳ ಮೇಲ್ವಿಚಾರಣೆಯನ್ನು ಕಡ್ಡಾಯಗೊಳಿಸುವ ಸೆಕ್ಷನ್ 8(1) ರ ಸ್ಪಷ್ಟ ಉಲ್ಲಂಘನೆಗಳನ್ನು ವರದಿಯಲ್ಲಿ ಉಲ್ಲೇಖಿಸಲಾಗಿದೆ. ಪುಟ 2ಕ್ಕೆ

## ಇನ್ನೂ 7 ದಿನ ತಾಪಮಾನ ಹೆಚ್ಚಳ, ಬಿಸಿಗಾಳಿ ಸಾಧ್ಯತೆ

**ಬೆಂಗಳೂರು:** ರಾಜ್ಯದ ವಿವಿಧೆಡೆ ಮುಂದಿನ 7 ದಿನ ತಾಪಮಾನ ಮತ್ತಷ್ಟು ಏರಿಕೆಯಾಗುವ ಜೊತೆಗೆ ಬಿಸಿ ಗಾಳಿ ಬೀಸುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಏಪ್ರಿಲ್ 21ರಿಂದ 27ರವರೆಗೆ ಉತ್ತರ ಒಳನಾಡಿನ ಬೀದರ್, ಕಲಬುರಗಿ, ಯಾದಗಿರಿ, ರಾಯಚೂರು, ವಿಜಯಪುರ, ಗದಗ, ಧಾರವಾಡ, ಬಾಗಲಕೋಟೆ ಮತ್ತು ಕೊಪ್ಪಳ, ಕರಾವಳಿಯ ದಕ್ಷಿಣ ಕನ್ನಡ, ಉಡುಪಿ ಹಾಗೂ ಉತ್ತರ ಕನ್ನಡ ಜಿಲ್ಲೆಯ ಸೇರಿದಂತೆ ಹಲವು ಜಿಲ್ಲೆಗಳಲ್ಲಿ ಬಿಸಿ ಗಾಳಿ ಬೀಸಲಿದೆ ಎಂದು ಇಲಾಖೆ ತಿಳಿಸಿದೆ.

ಬಿಸಿಲಿನಿಂದ ತೇವಾಂಶ ಹೆಚ್ಚಾಗುವುದರಿಂದ ರಾಜ್ಯದಾದ್ಯಂತ ಅಲ್ಲಲ್ಲಿ ಗುಡುಗು, ಸಿಡಿಲು ಸಹಿತ ಜೋರಾದ ಗಾಳಿಯೊಂದಿಗೆ ಸಾಧಾರಣ ಮಳೆಯಾಗುವ ಮುನ್ಸೂಚನೆ ಕೂಡ ನೀಡಿದೆ. ಜೊತೆಗೆ ಬಿಸಿಗಾಳಿ ಅಥವಾ ವಿಪರೀತ ತಾಪಮಾನದಿಂದ ನಿಮ್ಮನ್ನು ರಕ್ಷಿಸಲು ಸಾರ್ವಜನಿಕ ಜಾಗೃತಿ ಪುಟ 2ಕ್ಕೆ

## ಎಚ್‌ಡಿಕೆ ದೊಡ್ಡ ವ್ಯಕ್ತಿ, ಆದರೆ ನನಗೂ ಅನುಭವವಿದೆ: ಡಿಸಿಎಂ ಡಿ.ಕೆ.ಶಿವಕುಮಾರ್

**ಬೆಂಗಳೂರು:** ಪ್ರಜಾಪ್ರಭುತ್ವ ವ್ಯವಸ್ಥೆಗೆ ಅನುಗುಣವಾಗಿ ವಿರೋಧ ಪಕ್ಷದ ಶಾಸಕರು, ಸಾರ್ವಜನಿಕರನ್ನು ವಿಶ್ವಾಸಕ್ಕೆ ಪಡೆದು ಜಿಬಿಎ ಪಾಲಿಕೆಗಳು ಹಾಗೂ ವಾರ್ಡ್ ಗಳ ಮರುವಿಂಗಡಣೆ ಮಾಡಲಾಗಿದೆ. ಆದರೆ ಈ ಬಗ್ಗೆ ಎಚ್.ಡಿ.ಕುಮಾರಸ್ವಾಮಿ ಅವರಿಗೆ ಅರಿವಿಲ್ಲ. ಬೇಕಿದ್ದರೇ ಅವರ ಶಾಸಕರನ್ನೇ ಕೇಳಿ ತಿಳಿದುಕೊಳ್ಳಲಿ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ತಿರುಗೇಟು ನೀಡಿದರು.

ಸದಾಶಿವನಗರ ನಿವಾಸದ ಬಳಿ ಮಾಧ್ಯಮಗಳ ಪ್ರಶ್ನೆಗಳಿಗೆ ಡಿಕೆಶಿ ಮಂಗಳವಾರ ಪ್ರತಿಕ್ರಿಯೆ ನೀಡಿದರು.ಬೆಂಗಳೂರು ಪಾಲಿಕೆಗಳ ವಾರ್ಡ್ ಮರುವಿಂಗಡಣೆ ಬಗ್ಗೆ ಯಾರೊಂದಿಗೂ ಚರ್ಚೆ ನಡೆಸಿಲ್ಲ ಎಂದು ಕುಮಾರಸ್ವಾಮಿ ಮಾಡಿರುವ



ಆರೋಪದ ಬಗ್ಗೆ ಕೇಳಿದಾಗ, ಬೆಂಗಳೂರು ವಾರ್ಡ್ ಗಳ ಮರುವಿಂಗಡಣೆ ವೇಳೆ ಎಲ್ಲಾ ಪಕ್ಷದ ಶಾಸಕರನ್ನು ಒಳಗೊಂಡ ಸಮಿತಿ ರಚಿಸಲಾಗಿತ್ತು. ಅವರ ಪಕ್ಷದ ಶಾಸಕರು ಸಮಿತಿಯ ಭಾಗವಾಗಿದ್ದರು. ಜೆಡಿಎಸ್ ಹಾಗೂ ಬಿಜೆಪಿ ಶಾಸಕರ ಜತೆ ಚರ್ಚೆ ಮಾಡಿ, ಪುಟ 2ಕ್ಕೆ

## ಫಲಿತಾಂಶ ಬಳಿಕ ಅಮಾನತು ವಾಪಸ್: ಸಚಿವ ಜಾರಕಿಹೊಳಿ

**ಮೈಸೂರು:** ದಾವಣಗೆರೆ ಉಪಚುನಾವಣೆ ಫಲಿತಾಂಶದ ಬಳಿಕ ಮುಸ್ಲಿಂ ಮುಖಂಡರ ಅಮಾನತು ಆದೇಶ ವಾಪಸ್ ಆಗಬಹುದು ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಅಭಿಪ್ರಾಯಪಟ್ಟರು.



ಪಿರಿಯಾಪಟ್ಟಣ ತಾಲ್ಲೂಕು ಕ್ರೀಡಾಂಗಣದ ಹೆಲಿಪ್ಯಾಡ್‌ನಲ್ಲಿ ಮಂಗಳವಾರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಜಬ್ಬಾರ್ ಸೇರಿದಂತೆ ಕೇವಲ ಅಲ್ಪಸಂಖ್ಯಾತ ನಾಯಕರ ಮೇಲಿನ ಕ್ರಮವು ಮುಸ್ಲಿಂ ಮತಗಳ ಮೇಲೆ ಖಂಡಿತ ಪರಿಣಾಮ ಬೀರಲಿದೆ. ಈ ಕಾರಣಕ್ಕೆ ನಾವೆಲ್ಲ ಮಧ್ಯಸ್ಥಿಕೆ ವಹಿಸಿದ್ದೇವೆ. ಈ ಹಿಂದೆಯೂ ಹೀಗೆ ಅಮಾನತು ಆಗಿದ್ದವರು ಪಕ್ಷಕ್ಕೆ ವಾಪಸ್ ಆಗಿದ್ದಾರೆ. ಜಬ್ಬಾರ್ ಕೂಡ ಮರಳಬಹುದು. ಸದ್ಯ ಅವರನ್ನು ಹೊರತುಪಡಿಸಿ ಉಳಿದ ಯಾರ ಮೇಲೂ ಕ್ರಮ ಕೈಗೊಂಡಿಲ್ಲ ಎಂದು ಜಾರಕಿಹೊಳಿ ತಿಳಿಸಿದರು. ಪುಟ 2ಕ್ಕೆ

## ಬಿಟ್ ಕಾಯಿನ್ ಪ್ರಕರಣದ ಎಸ್‌ಐಟಿ ವರದಿ ಬಹಿರಂಗಕ್ಕೆ ಛಲವಾದಿ ಆಗ್ರಹ

**ಮೈಸೂರು:** ಸರ್ಕಾರ ಬಂದಾಗಿನಿಂದ ಒಂಭತ್ತು ಪ್ರಕರಣ ಎಸ್‌ಐಟಿಗೆ ನೀಡಿದ್ದು, ಇದರಲ್ಲಿ ಒಂದಾದ ಬಿಟ್ ಕಾಯಿನ್ ಪ್ರಕರಣವನ್ನು ವರದಿ ಸಲ್ಲಿಸಿ ವರ್ಷವಾದರ ಎಫ್‌ಐಆರ್ ಯಾಕೆ ದಾಖಲಿಸಿಲ್ಲ. ಎಸ್‌ಐಟಿ ಸಲ್ಲಿರುವ ವರದಿಯನ್ನು ಸರ್ಕಾರ ಬಹಿರಂಗ ಪಡಿಸಬೇಕೆಂದು ವಿಧಾನ ಪರಿಷತ್ ವಿರೋಧ ಪಕ್ಷದ ಛಲವಾದಿ ನಾರಾಯಣ ಸ್ವಾಮಿ ಹೇಳಿದರು.

ಬಿಜೆಪಿ ಕಚೇರಿಯಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಸರ್ಕಾರ ಬಂದೂ ಮೂರು ವರ್ಷ ಆಯಿತು. ಒಂಭತ್ತು ಪ್ರಕರಣಗಳ ತನಿಖೆಗೆ ಎಸ್ ಐಟಿಗೆ ನೀಡಿದೆ ಕೊರೊನಾ, ಶೇ.40ರಷ್ಟು ಪರ್ಸೆಂಟ್ ಲಂಚ ಎಲ್ಲವೂ ವರದಿಯಾಗಿವೆ. 8 ಪ್ರಕರಣ ಚಾರ್ಜ್ ಶಿಟ್ ಆಗಿದ್ದು, ಒಂಭತ್ತನೆಯ ಪ್ರಕರಣ ಬಿಟ್ ಕಾಯಿನ್ ಪ್ರಕರಣ ಆಗಿದೆ. ಈಗ ಬಿಟ್ ಕಾಯಿನ್ ಬಗ್ಗೆ ಇಡಿಗೆ ಮಾಹಿತಿ ಸಿಕ್ಕಿ 100ಕ್ಕೂ ಹೆಚ್ಚು ಅಧಿಕಾರಿಗಳು ಅನೇಕ ಕಡೆ ದಾಳಿ ಮಾಡಿದ್ದಾರೆ. ಶಾಸಕ ಪುತ್ರರ ಮೇಲೆ ದಾಳಿ ಮಾಡಿದ್ದಾರೆ. ಶ್ರೀಕಿ ಈ



ಪ್ರಕರಣದ ಪ್ರಮುಖ ಕಿಂಗ್ ಪಿನ್ ಆಗಿದ್ದಾರೆ. ಅವರು ಮನೆ ಮೇಲೂ ದಾಳಿ ಮಾಡಿದೆ. ಬಿಟ್ ಕಾಯಿನ್ ವರದಿ ಬಂದೂ ವರ್ಷ ಆಗಿದೆ. ಎಫ್ ಐಆರ್ ಯಾಕೆ ಮಾಡುತ್ತಿಲ್ಲ. ಈ ಪ್ರಕರಣದಲ್ಲಿ ಹೆಚ್ಚಾಗಿ ಕಾಂಗ್ರೆಸ್ ಇರುವ ಕಾರಣಕ್ಕೆ ಪ್ರಕರಣ ದಾಖಲಿಸುತ್ತಿಲ್ಲವೆ ಎಂದು ಹೇಳಿದರು. 2016–17ರಲ್ಲಿ ಸೆಮಿನಾರ್ ನಲ್ಲಿ ಬಹುಮುಖ್ಯ ವಾಗಿ ಬಿಟ್ ಕಾಯಿನ್ ಬಗ್ಗೆ ವಿಚಾರ ಸಂಕಿರಣವನ್ನು ನಡೆಸಿದರು. ಹೀಗಾಗಿ ಅಂದಿನ ಐಟಿ ಬಿಟಿ ಸಚಿವರಾದ ಪ್ರಿಯಾಂಕ ಖರ್ಗೆ ಸಂಪರ್ಕವೂ ಸೇರಿ ಎಲ್ಲಾ ಬಗ್ಗೆ ಸಂಪೂರ್ಣ ತನಿಖೆ ನಡೆಸಬೇಕಿದೆ. ಆಗ ಮಾತ್ರವೇ ಬಿಟ್ ಕಾಯಿನ್ ನಲ್ಲಿ ಯಾರೆಲ್ಲಾ ಇದ್ದಾರೆಂಬ ಮಾಹಿತಿ ಹೊರಬರಲಿದೆ. ಪುಟ 2ಕ್ಕೆ

### ಮುಂದಿನ ದಿನಗಳಲಿ ಹೋರಾಟ

ಮೈಸೂರು: ಮೋದಿಯನ್ನು ಭಯೋತ್ಪಾದಕ ಎಂದಿರುವ ಖರ್ಗೆ ಹೇಳಿಕೆ ಖಂಡನೀಯ. ಕಾಂಗ್ರೆಸ್ ಪಕ್ಷ ಟೆರರಿಸ್ಟ್ ಪಕ್ಷ ಆಗಿದೆ. ಅಂತಹವರಿಂದ ಇಂತಹ ಹೇಳಿಕೆ ಬರುತ್ತಿದೆ. ಮೈಸೂರಿನ ಉದಯಗಿರಿ ಠಾಣೆಗೆ ಸಿಬ್ಬಂದಿ ನೇಮಕ ವಿಚಾರದಲ್ಲಿ ಸರ್ಕಾರದ ನಿರಾಸಕ್ತಿ ಹಾಗೂ ಸ್ವಪಕ್ಷದ ಶಾಸಕ ಪತ್ರ ವಿಚಾರವಾಗಿ ಮುಂದಿನ ದಿನಗಳಲ್ಲಿ ಬಿಜೆಪಿ ಹೋರಾಟ ಮಾಡುವುದಾಗಿ ನಾರಾಯಣಸ್ವಾಮಿ ಹೇಳಿದರು. ಪುಟ 2ಕ್ಕೆ

## ಶಂಕರಮಠದಲ್ಲಿ ಸಂಭ್ರಮದ ಶಂಕರರ ರಥೋತ್ಸವ



**ಮೈಸೂರು:** 'ದೇಶದಲ್ಲಿ ಸನಾತನ ಹಿಂದೂ ಧರ್ಮದ ರಕ್ಷಣೆ ಮತ್ತು ತತ್ವ ಸಿದ್ಧಾಂತಗಳ ಪ್ರಚಾರಕ್ಕೆ ಹಗಲಿರುಳು ಶ್ರಮಿಸಿದ ಆದಿ ಶಂಕರಾಚಾರ್ಯರು ಸಹಸ್ರಾರು ವರ್ಷದ ಹಿಂದೆಯೇ 7ನೇ ಶತಮಾನದಲ್ಲಿ ಹಿಂದೂ ರಾಷ್ಟ್ರದ ಪ್ರಾತಃ ಸ್ಮರಣೀಯ ಆಚಾರ್ಯರಾಗಿ ವೇದ ಉಪನಿಷತ್ ಶಾಸ್ತ್ರ ಹಿಂದೂ ಧರ್ಮ ವನ್ನ ಪುನರ್ ಪ್ರತಿಪಾದಿಸಿದರು ಎಂದು ಶಾಸಕ ಟಿ.ಎಸ್.ಶ್ರೀವತ್ಸ ಹೇಳಿದರು.

ನಗರದ ಅಗ್ರಹಾರದಲ್ಲಿ ಮಂಗಳವಾರ ಅಭಿನವ ಶಂಕರ ನಿಲಯದ ಶಂಕರ ಮಠದಲ್ಲಿ ಶಂಕರಾಚಾರ್ಯರ ಜಯಂತ್ಯುತ್ಸವ ಅಂಗವಾಗಿ ಶಂಕರ ರಥೋತ್ಸವವು ಅಗ್ರಹಾರದ ಶಂಕರ ಮಠದ ರಸ್ತೆಯಿಂದ ಪ್ರಾರಂಭಗೊಂಡು ರಾಮಾನುಜ ರಸ್ತೆ ಹಾಗೂ ಉತ್ತರಾದಿ ಮಠ ರಸ್ತೆಯಲ್ಲಿ ನಾದಸ್ವರದೊಂದಿಗೆ ಶಂಕರರ ರಥೋತ್ಸವ ಸಾಗಿತು. ನಂತರ ಮಾತನಾಡಿದ ಅವರು, ಸಮಾಜದ ಕಟ್ಟಕಡೆಯ ವ್ಯಕ್ತಿಗಳನ್ನು ಪೂಜಿಸುವವನೆ ನಿಜವಾದ ಸನ್ಯಾಸಿಯಾಗುತ್ತಾನೆ ಅಂಥಾ ಮಹಾನ್ ಕಾರ್ಯವನ್ನು ಶಂಕರರು ಮಾಡಿದರು. ತಮ್ಮ 12ನೇ ವಯಸ್ಸಿನಲ್ಲಿಯೆ ಎಲ್ಲ ಶಾಸ್ತ್ರಗಳನ್ನು ಓದಿ ಕಾಲ್ನಡಿಗೆಯಲ್ಲಿಯೆ ದೇಶ ಸಂಚಾರ ಮಾಡಿ ಸಮಗ್ರ ಸನಾತನ ಹಿಂದೂ ಧರ್ಮವನ್ನು

ಮೊದಲ ಪುಟದಿಂದ

## ಶಂಕರರ ರಥೋತ್ಸವ

ಉಳಿಸಿ ಬೆಳೆಸಿದರು' ಎಂದರು. ಅಭಿನವ ಶಂಕರ್ ಆಲಯದ ಧರ್ಮಾಧಿಕಾರಿ ಎಚ್.ರಾಮಚಂದ್ರ, ಭಾಸ್ಕರ್,ಡಿ.ಟಿ.ಪ್ರಕಾಶ್ ,ಎಂ. ಆರ್.ಬಾಲಕೃಷ್ಣ, ಎನ್.ಎಂ.ನವೀನ್ ಕುಮಾರ್, ವಿಕ್ರಂ ಅಯ್ಯಂಗಾರ್, ವ್ಯವಸ್ಥಾಪಕ ಶೇಷಾದ್ರಿ, ಪಾರ್ಥನಾರಾಯಣ, ಡಾ.ಲಕ್ಷ್ಮಿ, ಸುಧೀಂದ್ರ, ಶ್ರೀನಿವಾಸ್ ಬಾಷ್ಯಂ, ಪ್ರಶಾಂತ್ ,ಅಚ್ಯುತ, ಅಜಯ್ ಶಾಸ್ತ್ರಿ, ಸತ್ಯನಾರಾಯಣ್ ,ವಾಸುದೇವಮೂರ್ತಿ,ಜಯಸಿಂಹ ,ರಂಗನಾಥ್, ಕಡಕೋಳ ಜಗದೀಶ್ ,ಕೇಬಲ್ ರಮೇಶ್ ಇನ್ನಿತರರು ಹಾಜರಿದ್ದರು.

## ನಾನೇಕೆ ಜೆಡಿಎಸ್‌ಗೆ ಹೋಗಲಿ?

ಕಡಿಮೆ ಮಾಡಿದೆ ಜೆಡಿಎಸ್‌ಗೆ ಹೋಗೋಕೆ ಎಂದು ಪ್ರಶ್ನಿಸಿದರು. 2018ರಲ್ಲಿ ನನಗಿಂತ ಸೀನಿಯರ್ ಇದ್ದರು. ಆದರೂ ನನ್ನನ್ನು ಮಂತ್ರಿ ಮಾಡಿದರು. ರಹಸ್ಯವಾಗಿ ನಾನು ಯಾಕೆ ಕುಮಾರಸ್ವಾಮಿ ಜೊತೆ ಮಾತಾಡಲಿ. ಅದು ಊಹಾಪೋಹ ಸುದ್ದಿ. ಪಕ್ಷ ವಿರೋಧಿ ಚಟುವಟಿಕೆ ಮಾಡಿದ್ದರೆ ಹೇಳಲಿ. ಅದು ಬಿಟ್ಟು ಅಡ್ಡ ಗೋಡೆ ಮೇಲೆ ದೀಪ ಇಟ್ಟರೆ ನಾನು ಏನು ಮಾಡಲಿ ಎಂದು ತಿಳಿಸಿದರು.

## ಸಿದ್ದು ಈಗಲೂ ಟಗರು!

ಪ್ರತಿಕ್ರಿಯೆ ನೀಡಿದ ಅವರು, ಕಾಂಗ್ರೆಸ್‌ನಲ್ಲಿ ಇರೋ ಎಲ್ಲರೂ ಸಿದ್ದರಾಮಯ್ಯಗೆ ಆಪ್ತರೇ. ಅವರು ನಮ್ಮ ಮುಖ್ಯಮಂತ್ರಿ. ಸಿದ್ದರಾಮಯ್ಯ ಈಗ ಸೈಲೆಂಟ್ ಇರಬಹುದು. ಆದರೆ ಅವರು ಮಾತಾಡಿದರೆ ಅದು ಬೇರೆ ತರಹ ಸೌಂಡ್ ಆಗುತ್ತದೆ. ಈಗ ಮಾತಾಡುವ ಅಗತ್ಯ ಇಲ್ಲ. ಅಗತ್ಯ ಬಂದಾಗ ಮಾತನಾಡುತ್ತಾರೆ ಅಂತ ವಿರೋಧಿಗಳಿಗೆ ಟಾಂಗ್ ಕೊಟ್ಟರು.

## ಖರ್ಗೆ ವಿವಾದಿತ ಹೇಳಿಕೆ

ಮಹಿಳಾ ಮೀಸಲಾತಿ ಮಸೂದೆ ಮತ್ತು ಕ್ಷೇತ್ರ ಪುನರ್ ವಿಂಗಡಣೆ ಮಸೂದೆ ಮಂಡನೆಯಲ್ಲಿ ಬಿಜೆಪಿಯನ್ನು ಬೆಂಬಲಿಸಿದ್ದಕ್ಕಾಗಿ ಎಐಎಡಿಎಂಕೆಯನ್ನು ಟೀಕಿಸಿದರು. ಪ್ರಧಾನಿ ಮೋದಿ ಅವರನ್ನು 'ಸಮಾನತೆಯಲ್ಲಿ ನಂಬಿಕೆಯಿಲ್ಲದ ಭಯೋತ್ಪಾದಕ' ಎಂದು ಟೀಕಿಸಿದರು. ನಂತರ ಪ್ರಧಾನಿ ವಿರುದ್ಧ ಬಳಸಿದ ಪದಗಳ ಬಗ್ಗೆ ಪ್ರಶ್ನಿಸಿದಾಗ, ಖರ್ಗೆ ತಮ್ಮನ್ನು ತಾವು ಸಮರ್ಥಿಸಿಕೊಂಡರು. ಪ್ರಧಾನಿ ತಮ್ಮ ರಾಜಕೀಯ ವಿರೋಧಿಗಳನ್ನು, ಇಡಿ, ಸಿಬಿಐ, ಐಟಿ ಬಳಸುವ ಮೂಲಕ ಭಯಭೀತಗೊಳಿಸುತ್ತಿದ್ದಾರೆ ಎಂದು ಹೇಳುವುದು ನನ್ನ ಉದ್ದೇಶ. ಪ್ರಧಾನಿ ಮೋದಿ ಜನರನ್ನು ಮತ್ತು ರಾಜಕೀಯ ಪಕ್ಷಗಳನ್ನು ಭಯಭೀತಗೊಳಿಸುತ್ತಿದ್ದಾರೆ. ಅವರು ಭಯೋತ್ಪಾದಕರೆಂದು ನಾನು ಎಂದಿಗೂ ಹೇಳಿಲ್ಲ ಎಂದು ಸ್ಪಷ್ಟಪಡಿಸಿದರು.

## ನನಗೂ ಅನುಭವವಿದೆ: ಡಿಕೆಶಿ

ಅವರೆಲ್ಲರ ಅಭಿಪ್ರಾಯ ಪಡೆದ ನಂತರವೇ ಅಂತಿಮ ತೀರ್ಮಾನ ಮಾಡಲಾಗಿದೆ ಎಂದರು. ಕುಮಾರಸ್ವಾಮಿ ದೊಡ್ಡ ವ್ಯಕ್ತಿ ಇರಬಹುದು. ನನಗೂ ಸಣ್ಣ ಅನುಭವವಿದೆ. ಈ ಅನುಭವದ ಮೇಲೆ ಹೇಗೆ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ವಿರೋಧ ಪಕ್ಷದ ಶಾಸಕರು, ನಾಯಕರನ್ನು ಹೇಗೆ ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು ಎಂಬುದು ನನಗೂ ಗೊತ್ತಿದೆ. ಎಂದು ತಿಳಿಸಿದರು.

## ಫಲಿತಾಂಶ ಬಳಿಕ ಅಮಾನತು ವಾಪಸ್

ಎಸ್‌ಡಿಪಿಐಗೆ ಕಾಂಗ್ರೆಸ್ ನ ಕೆಲವು ಮುಖಂಡರಿಂದಲೇ ಹಣಕಾಸು ನೆರವು ನೀಡಲಾಗಿದೆ ಎಂಬ ಆರೋಪದ ಕುರಿತು ಪ್ರತಿಕ್ರಿಯಿಸಿ ಈ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರು. ದಾವಣಗೆರೆ ಉಪ ಚುನಾವಣೆಯಲ್ಲಿ ಪಕ್ಷ ವಿರೋಧಿ ಚಟುವಟಿಕೆ ನಡೆದಿದೆಯೋ, ಇಲ್ಲವೋ ಗೊತ್ತಿಲ್ಲ. ಚುನಾವಣೆ ಫಲಿತಾಂಶದ ಬಳಿಕ ಈ ಕುರಿತು ಚರ್ಚಿಸುತ್ತೇವೆ ಎಂದು ಹೇಳಿದರು.

## ಭ್ರೂಣಲಿಂಗ ಪತ್ತೆಗೆ ಸ್ಕ್ಯಾನಿಂಗ್

ಜಿಲ್ಲಾ ಆರೋಗ್ಯ ಅಧಿಕಾರಿ ಕಚೇರಿಯು ಅಂತಹ ತಪಾಸಣೆಗಳ ಯಾವುದೇ ದಾಖಲೆಯನ್ನು ನಿರ್ವಹಿಸುವಲ್ಲಿ ವಿಫಲವಾಗಿದೆ ಎಂದು ವರದಿ ತಿಳಿಸಿದೆ.

## ಎಲ್ಲರೂ ಪಾಸ್; ಕೇಳಲು ಚಂದ!

ಉದ್ದೇಶ ಏನು? ಕಳೆದ ವರ್ಷ 1.75 ಲಕ್ಷ ವಿದ್ಯಾರ್ಥಿಗಳು ಫೇಲ್ ಆಗಿದ್ದಾರೆ. ಈ ಬಾರಿ ಎಲ್ಲರನ್ನೂ ಪಾಸ್ ಮಾಡೋದು ನಿಮ್ಮ ಅಧಿಸೂಚನೆ ಉದ್ದೇಶವೇ? ಫೇಲ್ ಆಗಿದ್ದರೆ ಒಳ್ಳೆಯ ಶಿಕ್ಷಕರರನ್ನು ನೇಮಕ ಮಾಡಿ. ಹಿಂದಿ ಭಾಷೆ ಕಲಿಯಲಿ ಬಿಡಿ. ತೃತೀಯ ಭಾಷೆ ಒಮ್ಮೆ ಕನ್ನಡವೂ ಆಗಿರಲಿದೆ ಅಲ್ವಾ. ಇಲ್ಲಿ ಹಿಂದಿ ತೃತೀಯ ಭಾಷೆ ವಿಚಾರಕ್ಕೆ ಗ್ರೇಡಿಂಗ್ ಸಿಸ್ಟಮ್ ತರಲಾಗಿದೆ ಎಂದು ಹೇಳಿದರು.

## ಮಾಟ-ಮಂತ್ರ ಮಾಡಿಸಿರಬಹುದ್ದೇ

ಮಾತನಾಡಿದ ಅವರು, ಸಿದ್ದರಾಮಯ್ಯ ಅವರು ಮಾಟ-ಮಂತ್ರ ನಂಬಲ್ಲ. ನಾನು ಕೂಡಾ ಮಾಟ, ಮಂತ್ರವನ್ನು ನಂಬಲ್ಲ. ಆಗಂತ ಅದನ್ನು ಮಾಡಿಸುವುದಿಲ್ಲ ಅಂತಲ್ಲ. ನಮ್ಮ ಹಳೇ ಮನೆ ಮುಂದೆಯೂ ನಿಂಬೆಹಣ್ಣು, ದಾರ ಹಾಕಿ ಹೋಗಿದ್ದರು. ಕೇರಳದಲ್ಲಿ ಮಾಟ-ಮಂತ್ರ ಮಾಡಿಸುತ್ತಾರೆ. ಈ ಬಗ್ಗೆ ತನಿಖೆ ನಡೆಸಬೇಕಾದ ಅಗತ್ಯವಿದೆ ಎಂದು ರಾಜಣ್ಣ ಹೇಳಿದರು..

## ಇನ್ನೂ 7 ದಿನ ತಾಪಮಾನ ಹೆಚ್ಚಳ,

ವಿಡಿಯೊಗಳನ್ನು ಹವಾಮಾನ ಇಲಾಖೆ ಎಕ್ಸ್ ಖಾತೆಯಲ್ಲಿ ಹಂಚಿಕೊಳ್ಳುವ ಮೂಲಕ ಆರೋಗ್ಯವನ್ನು ಕಾಪಾಡಿಕೊಳ್ಳಿ ಎಂದು ಸಲಹೆ ನೀಡಿದೆ.

## ನೇಮಕಾತಿ ಪತ್ರ ವಿತರಿಸಿದ ಸಿಎಂ

ಮೃತಪಟ್ಟವರ ಕುಟುಂಬ ಸದಸ್ಯರನ್ನು ಭೇಟಿ ಮಾಡಿ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದರೆ ಸರ್ಕಾರಿ ಉದ್ಯೋಗ ನೀಡುವ ಭರವಸೆ ನೀಡಿದ್ದರು. ಬಳಿಕ ಸಂತ್ರಸ್ತರು ಸರ್ಕಾರಿ ಉದ್ಯೋಗಕ್ಕಾಗಿ ನಿರಂತರ ಹೋರಾಟ ನಡೆಸಿಕೊಂಡು ಬಂದಿದ್ದರು. ಅಂತಿಮವಾಗಿ ಸಂತ್ರಸ್ತರ ಬೇಡಿಕೆ ಈಡೇರಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ನೇಮಕಾತಿ ಪತ್ರಗಳನ್ನು ನೀಡಿದ್ದಾರೆ.

## ಗುರಿಯಾಗಿಸಿ ಇಡಿ ದಾಳಿ

ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಮೀಸಲಾತಿ ನೀಡಲು ಸಂವಿಧಾನದ 73, 74ನೇ ಕಲಂಗೆ ತಿದ್ದುಪಡಿ ತಂದು ರಾಜ್ಯಸಭೆಯಲ್ಲಿ ಜಾರಿಗೊಳಿಸಲು ಮುಂದಾದಾಗ ಎನ್‌ಡಿಎ ಮೈತ್ರಿಕೂಟ ಅಡ್ಡಿಪಡಿಸಿತ್ತು. ಬಿಜೆಪಿ ನಿಜವಾದ ಮಹಿಳಾ ಮೀಸಲಾತಿ ವಿರೋಧಿ ಎಂದು ಸಿದ್ದರಾಮಯ್ಯ ವಾಗ್ದಾಳಿ ನಡೆಸಿದರು

# ಮಕ್ಕಳ ಬೇಸಿಗೆ ಶಿಬಿರಕ್ಕೆ ಚಾಲನೆ



ಚಾಮರಾಜನಗರ: ಅಂತರಾಷ್ಟ್ರೀಯ ಆಧ್ಯಾತ್ಮಿಕ ಸಂಸ್ಥೆ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವ ವಿದ್ಯಾಲಯದ ಪ್ರಕಾಶ ಭವನದಲ್ಲಿ ಮಕ್ಕಳ ಸಂಭ್ರಮದ ಬೇಸಿಗೆ ಶಿಬಿರಕ್ಕೆ ಚಾಲನೆ ನೀಡಲಾಯಿತು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಮನೋಬಲ ತರಬೇತುದಾರೆ ರಾಜಯೋಗಿನಿ ಬ್ರಹ್ಮಾಕುಮಾರಿ ದಾನೇಶ್ವರಿಜೀ ಮಕ್ಕಳಲ್ಲಿ ಸಕಾರಾತ್ಮಕ ಚಿಂತನೆ ಬೆಳೆಸುವಲ್ಲಿ ಹಾಗೂ ಮಕ್ಕಳಲ್ಲಿ ವ್ಯಕ್ತಿತ್ವ ರೂಪಿಸುವಲ್ಲಿ ರಾಜಯೋಗ ಶಿಕ್ಷಣ ಹಾಗೂ ಬೇಸಿಗೆ ಶಿಬಿರಗಳು ಸಹಕಾರಿಯಾಗುತ್ತದೆ ಎಂದು ಅಭಿಪ್ರಾಯ ಪಟ್ಟರು. ಶಿಬಿರವು ವ್ಯಕ್ತಿತ್ವ ವಿಕಸನ, ಮಕ್ಕಳ ವ್ಯಕ್ತಿತ್ವ ಬೆಳವಣಿಗೆ, ನಡವಳಿಕೆ, ಬಾವ ಮತ್ತು ವರ್ತನೆಗಳನ್ನು ರೂಪಿಸುವ ಪ್ರಕ್ರಿಯೆಯಾಗಿದೆ ಎಂದು ತಿಳಿಸಿದರು ಆತ್ಮವಿಶ್ವಾಸ, ಭಾವನಾತ್ಮಕ ಬುದ್ಧಿವಂತಿಕೆ, ಸಹಾನುಭೂತಿ ಮತ್ತು ಸಂವಹನ ಕೌಶಲ್ಯಗಳನ್ನು ನಿರ್ಮಿಸುವುದು ಶಿಬಿರದಲ್ಲಿ ಸೇರಿವೆ. ಸುರಕ್ಷಿತ ಬಾಂಧವ್ಯ ಬೆಳೆಸುವುದು ಸಾಮಾಜಿಕ ಕೌಶಲ್ಯ, ಸಕರಾತ್ಮಕ ಬಲವರ್ಧನೆ, ಒದಗಿಸುವುದು, ಮುಕ್ತ ಸಮ್ಮೋಹನ ಮತ್ತು ಮುಕ್ತ ಆಟಕ್ಕೆ ಅವಕಾಶ ನೀಡುವುದು ಎಂದು ಹೇಳಿದರು. ಮಕ್ಕಳ ವ್ಯಕ್ತಿತ್ವದ ಬೆಳವಣಿಗೆ ಶಿಬಿರ ಪೂರಕವಾಗಿದೆ. ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವ ವಿದ್ಯಾಲಯದಲ್ಲಿ ಬೇಸಿಗೆ ಶಿಬಿರದ ಪ್ರಯುಕ್ತ ಮಕ್ಕಳಿಗೆ ಯೋಗ, ಚಿತ್ರಕಲೆ, ನೈತಿಕ ಶಿಕ್ಷಣ, ನೆನಪಿನ ನಿರ್ವಹಣೆ, ಆರೋಗ್ಯ, ಶ್ಲೋಕ, ವಚನ ಹಾಗೂ ಇನ್ನಿತರ ವಿಷಯಗಳ ಬಗ್ಗೆ ವ್ಯಕ್ತಿತ್ವ ವಿಷಯದ ಬಗ್ಗೆ ಏರ್ಪಡಿಸಲಾಗಿದೆ ಮಕ್ಕಳಿಗೆ ಪ್ರಮಾಣ ಪತ್ರವನ್ನು ನೀಡಲಾಗುವುದು.

ಶಿಕ್ಷಕ ಮಹೇಶ್ ಮಾತನಾಡಿ ಸಂಸ್ಥೆ ನೀಡುವ ವ್ಯಕ್ತಿತ್ವ ವಿಕಸನ ಶಿಬಿರ ಯೋಗ,ಆಧ್ಯಾತ್ಮಿಕ ನೀತಿ ಶಾಸ್ತ್ರ, ಪ್ರಾಯೋಗಿಕ ಮನೋವಿಜ್ಞಾನ, ತತ್ವಶಾಸ್ತ್ರ, ವಿಶ್ವ ಇತಿಹಾಸ ಮತ್ತು ಸಂಸ್ಕೃತಿಯ ಸಾರಾಂಶ, ಸಮಾಜಶಾಸ್ತ್ರ ಮತ್ತು ಹಲವಾರು ಇತರ ವಿಷಯಗಳ ಮಿಶ್ರಣವಾಗಿದೆ. ಈ ಸಂಸ್ಥೆಯು ಪ್ರತಿಯೊಬ್ಬ ಮಕ್ಕಳಲ್ಲಿ ಆಂತರಿಕ ಪ್ರತಿಭೆಯನ್ನು ಗುರುತಿಸುತ್ತದೆ. ಮತ್ತು ತಮ್ಮೊಳಗಿನ ವ್ಯಕ್ತಿತ್ವವನ್ನು ಮರುಶೋಧಿಸಲು ಸಹಾಯ ಮಾಡುತ್ತದೆ ಎಂದರು. ಕಾರ್ಯಕ್ರಮದಲ್ಲಿ ಶಿಕ್ಷಕ ನಾಗರಾಜ್, ಶ್ರೀನಿವಾಸ್, ಆಶಾ, ಓಂ ಶಾಂತಿ ನ್ಯೂಸ್ ಸರ್ವಿಸಸ್ನ ಆರಾಧ್ಯ ಹಾಜರಿದ್ದರು.

# ರೈತ ಸಂಘದಿಂದ ಕಪ್ಪು ಬಾವುಟ ಪ್ರದರ್ಶನ



ಗುಂಡ್ಲುಪೇಟೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಕಪ್ಪು ಬಾವುಟ ಪ್ರದರ್ಶನ ಮಾಡಲು ಮುಂದಾಗಿದ್ದ ರೈತ ಸಂಘದ ಮುಖಂಡರನ್ನು ಪೊಲೀಸರು ಬಂಧಿಸಿದರು.

ಪಟ್ಟಣದ ಕೋಡಿಹಳ್ಳಿ ಸರ್ಕಲ್‌ನಲ್ಲಿ ಜಮಾಯಿಸಿದ ರೈತ ಸಂಘ ಪದಾಧಿಕಾರಿಗಳು ಮೆರವಣಿಗೆ ಮೂಲಕ ಊಟಿ ಸರ್ಕಲ್ ಕಡೆ ತೆರಳುತ್ತಿದ್ದರು. ಈ ವೇಳೆ ಊಟಿ ಸರ್ಕಲ್ ಬಳಿ ಪೊಲೀಸರು ಪ್ರತಿಭಟನಾಕಾರರನ್ನು ಅಡ್ಡಗಟ್ಟಿ ತಡೆದರು. ಈ ವೇಳೆ ಪೊಲೀಸರು ಹಾಗೂ ರೈತ ಸಂಘದ ಮುಖಂಡರ ನಡುವೆ ಮಾತಿನ ಚಕಮಕಿ ನಡೆಯಿತು. ರಾಜ್ಯ ಸರ್ಕಾರ ಹಾಗೂ ಸಿಎಂ ಸಿದ್ದರಾಮಯ್ಯ ವಿರುದ್ಧ ಪ್ರತಿಭಟನಾಕಾರರು ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ರಾಜ್ಯ ಉಪಾಧ್ಯಕ್ಷ ಡಾ.ಗುರುಪ್ರಸಾದ್ ಮಾತನಾಡಿ, ಈಗಾಗಲೇ ಜಿಲ್ಲೆಯಲ್ಲಿ ನಾಲ್ಕು ಹಂತಗಳಲ್ಲಿ ಕೆರೆಗಳಿಗೆ ನೀರು ತುಂಬಿಸುವ ಯೋಜನೆ ಪೂರ್ಣವಾಗಿಲ್ಲ. ಅಲ್ಲದೇ ಆ ಕೆರೆಗಳಿಗೆ ಸರಿಯಾಗಿ ನೀರು ತುಂಬಿಸುತ್ತಿಲ್ಲ. ಹೀಗಿದ್ದರೂ ಸಹ ಈಗ ಮತ್ತೆ 110ಕೆರೆಗಳಿಗೆ ನೀರು ತುಂಬಿಸುವ ಯೋಜನೆಗೆ ಚಾಲನೆ ನೀಡಲು ಮುಂದಾಗಿರುವುದು ಎಷ್ಟರ ಮಟ್ಟಿಗೆ ಸರಿ ಎಂದು ಪ್ರತಿಭಟನಾಕಾರರು ಪ್ರಶ್ನಿಸಿದರು. ಇದರಿಂದ ರೈತರ ಶ್ರೇಯೋಭಿವೃದ್ಧಿ ಕಾಣುತ್ತಿಲ್ಲ. ಆದ್ದರಿಂದ ಇದನ್ನು ವಿರೋಧಿಸುತ್ತಿದ್ದು ಯಾವತ್ತು ಮನವಿ ಕೊಟ್ಟರು ಕಸದ ಬುಟ್ಟಿಗೆ ಹಾಕಿ ಹೋಗುತ್ತಾರೆ. ಆದ್ದರಿಂದ ಮನವಿ ಕೊಡದೇ ಕಪ್ಪು ಬಾವುಟ ಪ್ರದರ್ಶನಕ್ಕೆ ಮುಂದಾಗಿದ್ದೆವು ಎಂದು ಹೇಳಿದರು. ಪ್ರತಿಭಟನೆಯಲ್ಲಿ ಜಿಲ್ಲಾಧ್ಯಕ್ಷ ಮಾಡ್ರಹಳ್ಳಿ ಮಹದೇವಪ್ಪ, ಪದಾಧಿಕಾರಿಗಳಾದ ಮೂರ್ತಿಬುದ್ಧಿ, ಪುಟ್ಟಬುದ್ಧಿ, ಹಿರಿಕಾಟಿ ಚಿಕ್ಕಣ್ಣ, ರಂಗಸ್ವಾಮಿ, ಅಂಬಳೆ ವಿಜಿ, ಮಹದೇವಸ್ವಾಮಿ, ಮಹದೇವಪ್ಪ ಸೇರಿದಂತೆ ಇತರರು ಭಾಗವಹಿಸಿದ್ದರು.

**▸▸ ರೈತ ಮುಖಂಡರನ್ನು ವಶಕ್ಕೆ ಪಡೆದ ಪೊಲೀಸ್**

# ಕಾಂಗ್ರೆಸ್ ವಿರುದ್ಧ ಜೆಡಿಎಸ್ ಪ್ರತಿಭಟನೆ

**ಮಹಿಳಾ ಮೀಸಲಾತಿ ಮಸೂದೆ ವಿಫಲ**

**ಕಾಂಗ್ರೆಸ್ ಪಕ್ಷದ ವಿರುದ್ಧ ಪ್ರತಿಭಟನೆ ಸಾಂಕೇತಿಕ, ಪ್ರತಿಭಟನೆ ನಿಲ್ಲೊಲ್ಲ: ಎ.ಮಂಜುನಾಥ್**

**1994ರಲ್ಲಿ ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳಾ ಮೀಸಲಾತಿ, ಎಚ್.ಡಿ.ದೇವೇಗೌಡರ ಶ್ರಮ**




ರಾಮನಗರ: ಮಹಿಳಾ ಮೀಸಲಾತಿ ಮಸೂದೆ ವಿಫಲಗೊಳಿಸಿದ ಕಾಂಗ್ರೆಸ್ ಪಕ್ಷದ ವಿರುದ್ಧ ಜೆಡಿಎಸ್ ಮುಖಂಡರು ಮತ್ತು ಕಾರ್ಯಕರ್ತರು ನಗರದಲ್ಲಿಂದು ಪ್ರತಿಭಟನೆ ನಡೆಸಿದರು.

ನಗರದ ಐಜೂರು ವೃತ್ತದಲ್ಲಿ ಜಮಾಯಿಸಿದ ನೂರಾರು ಕಾರ್ಯಕರ್ತರು ಕಾಂಗ್ರೆಸ್ ಪಕ್ಷವನ್ನು ಮಹಿಳಾ ವಿರೋಧಿ ಎಂದು ಜರಿದರು. ತಮ್ಮ ಪಕ್ಷ ಮಹಿಳೆಯರಿಗೆ ಸ್ಥಾನಮಾನ ನೀಡುವ ಪಕ್ಷ ಎಂದು ಕೇವಲ ಭಾಷಣದಲ್ಲಿ ಮಾತ್ರ ಕಾಂಗ್ರೆಸ್ ನಾಯಕರು ಹೇಳುತ್ತಾರೆ, ಆದರೆ ಮಹಿಳಾ ಮೀಸಲಾತಿಯನ್ನು ವಿರೋಧಿಸಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಈ ವೇಳೆ ಮಾತನಾಡಿದ ಜೆಡಿಎಸ್ ರಾಜ್ಯ ಕೋರ್ ಕಮಿಟಿ ಸದಸ್ಯ ಹಾಗೂ ಮಾಗಡಿ ಕ್ಷೇತ್ರದ ಮಾಜಿ ಶಾಸಕ ಎ.ಮಂಜುನಾಥ್, ದೇಶದಲ್ಲಿ ಶೇ 50ರಷ್ಟು ಮಹಿಳಾ ಮತದಾರರಿದ್ದಾರೆ, ಮಹಿಳಾ ಮೀಸಲಾತಿ ವಿಧೇಯಕಕ್ಕೆ ಸೋಲುಂಟು ಮಾಡಿರುವ ಕಾಂಗ್ರೆಸ್ ಪಕ್ಷ ಮತ್ತು ಅದರ ಮಿತ್ರ ಪಕ್ಷಗಳು ರಾಜಕೀಯದಲ್ಲಿ ಮಹಿಳೆಯರ ಪ್ರಾತಿನಿಧ್ಯವನ್ನು ತಪ್ಪಿಸಿದೆ ಎಂದು ಜರಿದರು.

1994ರಲ್ಲಿ ರಾಜ್ಯದ ಮುಖ್ಯಮಂತ್ರಿಗಳಾಗಿದ್ದ ಜೆಡಿಎಸ್ ಪ್ರಮುಖ ನಾಯಕ ಎಚ್.ಡಿ.ದೇವೇಗೌಡರು ಸ್ಥಳೀಯ ಸಂಸ್ಥೆಗಳಲ್ಲಿ ಶೇ 33ರಷ್ಟು ಮಹಿಳಾ ಮೀಸಲಾತಿಯನ್ನು ಜಾರಿಗೊಳಿಸಿದ್ದರಿಂದ ಇಂದು ಸ್ಥಳೀಯ ಸಂಸ್ಥೆಗಳಲಿ ಮಹಿಳೆಯರಿಗೆ ಅಧಿಕಾರ ಲಭ್ಯವಾಗುತ್ತಿದೆ. 1996ರಲ್ಲಿ ದೇವೇಗೌಡರು ಪ್ರಧಾನಿಗಳಾಗಿದ್ದ ವೇಳೆಯೂ ಶೇ 33ರಷ್ಟ ರಾಜಕೀಯ ಮೀಸಲಾತಿಯನ್ನು ಪ್ರತಿಪಾದಿಸಿದ್ದರು. ಜೆಡಿಎಸ್ ಎಂದೂ ಮಹಿಳೆಯರ ಪರ ನಿಂತಿದೆ ಎಂಬುದಕ್ಕೆ ಈ ನಿದೇರ್ಶನಗಳು ಪುರಾವೆ ಎಂದರು.

ಸುಮಾರು 60 ವರ್ಷಗಳ ಕಾಲ ಕಾಂಗ್ರೆಸ್ ಈ ದೇಶವನ್ನು ಆಳಿದೆ. ಆದರೆ ಆ ಪಕ್ಷ ಎಂದಿಗೂ ಮಹಿಳಾ ಮೀಸಲಾತಿ ಬಗ್ಗೆ ದನಿ ಎತ್ತಲಿಲ್ಲ. ಈಗ ನರೇಂದ್ರ ಮೋದಿ ನೇತೃತ್ವದ ಸರ್ಕಾರ ಮಹಿಳಾ ಮೀಸಲಾತಿ ವಿಧೇಯಕವನ್ನು ಮಂಡಿಸಿತ್ತು. ಆದರೆ ಕಾಂಗ್ರೆಸ್ ಅದನ್ನು ವಿಫಲಮಾಡಿದೆ. ಕಾಂಗ್ರೆಸ್ ಪಕ್ಷ ಮಹಿಳೆಯರ ಹಕ್ಕು ಮತ್ತು ಮಹಿಳೆಯರು ಅಧಿಕಾರಕ್ಕೆ ಬರುವುದನ್ನು ತಪ್ಪಿಸಿದೆ ಎಂದು ಕಿಡಿಕಾರಿದರು.

ಮಹಿಳಾ ಮೀಸಲಾತಿಗೆ ವಿರೋಧ ವ್ಯಕ್ತಪಡಿಸಿದ ಕಾಂಗ್ರೆಸ್ ಪಕ್ಷದ ವಿರುದ್ಧ ಹೋರಾಟ ನಿಲ್ಲುವುದಿಲ್ಲ ಇಂದು ರಾಜ್ಯಾದ್ಯಂತ ಸಾಂಕೇತಿಕ ಪ್ರತಿಭಟನೆ ನಡೆಯುತ್ತಿದೆ ಎಂದರು.

ಜಿಲ್ಲಾ ಜೆಡಿಎಸ್ ಅಧ್ಯಕ್ಷ ಜಯಮುತ್ತು ಮಾತನಾಡಿ, ಮಹಿಳೆಯರಿಗೆ ರಾಜಕೀಯದಲ್ಲಿ ಶೇ 33ರಷ್ಟು ಮೀಸಲಾತಿ ಒದಗಿಸಬೇಕು ಎಂಬುದು ಕೇಂದ್ರದಲ್ಲಿ ಆಡಳಿತದಲ್ಲಿರುವ ಎನ್.ಡಿ.ಎ ಸರ್ಕಾರದ ಉದ್ದೇಶ. ಆದರೆ ಕಾಂಗ್ರೆಸ್ ಮತ್ತು ಅದರ ಮಿತ್ರ ಪಕ್ಷಗಳು, ಮಹಿಳೆಯರನ್ನು ರಾಜಕೀಯದಿಂದ ದೂರವಿಟ್ಟಿದೆ ಎಂದು ದೂರಿದರು. ಮಹಿಳಾ ಮೀಸಲಾತಿ ಮಸೂದೆಯನ್ನು ವಿಫಳಗೊಳಿಸಿದ ಕಾಂಗ್ರೆಸ್ ದೇಶದ ಮಹಿಳೆಯರ ಕ್ಷಮೆ ಯಾಚಿಸಬೇಕು ಎಂದು ಆಗ್ರಹಿಸಿದರು. ರಾಮನಗರ ತಾಲ್ಲೂಕು ಘಟಕದ ಅಧ್ಯಕ್ಷ ಸಬ್ಬಕೆರೆ ಶಿವಲಿಂಗಯ್ಯ, ಕನಕಪುರ ತಾಲ್ಲೂಕು ಘಟಕದ ಅಧ್ಯಕ್ಷ ನಾಗರಾಜು (ಚಿಕ್ಕಪ್ಪ), ಮಾಗಡಿ ತಾಲ್ಲೂಕು ಘಟಕದ ಅಧ್ಯಕ್ಷ ರಾಮಣ್ಣ, ಚನ್ನಪಟ್ಟಣ ತಾಲ್ಲೂಕು ಘಟಕದ ಅಧ್ಯಕಷ ಗೋವಿಂದಹಳ್ಳಿ ನಾಗರಾಜು, ರಾಮನಗರ ನಗರಸಭೆ ಸದಸ್ಯ ಮಂಜುನಾಥ್, ಕನಕಪುರ ನಗರಸಭೆ ಸದಸ್ಯ ಚಂದ್ರು (ಸ್ಟುಡಿಯೋ), ಬಿಡದಿ ಪುರಸಭೆ ಅಧ್ಯಕ್ಷೆ ಭಾನುಪ್ರಿಯಾ, ತಾಪಂ ಮಾಜಿ ಸದಸ್ಯ ಲಕ್ಷ್ಮೀಕಾಂತ, ಜೆಡಿಎಸ್ ವಕ್ತಾರರಾದ ಪ್ರಶಾಂತಿ, ದಿಶಾ ಸಮಿತಿ ಸದಸ್ಯರುಗಳಾದ ಶೋಭಾ, ರೇಖಾ, ಉಮಾಶಂಕರ್, ಜೆಡಿಎಸ್ ಪ್ರಮುಖರಾದ ಬಿ.ಉಮೇಶ್, ನರಸಿಂಹಮೂರ್ತಿ, ಗೂಳಿ ಕುಮಾರ್, ಸುಗ್ಗನಹಳ್ಳಿ ರಾಮಕೃಷ್ಣಯ್ಯ, ಜಿ.ಟಿ.ಕೃಷ್ಣ, ಶೆಟ್ಟಿಗೌಡನದೊಡ್ಡಿ ನರಸಿಂಹಮೂರ್ತಿ, ಸರಸ್ವತಿ, ಶೋಭಾ ಆರ್ ಗೌಡ, ಪೂರ್ಣಿಮಾ, ಪವಿತ್ರ, ಚಿತ್ರ, ಮಮತಾ, ಸತ್ಯವತಿ ಮುಂತಾದವರು ಭಾಗವಹಿಸಿದ್ದರು.

> ಮಹಿಳೆಯನ್ನು ಅಧಿಕಾರದಿಂದ ದೂರ ಇಡ ಬೇಕು ಎಂಬುದು ಕಾಂಗ್ರೆಸ್ ಪಕ್ಷದ ಸಿದ್ದಾಂತ. ಹೀಗಾಗಿಯೇ ಮಹಿಳಾ ಮೀಸಲಾತಿ ಮಸೂದೆಗೆ ಆ ಪಕ್ಷ ವಿರೋಧ ವ್ಯಕ್ತಪಡಿಸಿದೆ.
>
> ▸▸ **ಶೋಭಾ ಆರ್. ಗೌಡ** ಜೆಡಿಎಸ್ ಮಹಿಳಾ ಮುಖಂಡರು

> ಮಹಿಳಾ ಮೀಸಲಾತಿ ಮಸೂಧೆಯನ್ನು ವಿಫಲಗೊಳಿಸಿರುವ ಕಾಂಗ್ರೆಸ್ ಪಕ್ಷ ದೇಶದ ಮಹಿಳೆಯರನ್ನು ಅವಮಾನಿಸಿದೆ. ರಾಜಕೀಯದಲ್ಲಿ ಮಹಿಳಾ ಸಬಲೀಕರಣಕ್ಕೆ ಈ ಮಸೂದೆ ಉಪಯುಕ್ತವಾಗಿತ್ತು. ಆದರೆ ಕಾಂಗ್ರೆಸ್ ಅದನ್ನು ವಿರೋಧಿಸಿದೆ. ಆ ಪಕ್ಷದಿಂದ ಮಹಿಳೆಯರಿಗೆ ಅನ್ಯಾಯವಾಗಿದೆ.
>
> ▸▸ **ಶಾರದ ಗೌಡ** ಮಾಜಿ ಅಧ್ಯಕ್ಷರು ರಾಮನಗರ-ಚನ್ನಪಟ್ಟಣ ನಗರಾಭಿವೃದ್ಧಿ ಪ್ರಾಧಿಕಾರ

> ಮಹಳೆಯರ ಭವಿಷ್ಯಕ್ಕೆ ಕಾಂಗ್ರೆಸ್ ಮತ್ತು ಅದರ ಮಿತ್ರ ಪಕ್ಷಗಳು ಧಕ್ಕೆ ತಂದಿವೆ. ಈ ಪಕ್ಷಗಳ ಕುಯುಕ್ತಿಯಿಂದಾಗಿ ಮಹಿಳಾ ಮೀಸಲಾತಿ ಮಸೂದೆ ವಿಫಲವಾಗಿದೆ.
>
> ▸▸ **ಪ್ರಶಾಂತಿ** ರಾಜ್ಯ ವಕ್ತಾರರು, ಜೆಡಿಎಸ್

ಮೊದಲ ಪುಟದಿಂದ

## ಮುಂದಿನ ದಿನಗಳಲ್ಲಿ ಹೋರಾಟ

ಸದ್ಯ ಎಸ್ ಐಟಿ ಮಾಡಿರುವ ವರದಿ ಬಹಿರಂಗ ಮಾಡಬೇಕೆಂದು ಆಗ್ರಹಿಸಿದರು.

**ಮುಗಿದ ಕಾಂಗ್ರೆಸ್ ಆಯುಸ್ಸು:** ಕಾಂಗ್ರೆಸ್ ನ ಆಯುಸ್ಸು ಮುಗಿದಿದೆ. ಈಗಾಗಲೇ ದಲಿತರನ್ನು ಮುಗಿಸಿ ಆ ಸಮುದಾಯ ಬಿಜೆಪಿಯತ್ತ ಮುಖ ಮಾಡಿದೆ. ಈಗ ಮುಸಲ್ಮಾನರು ಕಾಂಗ್ರೆಸ್ ತಿರಸ್ಕಾರ ಮಾಡಿ ಹೊರಗೆ ಬರುತ್ತಿದ್ದರು. ಜಾಫರ್ ಷರೀಫ್, ಅವರ ಮೊಮ್ಮಗ, ತನ್ವೀರ್ ಸೇಠ್ ಸೇರಿ ಅನೇಕ ಮುಸ್ಲಿಂರನ್ನು ಕಾಂಗ್ರೆಸ್ ಬಳಸಿಕೊಂಡು ಹೊರ ಹಾಕಿದ್ದಾರೆ. ನಜೀರ್ ಅಹಮ್ಮದ್ ರಾತ್ರೋ ರಾತ್ರಿ ಎತ್ತಂಗಡಿ ಮಾಡಿದ್ದು, ಈಗ ಜಮೀರ್ ಅವರಿಗೆ ಕೈಹಾಕಿದ್ದಾರೆ. ಮುಸಲ್ಮಾನ್ ನಾಯಕರ ಬೆಂಬಲಿಗರಾಗಿ ಸಮುದಾಯ ಇರಬಾರದು ಎಂಬ ಕಾರಣಕ್ಕೆ ಈ ರೀತಿ ಮಾಡುತ್ತಾ ನಾಶದತ್ತ ಕಾಂಗ್ರೆಸ್ ಸಾಗಿದೆ ಎಂದರು.

**ಶೇ.50ರಷ್ಟು ಕ್ಷೇತ್ರ ಹೆಚ್ಚಳ:** ಜನಸಂಖ್ಯೆ ಆಧಾರದ ಮೇಲೆ ಲೋಕಸಭಾ ಕ್ಷೇತ್ರ ಪುನರ್ ವಿಂಗಡಣೆ ಮಾಡಿಲ್ಲ. ಬದಲಿಗೆ ಈಗಿರುವ 543ರಲ್ಲಿ ಶೇ.50ರಷ್ಟು ಹೆಚ್ಚಳ 272 ಹೆಚ್ಚಿಸಿ 815 ಕ್ಷೇತ್ರ ಮಾಡಿದ್ದಾರೆ. ಇದರಿಂದ ರಾಜ್ಯದಲ್ಲಿರುವ 20 ಕ್ಷೇತ್ರ 40 ಕ್ಷೇತ್ರಕ್ಕೆ ಏರಿಕೆ ಮಾಡಿದ್ದಾರೆ. ಇದರಿಂದ ದಕ್ಷಿಣಾ ಭಾರತಕ್ಕೆ ಯಾವುದೇ ಅನ್ಯಾಯ ಮಾಡಿಲ್ಲ. ಬಿಜೆಪಿಯ ಎಲ್ಲಾ ಯೋಜನೆಯನ್ನು ವಿರೋಧಿಸುವುದೇ ಕಾಂಗ್ರೆಸ್ ಉದ್ದೇಶವಾಗಿದೆ. ಇನ್ನೂ ಮಹಿಳೆ ಯರಿಗೆ ಮೀಸಲಾತಿಯನ್ನು ಹೆಚ್ಚಿಸಿ ಯಾರಿಗೂ ಅನ್ಯಾಯವಾಗದ ರೀತಿಯಲ್ಲಿ ಎಲ್ಲರಿಗೂ ಮುಕ್ತ ಅವಕಾಶ ಸಿಗಬೇಕೆಂಬ ಉದ್ದೇಶದಿಂದ ಕ್ಷೇತ್ರ ಹೆಚ್ಚಳ ಮಾಡಲಾಗಿದೆ. 543 ಕ್ಷೇತ್ರದಲ್ಲಿ ಮಹಿಳಾ ಮೀಸಲು ಶೇ.33 ರಷ್ಟು 183 ಸೀಟು ಕಸಿದುಕೊಳ್ಳುತ್ತವೆ. ಆಗ ಎಲ್ಲರಿಗೂ ಆಡಳಿತ ಮಾಡಲು ಅನೂಕೂಲ ಆಗಲಿದೆ ಎಂದರು.

## ಹೈಕೋರ್ಟ್ 'ಬ್ರೇಕ್'

ಅದರಿಂದ ವಿಮುಖರಾಗಲು ಸಾಧ್ಯವಿಲ್ಲ ಎಂದು ನ್ಯಾಯಾಲಯ ಅಭಿಪ್ರಾಯಪಟ್ಟಿದೆ. ಮಾರ್ಚ್ 18ರಿಂದ ಏಪ್ರಿಲ್ 2ರವರೆಗೆ ಎಸ್ಎಸ್‌ಎಲ್‌ಸಿ ಪರೀಕ್ಷೆ ನಡೆದಿದೆ. ಏಪ್ರಿಲ್ 10ರಂದು ಕರಡು ನಿಯಮಗಳನ್ನು ರೂಪಿಸಲಾಗಿದೆ. ಹೀಗಾಗಿ, ತನ್ನ ಆದೇಶ ಮರು ಪರಿಶೀಲಿಸಲು ಹೈಕೋರ್ಟ್ ನಿರಾಕರಿಸಿದೆ. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಮೂರನೇ ಭಾಷಾ ಮೌಲ್ಯಮಾಪನದಲ್ಲಿ ಗ್ರೇಡಿಂಗ್ ಪದ್ಧತಿ ಪರಿಚಯಿಸುವ ಕುರಿತು ನೀಡಿದ ಹೇಳಿಕೆಯಿಂದ ಆತಂಕಗೊಂಡ ಮೂವರು ವಿದ್ಯಾರ್ಥಿಗಳು ಸಲ್ಲಿಸಿದ್ದ ಅರ್ಜಿಯ ಮೇಲೆ ವಿಚಾರಣೆ ನಡೆಸಿ ನ್ಯಾಯಾಲಯ ಈ ಆದೇಶ ನೀಡಿತ್ತು. ಚಿಕ್ಕಮಗಳೂರು ಜಿಲ್ಲೆಯ ಸಹನಾ ಆರ್ ನಾಯ್ಕ್ ಹಾಗೂ ಉಡುಪಿ ಜಿಲ್ಲೆಯ ಅನುಷಾ ಮತ್ತು ಸುಧೀಕ್ಷಾ ಎಂಬ ವಿದ್ಯಾರ್ಥಿನಿಯರು, 2025ರ ಅಕ್ಟೋಬರ್ 28ರಂದು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯಮಾಪನ ಮಂಡಳಿ ಹೊರಡಿಸಿದ್ದ ಸರ್ಕ್ಯೂಲರ್ ಪ್ರಕಾರ ಮೌಲ್ಯಮಾಪನ ನಡೆಸುವಂತೆ ಸರ್ಕಾರಕ್ಕೆ ನಿರ್ದೇಶನ ನೀಡಬೇಕೆಂದು ಹೈಕೋರ್ಟ್ಗೆ ಮನವಿ ಮಾಡಿದ್ದರು. ವಿಚಾರಣೆ ವೇಳೆ ಹೆಚ್ಚುವರಿ ಸರ್ಕಾರಿ ವಕೀಲರು, ಎಸ್ಎಸ್ಎಲ್‌ಸಿ ಪರೀಕ್ಷೆಯ ದಿನಾಂಕಕ್ಕೆ ಜಾರಿಯಲ್ಲಿದ್ದ ನಿಯಮಾವಳಿಗಳ ಪ್ರಕಾರವೇ ಮೌಲ್ಯಮಾಪನ ನಡೆಸಲಾಗುವುದು ಎಂದು ವಿವರಣೆ ನೀಡಿದರು. ಅದನ್ನು ದಾಖಲಿಸಿಕೊಂಡ ನ್ಯಾಯಾಲಯ, 2025-26ನೇ ಸಾಲಿನ ಪರೀಕ್ಷೆಯ ಪ್ರಕಟಣೆ ದಿನಾಂಕದ ವೇಳೆಗೆ ಜಾರಿಯಲ್ಲಿದ್ದ ನಿಯಮಗಳನ್ನು ಅನುಸರಿಸಿ ಇತ್ತೀಚೆಗೆ ನಡೆದ ಎಸ್ಎಸ್ಎಲ್‌ಸಿ ಪರೀಕ್ಷೆಯ ಉತ್ತರಪತ್ರಿಕೆಗಳ ಮೌಲ್ಯಮಾಪನ ನಡೆಸುವಂತೆ ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡಿದೆ.

## ನಲಪಾಡ್‌ಗೆ 'ಇಡಿ ಡ್ರಿಲ್'

ಬೆಂಗಳೂರಿನ ಅಶೋಕನಗರದ ನಲಪಾಡ್ ಮನೆಗೆ ಸೋಮವಾರ ಬೆಳಗ್ಗೆ ಇಡಿ ತಂಡ 6:30ಕ್ಕೆ ಎಂಟ್ರಿ ಕೊಟ್ಟಿತ್ತು. ನಂತರ ಮಾರನೇ ದಿನ ಮುಂಜಾನೆ 3:30ಕ್ಕೆ ದಾಳಿ ಮುಗಿಸಿ ಮನೆಯಿಂದ ಇಡಿ ತೆರಳಿದೆ. ಸತತ 21 ಗಂಟೆಗಳ ಸುದೀರ್ಘ ಶೋಧ ಕಾರ್ಯವನ್ನು ಇಡಿ ನಡೆಸಿದೆ.

14 ಇಡಿ ಅಧಿಕಾರಿಗಳು ದಾಖಲೆ ಪರಿಶೀಲನೆ ನಡೆಸಿದರು. ಆದರೆ, ಅಂದಿನ ಕೆಲವು ದಾಖಲೆಗಳು ಸದ್ಯಕ್ಕೆ ಸಿಕ್ಕಿಲ್ಲ. ನಲಪಾಡ್ ವಿದೇಶಿ ವ್ಯವಹಾರ, ಹೂಡಿಕೆ ಕುರಿತು ದಾಖಲೆ ಕಲೆಹಾಕಿದ್ದಾರೆ. ಮಹತ್ವದ ದಾಖಲೆಗಳು, ಡಿಜಿಟಲ್ ಡಾಕ್ಯುಮೆಂಟ್ ಅನ್ನು ಇಡಿ ವಶಕ್ಕೆ ಪಡೆದಿದೆ. ಕರೆದಾಗ ವಿಚಾರಣೆಗೆ ಹಾಜರಾಗುವಂತೆ ಸೂಚನೆ ನೀಡಿ ಅಧಿಕಾರಿಗಳು ಹೊರಟರು. ಮೂರು ಕಾರುಗಳಲ್ಲಿ 14 ಅಧಿಕಾರಿಗಳು ನಲಪಾಡ್ ಮನೆಯಿಂದ ಹೊರಟರು.

## ಮೇಕೆದಾಟುಗೆ ಡಿಪಿಆರ್: ಡಿಕೆಶಿ

ಹಾಗೂ ಉದ್ಘಾಟನೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಮೇಕೆದಾಟು ವಿಚಾರದಲ್ಲಿ ಸುಪ್ರೀಂ ಕೋರ್ಟ್ ನಲ್ಲೂ ಕರ್ನಾಟಕಕ್ಕೆ ನ್ಯಾಯ ಸಿಕ್ಕಿದೆ. ರಾಜ್ಯವನ್ನು ಪ್ರತಿನಿಧಿಸುವ ಕೇಂದ್ರ ಸಚಿವರಿಗೆ ಶಕ್ತಿ ಇದ್ದರೆ ಯೋಜನೆ ಅನುಷ್ಠಾನಕ್ಕೆ ಸಹಕರಿಸಲಿ ಎಂದು ಸವಾಲು ಹಾಕಿದರು.

ಕಾಂಗ್ರೆಸ್ ಸರ್ಕಾರ ಐದು ಗ್ಯಾರಂಟಿ ಯೋಜನೆಗಳ ಜತೆಗೆ ಆರನೇ ಗ್ಯಾರಂಟಿಯಾಗಿ ಭೂ ದಾಖಲೆಗಳನ್ನು ಕಂದಾಯ ಇಲಾಖೆಯಿಂದ ಒದಗಿಸುವ ಕೆಲಸ ಮಾಡುತ್ತಿದೆ. 1.11 ಕೋಟಿ ಜನರಿಗೆ ಅವರ ಭೂದಾಖಲೆಗಳನ್ನು ಒದಗಿಸಲಾಗಿದೆ. ಇಂತಹ ಕಾರ್ಯಕ್ರಮವನ್ನು ಬಿಜೆಪಿ-ಜೆಡಿಎಸ್ ಮಾಡಿಲ್ಲ. ತಮಿಳುನಾಡಿನಲ್ಲೂ ಮಹಿಳೆಯರಿಗೆ 2 ಸಾವಿರ ಘೋಷಣೆ ಮಾಡಿದ್ದೇವೆ. ನಮ್ಮ ಗ್ಯಾರಂಟಿ ಕಾರ್ಯಕ್ರಮ ಇಡೀ ದೇಶಕ್ಕೆ ಮಾದರಿ ಆಗಿದೆ ಎಂದು ಹೇಳಿದರು.

**ಶಾಸಕ ಪುಟ್ಟರಂಗಶೆಟ್ಟಿ ಹೇಳಿಕೆ । ಬಸವ ಜಯಂತಿ**

# ಜೀವನ ಸಾರ್ಥಕತೆಗೆ ಬಸವಣ್ಣ ವಚನಾಮೃತಗಳನ್ನು ಅಳವಡಿಸಿಕೊಳ್ಳಿ



ಚಾಮರಾಜನಗರ, ಬದುಕಿನ ಜೀವನ ಸಾರ್ಥಕತೆಗೆ ಬಸವಣ್ಣನವರ ವಚನಾಮೃತಗಳನ್ನು ಪ್ರತಿಯೊಬ್ಬರು ಅಳವಡಿಸಿಕೊಳ್ಳುವಂತೆ ಎಂ.ಎಸ್.ಐ.ಎಲ್ ಅಧ್ಯಕ್ಷರು ಹಾಗೂ ಶಾಸಕರಾದ ಸಿ. ಪುಟ್ಟರಂಗಶೆಟ್ಟಿ ತಿಳಿಸಿದರು.

ನಗರದ ವರನಟ ಡಾ. ರಾಜ್‌ಕುಮಾರ್ ಜಿಲ್ಲಾ ರಂಗಮಂದಿರದಲ್ಲಿಂದು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ನಗರಸಭೆ ಸಂಯುಕ್ತಾಶ್ರಯದಲ್ಲಿ ವಿಶ್ವಗುರು ಶ್ರೀ ಬಸವೇಶ್ವರರ 893ನೇ ಜಯಂತಿ ಅಂಗವಾಗಿ ಆಯೋಜಿಸಿದ್ದ ವಿಚಾರ ಸಂಕಿರಣ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಬಸವಣ್ಣನವರು 12ನೇ ಶತಮಾನದ ಪ್ರಮುಖ ವಚನಕಾರರು. ವಚನ ಸಾಹಿತ್ಯ ಮೌಲ್ಯವನ್ನು ಹೆಚ್ಚಿಸಿದವರು. ಕಳಬೇಡ, ಕೊಲಬೇಡ, ಹುಸಿಯ ನುಡಿಯಬೇಡ ಎಂದು ಸರಳ ಕನ್ನಡದಲ್ಲಿ ವಚನಗಳನ್ನು ರಚಿಸಿ ಜನಸಾಮಾನ್ಯರಿಗೆ ವಚನಾಮೃತವನ್ನು ಉಣಬಡಿಸಿದರು. ಅನುಭವ ಮಂಟಪದಲ್ಲಿ ಎಲ್ಲಾ ವರ್ಗದ ಜನರನ್ನೂ ಒಗ್ಗೂಡಿಸಿ ಸಾಮಾಜಿಕ, ಸಾಂಸ್ಕೃತಿಕ ಚಿಂತನೆ, ವಿಚಾರಧಾರೆಗಳ ಮೂಲಕ ಸಮಾಜ ಸುಧಾರಣೆಗೆ ಮುಂದಾದರು. ಇದನ್ನು ಮನಗಂಡ ಸರ್ಕಾರವು ಬಸವಣ್ಣನವರನ್ನು ಸಾಂಸ್ಕೃತಿಕ ನಾಯಕರೆಂದು ಘೋಷಿಸಿ ಗೌರವ ಸಲ್ಲಿಸಿದೆ ಎಂದು ಶಾಸಕರಾದ ಪುಟ್ಟರಂಗಶೆಟ್ಟಿ ಅವರು ತಿಳಿಸಿದರು.

ಗುಂಡ್ಲುಪೇಟೆ ಶಾಸಕರಾದ ಎಚ್.ಎಂ. ಗಣೇಶ್ ಪ್ರಸಾದ್ ಅವರು ಕಾರ್ಯಕ್ರಮ ಉದ್ಘಾಟಿಸಿ ಅನುಭವ ಮಂಟಪದ ಸ್ಥಾಪಿಸಿ ಎಲ್ಲರಿಗೂ ಎಮ್ಮ ವಿಚಾರಧಾರೆಗಳನ್ನು ಪ್ರಸ್ತುತಪಡಿಸಲು ಸಮಾನ ಅವಕಾಶಗಳನ್ನು ನೀಡಿದ ಬಸವಣ್ಣನವರ ಮೌಲ್ಯಯುತ ತತ್ವಗಳನ್ನು ಎಲ್ಲರೂ ಪಾಲಿಸಬೇಕು. ಸಮಾಜದಲ್ಲಿ ಎಲ್ಲರೂ ಸುಖ, ಶಾಂತಿ, ನೆಮ್ಮದಿ ಬದುಕು ಸಾಗಿಸಲು ಬಸವಣ್ಣನವರ ವಚನಗಳ ಸಾರ-ಸಂದೇಶಗಳು ದಾರಿದೀಪವಾಗಿದೆ ಎಂದರು.

ದಯೆ ಇಲ್ಲದ ಧರ್ಮ ಯಾವುದು ಇಲ್ಲ, ಎಲ್ಲಾ ಧರ್ಮಗಳ ಸಾರವು ಒಂದೇ. ಮಾನವಕುಲದ ಒಳಿತಿನ ಪರಮ ಉದ್ದೇಶವಾಗಿದೆ. ಶಾಂತಿಪ್ರಿಯ ಭಾರತ ದೇಶದಲ್ಲಿ ಬುದ್ಧ, ಬಸವ, ಅಂಬೇಡ್ಕರ್, ಕನಕದಾಸರು ಸೇರಿದಂತೆ ಎಲ್ಲಾ ದಾರ್ಶನಿಕರು, ಸಂತರು ತಮ್ಮ ಚಿಂತನೆಗಳನ್ನು ಬಿತ್ತಿಹೋಗಿದ್ದಾರೆ. ಅವರ ತತ್ವ ಸಿದ್ಧಾಂತಗಳಿಂದಲೇ ನಾವೆಲ್ಲರೂ ನೆಮ್ಮದಿಯುತ ಜೀವನ ನಡೆಸುತ್ತಿದ್ದೇವೆ. ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಹ ಬಸವಣ್ಣನ ಅನುಯಾಯಿ ಆಗಿದ್ದಾರೆ. ಅವರು ಅಧಿಕಾರ ಸ್ವೀಕರಿಸಿದ ದಿನ ಬಸವ ಜಯಂತಿಯೇ ಆಗಿತ್ತು ಎಂದು ಮರಿಸ್ವಾಮಿ ಹೇಳಿದರು.

ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದ ನಗರದ ಶ್ರೀ ಸಿದ್ಧಮಲ್ಲೇಶ್ವರ ವಿರಕ್ತ ಮಠದ ಚನ್ನಬಸವಸ್ವಾಮಿಜೀ ಅವರು ಮಾತನಾಡಿದ ಜಿಲ್ಲಾಡಳಿತವು ಬಸವಣ್ಣನವರ ವಿಚಾರಧಾರೆಗಳನ್ನು ಜನಮಾನಸದಲ್ಲಿ ಬಿತ್ತಲು ವಿಚಾರಸಂಕಿರಣ ಹಮ್ಮಿಕೊಂಡಿರುವುದು ಉತ್ತಮ ಬೆಳವಣಗೆಯಾಗಿದೆ. ಎಂದರು. ಹರವೆ ವಿರಕ್ತ ಮಠದ ಸರ್ಪ ಭೂಷಣಸ್ವಾಮಿಗಳು ಸಾನಿಧ್ಯ ವಹಿಸಿದ್ದರು. ಸಂಸ್ಕೃತಿ ಚಿಂತಕರಾದ ಪೃಥ್ವಿರಾಜ್ ಹಾಲಹಳ್ಳಿ ಹಾಗೂ ಬಸವತತ್ವ ಪ್ರಚಾರಕರಾದ ಎಲ್.ಬಸಪ್ಪ ಬೊಮ್ಮಲಾಪುರ ಬಸವಣ್ಣ ಮುಖ್ಯ ಭಾಷಣ ಮಾಡಿ ಬಸವಣ್ಣನವರ ಚಿಂತನೆಗಳನ್ನು ಪ್ರಸ್ತುತಪಡಿಸಿದರು. ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷರಾದ ಹೆಚ್.ವಿ. ಚಂದ್ರು, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಮಹಮದ್ ಅಸ್ಗರ್, ಜಿಲ್ಲಾಧಿಕಾರಿ ಶ್ರೀರೂಪ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್, ಹೆಚ್ಚುವರಿ ಜಿಲ್ಲಾಧಿಕಾರಿ ಟಿ. ಜವರೇಗೌಡ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಎಂ.ಎನ್. ಶಶಿಧರ್, ನಗರಸಭೆ ಪೌರಾಯುಕ್ತರಾದ ಪರಶುರಾಮ್ ಛಲವಾದಿ, ನಗರಾಭಿವೃದ್ಧಿ ಕೋಶ ಯೋಜನಾ ನಿದೇಶಕರಾದ ವೆಂಕಟೇಶ್, ಕನ್ನಡ ಮತ್ತು ಸಂಸ್ಕೃತಿ ಸಹಾಯಕ ನಿರ್ದೇಶಕ ರಾಜು, ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ಮೈಮುಲ್‌ನಲ್ಲಿ ಬಸವಣ್ಣನವರ ಜಯಂತಿ ಆಚರಣೆ



ಮೈಸೂರು: ಮೈಸೂರು ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟ ನಿಯಮಿತದಿಂದ ಆಲನಹಳ್ಳಿಯ ಒಕ್ಕೂಟದ ಸಭಾಂಗಣದಲ್ಲಿ ಬಸವಣ್ಣನವರ ಭಾವಚಿತ್ರಕ್ಕೆ ಮೈಸೂರು ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟ ನಿಯಮಿತದ ಅಧ್ಯಕ್ಷ ಕೆ.ಈರೇಗೌಡ ಪುಷ್ಪಾರ್ಚನೆ ಮಾಡುವ ಮೂಲಕ ಚಾಲನೆ ನೀಡಿದರು.

ಬಳಿಕ ಮಾತನಾಡಿ, 12ನೇ ಶತಮಾನದ ವಿಶ್ವಗುರು ಬಸವಣ್ಣನವರ ಜಯಂತಿಯನ್ನು ಒಕ್ಕೂ ಟದಲ್ಲಿ ಆಯೋಜಿಸಲಾಗಿದೆ. ಬಸವಣ್ಣನವರ ರೀತಿ ಯಾರನ್ನು ಕಾಣಲು ಸಾಧ್ಯವಿಲ್ಲ. ಶಿವನ ರೂಪ ಬಸವಣ್ಣನವರಾಗಿದ್ದಾರೆ. 12ನೇ ಶತಮಾನದಲ್ಲೇ ಕೀಳು ಮೇಲು ಎಂಬ ಭಾವನೆ ಬರಬಾರದು ಎಂಬ ಕಾರಣಕ್ಕೆ ಎಲ್ಲಾ ಸಮುದಾಯದವರಿಗೆ ಶಿವ ಧಾರಣೆ ಮಾಡುತ್ತಾರೆ. ಅವರ ಕುಲಕಸುಬು ಮಾಡುವ ಎಲ್ಲ ರಿಗೂ ಲಿಂಗಧಾರಣೆ ಮಾಡುತ್ತಾರೆಂದು ಸ್ಮರಿಸಿದರು. ನಾವೆಲ್ಲರೂ ಒಂದು ಸಂಸ್ಥೆಯಲ್ಲಿ ಇದ್ದು, ನಮ್ಮ ಕಾಯಕ ನಿಷ್ಠೆಯಲ್ಲೇ ದೇವರು ಬಸವಣ್ಣರನ್ನು ಕಾಣುವ ಕೆಲಸ ಆಗಬೇಕಿದೆ. ಅಂದಿನ ಕಾಲದಲ್ಲೇ ಸಮಾನ ಧರ್ಮ ನೀಡಿ ರಾಜ್ಯದ ಸುಧಾರಣೆ ಮಾಡುತ್ತಾರೆ. ಇಂದಿನ ಸಂಸತ್ ಅನ್ನು ಅಂದಿನ ಕಾಲದಲ್ಲೇ ಅನುಭವ ಮಂಟಪದಲ್ಲಿ ಮಾಡಿದ್ದರು. ಇದರಲ್ಲಿ ಪ್ರತಿಯೊಬ್ಬರಿಗೂ ಒಂದೊಂದು ಅಧಿಕಾರ ಕೊಟ್ಟಿದ್ದರು. ಅಂತಹವರು ನಮ್ಮ ರಾಜ್ಯದಲ್ಲಿ ಹುಟ್ಟಿ ನಮ್ಮೆಲ್ಲರಿಗೂ ಕೀರ್ತಿ ತಂದಿದ್ದಾರೆ. ಎಂದರು.

ಮೈಮುಲ್ ನಿರ್ದೇಶಕ ಓಂ ಪ್ರಕಾಶ್ ಮಾತ ನಾಡಿ, ಇಲ್ಲಿ ಜಾತಿ ವರ್ಗದ ನೌಕರರು ಒಕ್ಕೂಟವನ್ನು ಕಟ್ಟಿ ಬೆಳೆಸಲು ಶ್ರಮವಹಿಸುತ್ತಿದ್ದೇವೆ. 12ನೇ ಶತ ಮಾನದಲ್ಲೇ ಜಾತಿ ತಾರತಮ್ಯದ ವಿರುದ್ಧ ಬಸವಣ್ಣ ನವರು ಹೋರಾಟ ಮಾಡಿದರೂ ಇಂದಿಗೂ ಸಹ ಜಾತಿ ಕಲಂ ಜೀವಂತವಾಗಿ ಇರಿಸಲಾಗಿದೆ. ಎಲ್ಲರನ್ನೂ ಮುಖ್ಯವಾಹಿನಿಗೆ ತರುವ ಅನುಭವ ಮಂಟಪ ಜಾರಿಗೆ ತಂದಿದ್ದರು. ಎಷ್ಟೇ ವರ್ಷ ಕಳೆ ದರೂ ಸಹ ಬಸವಣ್ಣನವರ ವಚನಗಳು ಜೀವಂತ ವಾಗಿ ಜನರಿಗೆ ನೇರವಾಗಿ ಅರ್ಥವಾಗುತ್ತವೆ. ಎಂದು ಹೇಳಿದರು.

ಮೈಮುಲ್ ನಿರ್ದೇಶಕ ಬಿ.ಎನ್.ಸದಾನಂದ ಮಾತನಾಡಿ, ಬಸವಣ್ಣ ವಚನಕ್ರಾಂತಿ ಮೂಲಕ ಸಮಾನತೆ, ಸಮ ಸಮಾಜಕ್ಕಾಗಿ ಹಾಗೂ ಮಹಿಳೆ ಯರಿಗೂ ಸಮಾನ ಅವಕಾಶ, ಸಮಾನವಾಗಿ ಕಾಣಬೇಕೆಂದು ಪ್ರತಿಪಾದಿಸಿದರು. ಇಂತಹ ಆಧುನಿ ಕಯುಗದಲ್ಲೂ 12ನೇ ಶತಮಾನದಲ್ಲೇ ಮಹಿಳೆಯ ರಿಗೆ ವಿಶೇಷ ಸ್ಥಾನಮಾನ ಕಲ್ಪಿಸಿದ್ದರು. ಬಸವ ತತ್ವ, ಸಂದೇಶ, ಆದರ್ಶಗಳನ್ನು ಪಾಲಿಸುತ್ತಿದ್ದೇವೆಯೇ ಆತ್ಮ ವಿಮರ್ಶೆ ಮಾಡಿಕೊಳ್ಳಬೇಕಿದೆ. ಮಂಗಳ ಗ್ರಹಕ್ಕೆ ಪಾದಾರ್ಪಣೆ ಮಾಡುತ್ತಿದ್ದರು. ಇಂದಿಗೂ ಜಾತಿ ಎಂಬ ಮೌಢ್ಯ ನಮ್ಮನ್ನು ಬಿಟ್ಟು ಹೋಗಿಲ್ಲ. ಬಸವಣ್ಣನವರು ಆಡು ಭಾಷೆಯ ವಚನಗಳ ಸಾರದಲ್ಲಿ ಇವನ್ಯಾರುವ ಎನ್ನಬೇಡಿ ಇವ ನಮ್ಮವ ಎಂದಿದ್ದಾರೆ. ಆದರೆ, ಇಂದಿಗೂ ನಾವು ಇವ ಯಾವ ಜಾತಿ ಎಂಬ ನೋಡುವ ಮನಸ್ಥಿತಿಯಲಿ ದ್ದೇವೆ. ನಮ್ಮಲ್ಲಿ ಜಾತಿ ವ್ಯವಸ್ಥೆ ತೊಲಗಿದರೆ ದೇಶ, ಮನೆ ಹಾಗೂ ಮನಸ್ಸು ಅಭಿವೃದ್ಧಿ ಸಾಧ್ಯ ಎಂದು ಎಲ್ಲಾ ಸಮಾಜ ಸುಧಾರಕರ ಪ್ರತಿಪಾದನೆ ಆಗಿತ್ತು ಎಂದು ಹೇಳಿದರು. ಅಂಬೇಡ್ಕರ್, ಕನಕದಾಸರು ಸೇರಿ ಮೊದಲಾದವರೆಲ್ಲರೂ ಅಭಿವೃದ್ಧಿ ಬಗ್ಗೆ ಮಾತನಾ ಡಿಲ್ಲ. ಏಕೆಂದರೆ ಸಮಸಮಾಜ ನಿರ್ಮಾಣವಾದರೆ ದೇಶದ ಅಭಿವೃದ್ಧಿ ತಾನಾಗಿಯೇ ಆಗಲಿದೆ ಎಂಬು ದನ್ನು ಮನಗಂಡಿದ್ದರೆಂದರು. 21ನೇ ಶತಮಾನಕ್ಕೆ ಕಾಲಿಟ್ಟಿದ್ದರೂ ಎಲ್ಲರೂ ನಮ್ಮವರೇ ಎಂಬ ಬಸವ ಣ್ಣನವರ ಆಶಯದಡಿ ನೋಡಲು ಆಗುತ್ತಿಲ್ಲ. ಮುಂದಿನ ದಿನಗಳಲ್ಲಿಯಾದರೂ ಬಸವಣ್ಣನವರ ಆದರ್ಶಗ ಳನ್ನು ಪಾಲಿಸಿದರೆ ಅದೇ ಅವರಿಗೆ ಗೌರವ ಕೊಟ್ಟಂತೆ ಆಗಲಿದೆ ಎಂದು ಹೇಳಿದರು. ಮೈಮುಲ್ ಅಧ್ಯಕ್ಷರಾದ ಕೆ.ಈರೇಗೌಡ, ನಿರ್ದೇಶಕರಾದ ಸಿ. ಓಂ.ಪ್ರಕಾಶ್, ಬಿ.ಎನ್. ಸದಾನಂದ, ಮೈಮುಲ್ ವ್ಯವಸ್ಥಾಪಕ ನಿರ್ದೇಶಕ ಕೆ.ಎನ್. ಸುರೇಶ್ ನಾಯ್ಕ್, ಹಾಗೂ ಒಕ್ಕೂಟದ ಎಲ್ಲಾ ವಿಭಾಗಗಳ ವ್ಯವಸ್ಥಾಪ ಕರು ಹಾಗೂ ಉಪ ವ್ಯವಸ್ಥಾಪಕರುಗಳು, ಮೈಸೂರು ಜಿಲ್ಲಾ ಹಾಲು ಒಕ್ಕೂಟದ ನೌಕರ ಸಂಘದ ಪದಾಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರು ಹಾಜರಿದ್ದು ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

> ಸಾಂಸ್ಕೃತಿಕ ನಾಯಕ ಬಸವೇಶ್ವರ ಜಯಂತಿ ಆಚರಿಸುತ್ತಿದ್ದೇವೆ. ಅಸ ಮಾನತೆ, ಅಸ್ಪೃಶ್ಯತೆಯನ್ನು ನೋಡಿ ದ್ದರು. ಮಾನವ ಧರ್ಮದಲ್ಲಿ ದೊಡ್ಡ ದಲ್ಲ ದಯೆಯೇ ದೊಡ್ಡದು ಎಂದು ಸಾರಿ ದರು. ಯಾವುದೇ ಸಮುದಾಯದಲ್ಲಿ ಜನಿಸಿ ದರು ಎಲ್ಲರನ್ನೂ ಸಮಾನವಾಗಿ ಕಾಣಬೇ ಕೆಂಬ ತತ್ವದಡಿಯಲ್ಲಿ ಮಾನವಧರ್ಮದ ಬಗ್ಗೆ ಅರಿವು ಮೂಡಿಸುತ್ತಾರೆ. ವೈಜ್ಞಾನಿಕವಾಗಿಯೂ ಸಹ ದೊಡ್ಡಮಟ್ಟದಲ್ಲಿಯೂ ಅಂದೇ ಅನುಸ ರಿಸಿದ್ದರು. ಭಾರತದ ನಿಜವಾದ ಮಾರ್ಟಿನ್ ಲೂಥ್‌ರ್ ಬಸವಣ್ಣನವರಾಗಿದ್ದಾರೆ.
>
> **–ಕೆ.ಎನ್. ಸುರೇಶ್ ನಾಯ್ಕ್**
> ವ್ಯವಸ್ಥಾಪಕ ನಿರ್ದೇಶಕ, ಮೈಮುಲ್

> ಮಾನವೀಯತೆ ಮತ್ತು ಸಮಾನತೆ ಬಗ್ಗೆ ಹೆಚ್ಚಾಗಿ ಹೇಳಿದರು. ಎಲ್ಲರೂ ಸಮಾನರು ಎಂಬುದನ್ನು ಅಂದೇ ಬಸವಣ್ಣನವರು ಹೇಳಿದ್ದರು. ಶಿಕ್ಷಣದ ಬಗ್ಗೆ ಹೆಚ್ಚು ಹೇಳಿದ್ದು, ಮಹಿಳಾ ಶಿಕ್ಷಣಕ್ಕೆ ಆದ್ಯತೆ ನೀಡಬೇಕೆಂದು ಹೇಳಿದ್ದರು. ಕಾಯಕದ ಬಗ್ಗೆ ಹೆಚ್ಚಾಗಿ ತಿಳಿಸಿದ್ದು, ಕಾಯಕನಿಷ್ಠೆಯಿಂದ ಮಾತ್ರ ಬಸವಣ್ಣನವರಿಗೆ ನಿಜವಾದ ಗೌರವ ನೀಡಲು ಸಾಧ್ಯವಾಗುತ್ತದೆ. ದಯೆ, ಕರುಣೆಯಿಂದ ಮಾತ್ರ ಮಾನವೀಯತೆ ಬರಲು ಸಾಧ್ಯ. ಇಂದಿನ ಶತಮಾನದ ವಿಚಾರಗಳನ್ನು ಅಂದೇ ಹೇಳಿದ್ದಾರೆ. ಅವರ ಮಾತುಗಳು ಇಂದಿಗೂ ಪ್ರಸ್ತುತ ವಚನಗಳಾಗಿದ್ದು, ಅವರ ತತ್ವವನ್ನು ನಾವೆಲ್ಲರೂ ಅನುಸರಿಸಬೇಕಿದೆ.
>
> **ಎಚ್. ಕೆ. ಜಯಶಂಕರ**
> ಮಾರುಕಟ್ಟೆ ವ್ಯವಸ್ಥಾಪಕ, ಮೈಮುಲ್

# ವರ್ಷದಲ್ಲಿ ಪತ್ರಿಕಾ ಭವನ ನಿರ್ಮಾಣ ಪೂರ್ಣ

## ಸಿ.ಪಿ.ವೈ ಆಶಯ | ಚನ್ನಪಟ್ಟಣದಲ್ಲಿ 2 ಕೋಟಿ ರೂ. ವೆಚ್ಚದ ಕಾಮಗಾರಿಗೆ ಚಾಲನೆ



ಚನ್ನಪಟ್ಟಣ/ರಾಮನಗರ: ಚನ್ನಪಟ್ಟಣ ತಾಲ್ಲೂಕು ಪತ್ರಿಕಾ ಭವನಕ್ಕೆ ತಾವು ವಿಶೇಷ ಕಾಳಜಿ ವಹಿಸಿದ್ದು, ಜವಾಬ್ದಾರಿ ಇರುವ ಎಲ್ಲರೂ ಮುಕ್ತವಾಗಿ ಸಹಕರಿಸಿದರೆ ಒಂದು ವರ್ಷದೊಳಗೆ ಕಟ್ಟಡ ನಿರ್ಮಾಣ ಸಾಧ್ಯ ಎಂದು ಚನ್ನಪಟ್ಟಣ ಕ್ಷೇತ್ರದ ಶಾಸಕ ಸಿ.ಪಿ.ಯೋಗೇಶ್ವರ್ ಹೇಳಿದರು.

ಚನ್ನಪಟ್ಟಣ ನಗರದಲ್ಲಿ ಪತ್ರಿಕಾ ಭವನ ನಿರ್ಮಾಣಕ್ಕೆ ಭೂಮಿ ಪೂಜೆ ನೆರವೇರಿಸಿ ಅವರು ಮಾತನಾಡಿದರು. ನಗರದ ಹೃದಯ ಭಾಗದಲ್ಲಿ ಪತ್ರಿಕಾ ಭವನಕ್ಕೆ ಸ್ವಂತ ನಿವೇಶನವನ್ನು ಸರ್ಕಾರ ನೀಡಿದೆ. ಪತ್ರಕರ್ತರು ತಮ್ಮ ಕಾರ್ಯಚಟುವಟಿಕೆಗಳ ಅನುಕೂಲಕ್ಕಾಗಿ ಪತ್ರಿಕಾ ಭವನ ಅವಶ್ಯಕವಾಗಿದೆ. ಪತ್ರಿಕಾ ಭವನ ನಿರ್ಮಾಣಕ್ಕೆ ಸುಮಾರು 2 ಕೋಟಿ ರೂ ಅಂದಾಜು ವೆಚ್ಚವಾಗಬಹುದು. ಸರ್ಕಾರದಿಂದ ಇಷ್ಟೊಂದು ಅನುದಾನ ತರಲು ಆಗದು, ಪತ್ರಕರ್ತರ ಭವನ ನಿರ್ಮಾಣಕ್ಕೆ ದಾನಿಗಳು, ಜನಪ್ರತಿನಿಧಿಗಳು, ಸಂಘ ಸಂಸ್ಥೆಗಳು ಸಹಾಯ ಸಹಕಾರ ಮಾಡುವ ವಿಶ್ವಾಸವಿದೆ. ಪತ್ರಕರ್ತರೆಲ್ಲರೂ ಒಟ್ಟಾಗಿ ನಿಂತು ದಾನಿಗಳ ಸಹಾಯ ಸಹಕಾರವನ್ನು ಪಡೆದು ತಮ್ಮೊಂದಿಗೆ ಸಹಕರಿಸಿದರೆ ಒಂದು ವರ್ಷದೊಳಗೆ ಪತ್ರಿಕಾ ಭವನವನ್ನು ಪೂರ್ಣಗೊಳಿಸುವ ವಿಶ್ವಾಸವನ್ನು ಅವರು ವ್ಯಕ್ತಪಡಿಸಿದರು.

### ಪತ್ರಕರ್ತರ ಬೆನ್ನೆಲುಬಾಗಿ ನಿಲ್ಲುವೆ–ಡಾ. ಮಲ್ಲೇಶ್ ಗುರೂಜಿ

ಗೌಡಗೆರೆ ಶ್ರೀ ಚಾಮುಂಡೇಶ್ವರಿ ಬಸವಪ್ಪ ಪುಣ್ಯ ಕ್ಷೇತ್ರದ ಧರ್ಮದರ್ಶಿಗಳಾದ ಡಾ. ಮಲ್ಲೇಶ್ ಗುರೂಜಿ ಮಾತನಾಡಿ, ಇಂದು ಪವಿತ್ರವಾದ ದಿನ. ಬಸವಜಯಂತಿ ಮತ್ತು ಅಕ್ಷಯ ತೃತೀಯ ದಿನ. ಈ ಶುಭ ದಿನದಲ್ಲಿ ಯಾವುದೇ ಕಾರ್ಯ ಕೈಗೊಂಡರೂ ಪೂರ್ಣಗೊಳ್ಳುತ್ತದೆ ಎಂಬ ನಂಬಿಕೆ. ಇಂದು ಪತ್ರಕರ್ತರ ಬಹುದಿನಗಳ ಕನಸು ನನಸಾಗುತ್ತಿದೆ. ಈ ಕಾರ್ಯಕ್ಕೆ ನಾನು ನಿಮ್ಮ ಬೆನ್ನೆಲುಬಾಗಿ ನಿಲ್ಲುತ್ತೇನೆ. ಸಹಾಯ ಸಹಕಾರ ಸದಾ ಇರುತ್ತದೆ. ನಾನು ನಿಮ್ಮ ಜೊತೆ ನಿಲ್ಲುತ್ತೇನೆ. ನಿಮ್ಮೆಲ್ಲರ ಆಶಯದಂತೆ ಪತ್ರಿಕಾ ಭವನ ಬೇಗ ಪೂರ್ಣಗೊಳ್ಳಲಿ ಎಂದು ಆಶಯವನ್ನು ವ್ಯಕ್ತಪಡಿಸಿದರು.

### ಒಗ್ಗಟ್ಟಾಗಿ ನಿಲ್ಲಿ – ಶಿವಾನಂದ ತಗಡೂರು

ಕೆಯುಡಬ್ಲುಜೆ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಅವರು ಮಾತನಾಡಿ, ಪತ್ರಕರ್ತರೆಲ್ಲರೂ ಒಟ್ಟಾಗಿ ಅವಿರತವಾಗಿ ಹೋರಾಟ ಮಾಡಿ ಪಟ್ಟಣದ ಹೃದಯ ಭಾಗದಲ್ಲಿ ಸ್ವಂತ ನಿವೇಶನವನ್ನು ಹೊಂದಿ ಇಂದು ಶಾಸಕರಾದ ಸಿ.ಪಿ.ಯೋಗೇಶ್ವರ್ ಅವರ ಸಹಕಾರದೊಂದಿಗೆ ಸುಸಜ್ಜಿತ ಪತ್ರಿಕಾ ಭವನ ನಿರ್ಮಾಣಕ್ಕೆ ಮುಂದಾಗಿರುವುದು ಶ್ಲಾಘನೀಯ. ಸಣ್ಣ ಪುಟ್ಟ ಭಿನ್ನಾಭಿಪ್ರಾಯಗಳನ್ನು ಮರೆತು ಒಟ್ಟಾಗಿ ಪತ್ರಿಕಾ ಭವನ ನಿರ್ಮಾಣವನ್ನು ಒಂದು ವರ್ಷದೊಳಗೆ ಪೂರ್ಣಗೊಳಿಸಿ ಇದೇ ಬಸವ ಜಯಂತಿ ದಿನ ಪತ್ರಿಕಾ ಭವನ ಲೋಕಾರ್ಪಣೆಗೊಳಿಸಲು ಶ್ರಮಿಸುವಂತೆ ಪತ್ರಕರ್ತರಿಗೆ ಕಿವಿಮಾತು ಹೇಳಿದರು. ಬಸವ ಜಯಂತಿ ದಿನದಂದು ಕಾಮಗಾರಿಗೆ ಚಾಲನೆ ಸಿಕ್ಕಿದೆ. ಮುಂದಿನ ಬಸವ ಜಯಂತಿ ವೇಳೆಗೆ ಕಟ್ಟಡದ ಉದ್ಘಾಟನೆಯಾಗಲಿ ಎಂದು ಶುಭ ಹಾರೈಸಿದರು.

### ಬಹು ವರ್ಷಗಳ ಕನಸು – ಮತ್ತಿಕೆರೆ ಜಯರಾಂ

ಪತ್ರಕರ್ತರಿಗಾಗಿ ಸ್ವಂತ ಕಟ್ಟಡ ಹೊಂದುವುದು ತಾಲ್ಲೂಕಿನ ಪತ್ರಕರ್ತರ ಬಹು ವರ್ಷಗಳ ಕನಸು, ಸುಮಾರು 2 ಕೋಟಿ ರೂ. ವೆಚ್ಚದ ಪತ್ರಿಕಾ ಭವನ ನಿರ್ಮಾಣ ಕಾಮಗಾರಿಗೆ ಅಕ್ಷಯ ತೃತೀಯ ದಿನದಂದೇ ಚಾಲನೆ ಸಿಕ್ಕಿದೆ. ಮುಂದಿನ ವರ್ಷದ ಅಕ್ಷಯ ತೃತೀಯ ದಿನದಂದೇ ಕಟ್ಟಡದ ಉದ್ಘಾಟನೆಯಾಗಲಿ ಎಂದು ಆಶಿಸಿದರು.

ಈ ವೇಳೆ ತಹಶೀಲ್ದಾರ್ ಗಿರೀಶ್ ಬಿ.ಎನ್., ಪೌರಾಯುಕ್ತ, ಮಹೇಂದ್ರ ಬಿ., ಬಮೂಲ್ ನಿರ್ದೇಶಕ ಎಸ್.ಲಿಂಗೇಶ್‌ಕುಮಾರ್, ನಗರಸಭೆಯ ಅಧ್ಯಕ್ಷ ಬಿ.ಎಂ.ನಾಗೇಶ್, ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷ, ಹಾಲಿ ಸದಸ್ಯ ಚಂದ್ರಶೇಖರ್, ಮಾಜಿ ಅಧ್ಯಕರಾದ ಪ್ರಶಾಂತ್, ವಾಸಿಲ್ ಆಲಿ ಖಾನ್, ಬಿ.ಪಿ.ಮುದ್ದು ಕೃಷ್ಣೇಗೌಡ, ಸದಸ್ಯರಾದ ಸತೀಶ್, ಸುಮಾ ರವೀಶ್, ಮಂಜುನಾಥ್, ಎಂ.ಟಿ.ತಿಮ್ಮರಾಜು, ಸ.ನೌ. ಸಂಘದ ಅಧ್ಯಕ್ಷ ಸುದೀಂದ್ರ ಕೆ., ಸಮಾಜ ಸೇವಕರಾದ ಪ್ರಸನ್ನಕುಮಾರ್, ಗೋವಿಂದಹಳ್ಳಿ ನಾಗರಾಜು, ಎಂ.ಎನ್.ಆನಂದಸ್ವಾಮಿ, ಎಲೇಕೇರಿ ರವೀಶ್, ಡಾ.ಭಗತ್ ರಾಮ್,ಎಂ.ವೇದಮೂರ್ತಿ, ಕರಣ್ ಆನಂದ್, ಕೃಷ್ಣಮೂರ್ತಿ (ಕಿಟ್ಟಣ್ಣ) ಕೊಂಡಾಪುರ ಪ್ರಸನ್ನ, ರೇಖಾ ಉಮಾಶಂಕರ್,ಕೋಕಿಲಾ ರಾಣಿ, ಕೆ.ಟಿ.ಲಕ್ಷ್ಮಮ್ಮ,ಧರ್ಮಸ್ಥಳದ ತಾಲ್ಲೂಕು ಯೋಜನಾಧಿಕಾರಿ ರೇಷ್ಮಾ, ಎಲೇಕೇರಿ ನಂದೀಶ್, ಶಿವರಾಮೇಗೌಡ ನಾಗವಾರ, ತಿಮ್ಮೇಶ್ ಪ್ರಭು, ಡಾ.ಮಲ್ಲೇಶ್ ದ್ಯಾವಪಟ್ಟಣ. ಚಕ್ಕರೆ ಯೋಗೇಶ್, ರಾಂಪುರ ಲೋಕೇಶ್, ಎಸ್.ಸಿ.ಶೇಖರ್, ಕೋಟೆ ಸಿದ್ದರಾಮಯ್ಯ, ವೆಂಕಟೇಶ್, ಶಂಭೂಗೌಡ, ಹನುಮಂತು, ಬಿವಿಎಸ್ ಕುಮಾರ್, ಸುರೇಶ್, ಕಾಂತರಾಜು, ಅರ್ಚಕ ರಾಘವೇಂದ್ರ ಮಯ್ಯ, ಕೆಯುಡಬ್ಲ್ಯೂಜೆ ರಾಜ್ಯ ಉಪಾಧ್ಯಕ್ಷ ಮತ್ತೀಕೆರೆ ಜಯರಾಂ, ರಾಜ್ಯ ಕಾರ್ಯದರ್ಶಿ ಕೆರಗೋಡು ಸೋಮಶೇಖರ್, ಜಿಲ್ಲಾಧ್ಯಕ್ಷ ವಿಭೂತಿಕೆರೆ ಶಿವಲಿಂಗಯ್ಯ, ಜಿಲ್ಲಾ ಉಪಾಧ್ಯಕ್ಷ ಲಕ್ಷ್ಮೀಪತಿ ಮಂಗಳವಾರಪೇಟೆ, ಪ್ರಧಾನ ಕಾರ್ಯದರ್ಶಿ ಮಂಜುನಾಥ್, ಕಾರ್ಯದರ್ಶಿ ಜಗದೀಶ್, ಮಾಜಿ ಅಧ್ಯಕ್ಷ ಬಿ.ವಿ.ಸೂರ್ಯಪ್ರಕಾಶ್, ರಾಜ್ಯ ಸಮಿತಿ ಸದಸ್ಯ ಶಿವಮಾದು, ರಾಮನಗರದ ಎಂ. ಹೆಚ್.ಪ್ರಕಾಶ್, ಚಲುವರಾಜು, ಅಫ್ರೋಜ್ ಖಾನ್, ಮಧು, ಕನಕಪುರ ಗಿರೀಶ್, ತಾಲ್ಲೂಕು ಅಧ್ಯಕ್ಷ ಡಿ. ಎಂ.ಮಂಜುನಾಥ್, ಪ್ರಧಾನ ಕಾರ್ಯದರ್ಶಿ ಅಕ್ಕೂರು ರಮೇಶ್, ಉಪಾಧ್ಯಕ್ಷರಾದ ಚಿನ್ನಗಿರಿಗೌಡ, ಅರ್ಕೇಶ್, ಕಾರ್ಯದರ್ಶಿಗಳಾದ ವಿನ್ಸಂಟ್ ವಿಜಯ್, ಚೇತನ್, ಖಜಾಂಚಿ ಮೆಂಗಳ್ಳಿ ಮಹೇಶ್, ಹಿರಿಯ ಸದಸ್ಯರಾದ ಸು.ತ.ರಾಮೇಗೌಡ, ಪಿ.ವೈ. ರವೀಂದ್ರ ಹೇರ್ಳೆ, ರಮೇಶ್‌ಗೌಡ, ಬಿ.ಟಿ.ನಾಗೇಶ್, ಹೆಚ್.ರಮೇಶ್, ನಂದಕುಮಾರ್, ಶಂಕರ್, ಎ.ಟಿ.ವೆಂಕಟೇಶ್‌ಪ್ರಭು, ಸಿ.ಎನ್.ವೆಂಕಟೇಶ್, ಗೋ.ರಾ.ಶ್ರೀನಿವಾಸ್, ಕರೀಂ, ನಯಾಜ್ ಪಾಷ, ಸಾಧು ರಮೇಶ್, ಎಂ.ಎಸ್.ಸುರೇಶ್, ತಿಲಕ್‌ರಾಜ್, ಡಿ.ಎಂ.ರವಿ, ಕೃಷ್ಣಮೂರ್ತಿ, ಕುಮಾರ್, ದರ್ಶನ್, ಪ್ರದೀಪ್,ಶಿವಶಂಕರ್, ಚಂದ್ರಸಾಗರ್, ರಂಜಿತ್, ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ಕಬ್ಬಿನ ಹೆಚ್ಚುವರಿ ಹಣ ಪಾವತಿಗೆ ಆಗ್ರಹಿಸಿ ಪ್ರತಿಭಟನೆ



ಮೈಸೂರು: ರಾಜ್ಯ ಸರ್ಕಾರ ನಿಗದಿ ಮಾಡಿರುವ ಹೆಚ್ಚುವರಿ ಹಣ ನೂರು ರೂಪಾಯಿ ಕಬ್ಬು ಬೆಳೆಗಾರರಿಗೆ ಪಾವತಿ ಮಾಡದ ನಡೆಯನ್ನು ಖಂಡಿಸಿ ನೂರಾರು ರೈತರು ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಪ್ರತಿಭಟಿಸಿದರು.

ನೂರಾರು ರೈತರು ಜಿಲ್ಲಾಧಿಕಾರಿ ಕಚೇರಿ ಮುಂದೆ ಪ್ರತಿಭಟನೆ ನಡೆಸುತ್ತಾ ಕಚೇರಿಯ ಒಳಗೆ ನುಗ್ಗಲು ಯತ್ನಿಸಿದ್ದು, ಪೊಲೀಸರು ತಡೆಯಲೆತ್ನಿಸಿ ಕೊನೆಗೆ ಡಿಸಿ ಕಚೇರಿ ಬಾಗಿಲಲ್ಲೇ ಧರಣಿ ನಡೆಸಿದರು.


ಬಳಿಕ ಲೀಡ್ ಬ್ಯಾಂಕ್ ಮುಖ್ಯಸ್ಥ ಕೃಷ್ಣಮೂರ್ತಿ ಚಳುವಳಿ ಜಾಗಕ್ಕೆ ಬಂದು ಚಿನ್ನ ಗಿರವಿ ಸಾಲ ಸಿಬಿಲ್ ಸ್ಕೋರ್ ಕೇಳಬಾರದು. ಚಿನ್ನ ಪರೀಕ್ಷೆ ಮಾಡುವ ಶುಲ್ಕ150 ರಿಂದ 200 ಪಡೆದುಕೊಳ್ಳಬಹುದು ಹೆಚ್ಚುವರಿ ಪಡೆದುಕೊಂಡರೆ ದೂರು ನೀಡಬಹುದು ಎಂದು ತಿಳಿಸಿದರು

ಕಾವೇರಿ ಗ್ರಾಮೀಣ ಬ್ಯಾಂಕ್ ಜಿಲ್ಲಾ ವ್ಯವಸ್ಥಾಪಕ ಪ್ರಮೋದ್ ನೋನಿ ಮಾತನಾಡಿ ಒಟಿಎಸ್ ಸಾಲ ತಿರುವಳಿ ಬಗ್ಗೆ ಮೇ 8 ರಂದು ರಾಜ್ಯಮಟ್ಟದ ಕಾರ್ಯನಿರ್ವಹಕ ವವ್ಯಸ್ಥಾಪಕರು ಮೈಸೂರಿನಲ್ಲಿ ಸಭೆ ನಡೆಸಿ ಸಮಸ್ಯೆ ಬಗೆಹರಿಸುವವರು ಎಂದರು.

ಜಿಲ್ಲೆಯ ವಿದ್ಯುತ್ ಸಮಸ್ಯೆಗಳಿಗೆ ಶೀಘ್ರದಲ್ಲಿ ರೈತ ಮುಖಂಡರ ಜೊತೆ ಸಭೆ ನಡೆಸಿ ಸಮಸ್ಯೆ ಬಗೆಹರಿಸುವುದಾಗಿ ಕಾರ್ಯನಿರ್ವಾಹಕ ಅಭಿಯಂತರು ತಿಳಿಸಿದರು. ಈ ವೇಳೆ ಪ್ರತಿಭಟನಾಕಾರವನ್ನು ಉದ್ದೇಶಿಸಿ ಮಾತನಾಡಿದ ರಾಜ್ಯ ಕಬ್ಬು ಬೆಳೆಗಾರ ಸಂಘದ ರಾಜ್ಯಾಧ್ಯಕ್ಷ ಕುರುಬೂರ್ ಶಾಂತಕುಮಾರ್, ರೈತರ ಸಂಕಷ್ಟ ಅರಿಯದ ಬಣ್ಣಾರಿ ಸಕ್ಕರೆ ಕಾರ್ಖಾನೆ ರೈತರನ್ನ ನಿರಂತರ ಶೋಷಣೆ ಮಾಡುತ್ತಿದೆ.

ಪ್ರತಿ ವರ್ಷವು ಸರ್ಕಾರದ ಆದೇಶವನ್ನು ಉಲ್ಲಂಘನೆ ಮಾಡುತ್ತಲೇ ರೈತರನ್ನು ವಂಚಿಸುತ್ತ ಸಕ್ಕರೆ ಕಾರ್ಖಾನೆ ನಡೆಸುತ್ತಿರುವ ಬಣ್ಣಾರಿ ಕಾರ್ಖಾನೆ ಮಾಲೀಕರನ್ನು ಜೈಲಿಗೆ ಕಳಿಸಬೇಕು. ಇಂತಹ ಉಪಟಳದಿಂದಲೇ ರೈತರು ಕಬ್ಬು ಬೆಳೆಯನ್ನ ಕಡಿಮೆ ಮಾಡಿದ್ದಾರೆ. 15 ಲಕ್ಷ ಟನ್ ಕಬ್ಬು ಅರೆಯುವ ಸಾಮರ್ಥ್ಯ ಇರುವ ಬಣ್ಣಾರಿ ಕಾರ್ಖಾನೆಗೆ ಕೇವಲ ಏಳುವರೆ ಲಕ್ಷ ಟನ್ ಮಾತ್ರ ಸರಬರಾಜು ಮಾಡಿದ್ದಾರೆ. ಈ ಕಬ್ಬಿನ ಹೆಚ್ಚು ಹೆಚ್ಚುವರಿ ಹಣ ಏಳುವರೆ ಕೋಟಿ ರೈತರಿಗೆ ಪಾವತಿಸದೆ ನಾಟಕವಾಡುತ್ತಿದ್ದಾರೆ. ಕೂಡಲೇ ಜಿಲ್ಲಾಧಿಕಾರಿಗಳು ಸಕ್ಕರೆ ಗೋಧಾಮ ವಶಕ್ಕೆ ಪಡೆದು ಸಕ್ಕರೆ ಮಾರಾಟ ಮಾಡಿ ರೈತರ ಹಣ ಕೊಡಿಸಬೇಕು ಎಂದು ಒತ್ತಾಯಿಸಿದರು ಕೇಂದ್ರ ಸರ್ಕಾರ ಎಥಾಲ್ ಅನ್ನು ಪೆಟ್ರೋಲ್ ಜೊತೆ ಶೇಕಡ ಇಪ್ಪತ್ತರಷ್ಟು ಮಿಶ್ರಣ ಮಾಡಲು ಸೂಚನೆ ನೀಡಿರುವುದು ಸ್ವಾಗತಾರ್ಹ ಎಂದರು. ಚಳುವಳಿ ನಿರತ ರೈತರು ಕಬ್ಬಿನ ಹಣ ಕೊಡಿಸುವ ತನಕ ನಿರಂತರ ಪ್ರತಿಭಟನಾ ಧರಣಿ ನಡೆಸಲು ತೀರ್ಮಾನಿಸಿರುವುದಾಗಿ ಹೇಳಿದರು. ಇಂದಿನ ಚಳುವಳಿಯಲ್ಲಿ ಅತ್ತಹಳ್ಳಿ ದೇವರಾಜ್, ಬರಡನಪುರ ನಾಗರಾಜ್, ಕಿರಗಸೂರು ಶಂಕರ್, ಮೂಕಳ್ಳಿ ಮಹದೇವಸ್ವಾಮಿ, ಪಟೇಲ್ ಶಿವಮೂರ್ತಿ, ಉಡಿಗಾಲ ರೇವಣ್ಣ, ಸೋಮಶೇಖರ್, ಮಾರ್ಬಳ್ಳಿ ನೀಲಕಂಠಪ್ಪ, ವರಕೋಡು ನಾಗೇಶ್, ಲಕ್ಷ್ಮೀಪುರ ವೆಂಕಟೇಶ್,, ಕುರುಬೂರು ಸಿದ್ದೇಶ್, ದೇವನೂರು ವಿಜಯೇಂದ್ರ, ಮಹದೇವಸ್ವಾಮಿ, ಕೆಂಡಗಣ್ಣಪ್ಪ, ನಾಗೇಶ್, ಕುರುಬೂರು ಪ್ರದೀಪ್, ಪ್ರಸಾದ್ ನಾಯಕ, ಗೌರಿಶಂಕರ್, ಗುರುಸ್ವಾಮಿ, ಅಂಬಳೆ ಮಂಜುನಾಥ್, ಪರಶಿವಮೂರ್ತಿ, ಸಾತಗಳ್ಳಿ ಬಸವರಾಜ, ಸುಂದರಪ್ಪ, ಸತೀಶ್, ದೇವನೂರು ಮಹಾದೇವಪ್ಪ, ರಂಗರಾಜು, ಕೆಂಡಗಣಸ್ವಾಮಿ, ಶಿವಸ್ವಾಮಿ, ರವಿಕುಮಾರ್, ನಂಜುಂಡಸ್ವಾಮಿ, ನಾಗೇಂದ್ರ, ಕಮಲಮ್ಮ ಸೇರಿ ಇನ್ನಿತರರು ಇದ್ದರು.

# ವಿಶ್ವಗುರು ಜಗಜ್ಯೋತಿ ಬಸವಣ್ಣ ಜಯಂತಿ



ಚಾಮರಾಜನಗರ.ನಗರದ ಜಿಲ್ಲಾ ಡಾ.ಬಾಬು ಜಗ ಜೀವನರಾಮ್ ಸಂಘಟನೆಗಳ ಒಕ್ಕೂಟದ ವತಿಯಿಂದ ವಚನಗಳ ಮೂಲಕ ಸಾಮಾಜಿಕ ಅರಿವು ಹರಡಿದ ಶ್ರೀ ವಿಶ್ವಗುರು ಜಗಜ್ಯೋತಿ ಬಸವಣ್ಣನವರ ಜಯಂತಿ ಆಚರಿಸಲಾಯಿತು,

ಜಿಲ್ಲಾ ಡಾ.ಬಾಬು ಜಗಜೀವನರಾಮ್ ಸಂಘಟನೆಗಳ ಒಕ್ಕೂಟದ ಗೌರವ ಅಧ್ಯಕ್ಷರು, ಒಕ್ಕೂಟದ ಅಧ್ಯಕ್ಷ ಹಾಗೂ ಸದಸ್ಯರು ಯಜಮಾನರು, ಮುಖಂಡರು, ಶ್ರೀ ವಿಶ್ವಗುರು ಜಗಜ್ಯೋತಿ ಬಸವಣ್ಣನವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸಿದರು. ಕಾರ್ಯಕ್ರಮದಲ್ಲಿ ಜಿಲ್ಲಾ ಡಾ.ಬಾಬು ಜಗಜೀವನರಾಮ್ ಸಂಘಟನೆಗಳ ಒಕ್ಕೂಟದ ಗೌರವ ಅಧ್ಯಕ್ಷ ಬಸವನಪುರ ರಾಜಶೇಖರ್, ಜಿಲ್ಲಾ ಡಾ.ಬಾಬು ಜಗಜೀವನರಾಮ್ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಎಚ್,ಎಚ್, ನಾಗರಾಜು, ಗ್ರಾ,ಪಂ ಮಾಜಿ ಅಧ್ಯಕ್ಷ ಮಹದೇವಯ್ಯ ಅರಕಲವಾಡಿ, ವೀರಶೈವಮುಖಂಡ ಬ್ಯಂಗೇಶ್, ಸಂಘದ ಪ್ರಧಾನ ಕಾರ್ಯದರ್ಶಿಎಂ,ಶಿವಕುಮಾರ್, ಸಹಕಾರ್ಯದರ್ಶಿಶಿವಕುಮರ್, ಯ,ಸಿದ್ದಪ್ಪಾಜಿ, ಮುಖಂಡರಾದ ರಾಮಯ್ಯ, ಲಿಂಗರಾಜು, ಸುಂದರ್, ರಾಚ್ಚಪ್ಪ, ರಾಜು,ಮಹದೇವಸ್ವಾಮಿ, ಜಯರಾಜು, ಸ್ವಾಮಿ, ಸೇರಿದಂತೆ ಇತರರು ಹಾಜರಿದ್ದರು, ಶ್ರೀ ವಿಶ್ವಗುರು ಬಸವಣ್ಣನವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸಿ ಮಾತನಾಡಿದರು.

# ಉಚಿತ ಕುಡಿಯುವ ನೀರು ಪೂರೈಕೆ



ಚಾಮರಾಜನಗರ, ಜಗಜ್ಯೋತಿ ಶ್ರೀ ಬಸವೇಶ್ವರ ಜಯಂತೋತ್ಸವ ಪ್ರಯುಕ್ತ ನಗರದಲ್ಲಿರುವ ಶ್ರೀ ಬಸವೇಶ್ವರ ಪತ್ತಿನ ಸಹಕಾರ ಸಂಘದ ಬಸವ ಮನೆಯಲ್ಲಿರುವ ಶುದ್ಧ ಕುಡಿಯುವ ನೀರಿನ ಘಟಕದಲ್ಲಿ ದಿನಪೂರ್ತಿ ಉಚಿತವಾಗಿ ಕ್ಯಾನ್‌ಗೆ ಶುದ್ಧ ಕುಡಿಯುವ ನೀರು ತುಂಬಿಸುವ ಕಾರ್ಯಕ್ಕೆ ಚಾಲನೆ ನೀಡಿದರು.

ನಗರದ ಫಾರೆಸ್ಟ್ ನರ್ಸರಿ ರಸ್ತೆಯಲ್ಲಿರುವ ಬಸವ ಮನೆಯಲ್ಲಿ ಶ್ರೀ ಬಸವೇಶ್ವರರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ಸಾರ್ವಜನಿಕರಿಗೆ ಉಚಿತವಾಗಿ ಶುದ್ಧ ಕುಡಿಯುವ ನೀರು ತುಂಬಿಸುವ ಮೂಲಕ ಸಂಘದ ಉಪಾಧ್ಯಕ್ಷ ಕುಮಾರಸ್ವಾಮಿ ಚಾಲನೆ ಕೊಟ್ಟರು. ಬಳಿಕ ಮಾತನಾಡಿದ ಅವರು, ಬಸವೇಶ್ವರರು ನಮ್ಮೆಲ್ಲರು ಪ್ರೇರಕ ಶಕ್ತಿ. 12 ನೇ ಶತಮಾನದಲ್ಲಿ ಅವರು ಮಾಡಿ ಕ್ರಾಂತಿ ಅದ್ಬುತವಾಗಿದೆ. ಅಂಥ ವಚನ ಸಂಸ್ಕೃತಿಯನ್ನು ನಮಗೆ ನೀಡಿದ್ದಾರೆ. ಶರಣರ ಪರಂಪರೆ ಲಿಂಗಾಯತ ಧರ್ಮ ಸ್ಥಾಪನೆ ಸೇರಿದಂತೆ ಸಮಾಜದಲ್ಲಿ ಅಂಕುಡೊಂಕುಗಳನ್ನು ತಿದ್ದುವ ಮೂಲಕ ಉತ್ತಮ ಸಮಾಜವನ್ನು ನಿರ್ಮಾಣ ಮಾಡಲು ತಮ್ಮ ಜೀವನವನ್ನೇ ಪಣಕ್ಕಿಟ್ಟ ಮಹಾಪುರುಷ. ಅವರ ತತ್ವ ಅದರ್ಶವನ್ನು ಎಲ್ಲರು ಮೈಗೂಡಿಸಿಕೊಳ್ಳೋಣ ಎಂದರು. ವೀರಶೈವ ನೌಕರರ ಕ್ಷೇಮಾ ಭಿವೃದ್ಧಿ ಸಂಘದ ಅಧ್ಯಕ್ಷ ಸಿದ್ದಮಲ್ಲಪ್ಪ, ಸಂಗಮ ಗೃಹ ನಿರ್ಮಾಣ ಸಂಘದ ಉಪಾಧ್ಯಕ್ಷ ಹೊನ್ನ ಮೇಟಿ ಸುಂದರಪ್ಪ, ಸಹಕಾರ ಸಂಘದ ನಿರ್ದೇಶ ಕರಾದ ಎಸ್. ಗುರುಸ್ವಾಮಿ, ವಿ.ನಂಜುಂಡಸ್ವಾಮಿ, ಎನ್. ದೊರೆಸ್ವಾಮಿ, ಸಿ.ರಾಜಶೇಖರಮೂರ್ತಿ, ಡಾ. ಪರಮೇಶ್ವರಪ್ಪ, ಕೆ.ಎಸ್.ಮಹದೇವಸ್ವಾಮಿ, ಎಂ.ಲಿಂಗರಾಜ ಮೂರ್ತಿ, ಎಚ್.ಎಂ.ಗುರು ಸ್ವಾಮಿ, ಬಿ.ನಾಗೇಂದ್ರ, ಪ್ರಮೀಳಾ ಆರ್. ಉದಗಟ್ಟಿ, ಎಸ್. ನಾಗಮಣ , ಆರ್.ಎಸ್.ಲಿಂಗರಾಜು, ಕಾರ್ಯದರ್ಶಿ ನಂಜುಂಡಸ್ವಾಮಿ, ಸಹಾಯಕ ಆಕಾಶ್ ಇತರರು ಇದ್ದರು.

ವರ್ತಮಾನ
ಜಾಹಿರಾತಿಗೆ ಉತ್ತಮ ಮಾಧ್ಯಮ

# ಏ.23ರಂದು ನಗರದಲ್ಲಿ ಶ್ರೀ ಭಗೀರಥ ಜಯಂತಿ ಕಾರ್ಯಕ್ರಮ

ಚಾಮರಾಜನಗರ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಶ್ರೀ ಭಗೀರಥ ಜಯಂತಿ ಕಾರ್ಯಕ್ರಮವನ್ನು ಏಪ್ರಿಲ್ 23ರಂದು ಬೆಳಿಗ್ಗೆ 11 ಗಂಟೆಗೆ ನಗರದ ಜಿಲ್ಲಾಧಿಕಾರಿಗಳ ನ್ಯಾಯಾಲಯ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಪಶುಸಂಗೋಪನೆ, ರೇಷ್ಮೆ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಕೆ. ವೆಂಕಟೇಶ್ ಅವರು ಕಾರ್ಯಕ್ರಮ ಉದ್ಘಾಟಿಸುವರು. ಎಂ.ಎಸ್.ಐ.ಎಲ್ ಅಧ್ಯಕ್ಷರು ಹಾಗೂ ಶಾಸಕರಾದ ಸಿ. ಪುಟ್ಟರಂಗಶೆಟ್ಟಿ ಅವರು ಅಧ್ಯಕ್ಷತೆ ವಹಿಸುವರು. ಲೋಕಸಭಾ ಸದಸ್ಯರಾದ ಸುನೀಲ್ ಬೋಸ್ ಅವರು ಘನ ಉಪಸ್ಥಿತಿ ವಹಿಸುವರು.

ಶಾಸಕರಾದ ಎ.ಆರ್. ಕೃಷ್ಣಮೂರ್ತಿ, ಹೆಚ್.ಎಂ. ಗಣೇಶ್ ಪ್ರಸಾದ್, ಎಂ.ಆರ್. ಮಂಜುನಾಥ, ಡಾ. ಡಿ. ತಿಮ್ಮಯ್ಯ, ಸಿ.ಎನ್. ಮಂಜೇಗೌಡ, ಮಧು ಜಿ. ಮಾದೇಗೌಡ, ಕೆ. ವಿವೇಕಾನಂದ, ಕಾವೇರಿ ಜಲಾನಯನ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಪಿ. ಮರಿಸ್ವಾಮಿ, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷರಾದ ಹೆಚ್.ವಿ. ಚಂದ್ರು, ಚಾಮರಾಜನಗರ–ರಾಮಸಮುದ್ರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಮಹಮದ್ ಅಸ್ಗರ್ ಅವರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು. ಚಾಮರಾಜನಗರ ತಾಲೂಕಿನ ನಾಗವಳ್ಳಿಯ ಸಮೂಹ ಸಂಪನ್ಮೂಲ ವ್ಯಕ್ತಿಗಳಾದ ಸೋಮಣ್ಣ ಅವರು ಕಾರ್ಯಕ್ರಮದಲ್ಲಿ ಮುಖ್ಯ ಭಾಷಣ ಮಾಡುವರು

## ಹಣ ಮಾಡುವ ತಂತ್ರ: ಗುರುಪ್ರಸಾದ್ ಗಂಭೀರ ಆರೋಪ

# ಕೆರೆಗಳಿಗೆ ನೀರು ತುಂಬಿಸುವ ಯೋಜನೆ ಬೋಗಸ್



ಚಾಮರಾಜನಗರ, ಗುಂಡ್ಲುಪೇಟೆ ತಾಲೂಕಿನ 110 ಕೆರೆಗಳಿಗೆ ನೀರು ತುಂಬಿಸುವ ಯೋಜನೆ ಬೋಗಸ್ ಆಗಿದ್ದು, ಚುನಾವಣೆಗೆ ಹಣ ಮಾಡುವ ತಂತ್ರಗಾರಿಕೆಯನ್ನು ಕಾಂಗ್ರೆಸ್ ಸರ್ಕಾರ ಮಾಡುತ್ತಿದೆ. ಈ ಹಿಂದೆ ಕೆರೆಗಳಿಗೆ ನೀರು ತುಂಬಿಸುವ ಯೋಜನೆಯೇ ಪೂರ್ಣಗೊಂಡಿಲ್ಲ. ಹಿಂದಿನ ಅವಧಿಯಲ್ಲಿ ಜಾರಿಗೊಂಡಿರುವ ಕೆರೆಗಳಿಗೆ ನೀರು ತುಂಬಿಸಲು ಆಗುತ್ತಿಲ್ಲ ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗು ಹಸಿರು ಸೇನೆ ರಾಜ್ಯ ಉಪಾಧ್ಯಕ್ಷ ಕಟ್ನವಾಡಿ ಡಾ.ಗುರುಪ್ರಸಾದ್ ದೂರಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು. ರೈತರ ಮನವಿಗೆ ಸ್ಪಂದನೆ ದೊರೆಯುತ್ತಿಲ್ಲ. ಪ್ರಶ್ನೆಗೆ ಅವಕಾಶ ಇಲ್ಲ, ರೈತರು ಪಾಲಿಗೆ ಈ ಸರ್ಕಾರ ಇಲ್ಲದಂತಾಗಿದೆ. ಪ್ರಜಾಪ್ರಭುತ್ವದ ಕಗ್ಗೊಲೆಯಾಗುತ್ತಿದೆ. ಸರ್ಕಾರದ ಸಾರ್ವಭೌಮ ನಿರ್ಧಾರಗಳು ಮತ್ತು ನೆಲದ ವಾಸ್ತವ ಕಳೆದ ಒಂದು ವರ್ಷದಿಂದ ಸಿದ್ದರಾಮಯ್ಯ ನೇತೃತ್ವದ ರಾಜ್ಯ ಸರ್ಕಾರವು ಚಾಮರಾಜನಗರ ಜಿಲ್ಲೆಯಲ್ಲಿ ನೀರಾವರಿ ವಿಷಯವಾಗಿ ಹಲವು ಸಾರ್ವಭೌಮ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಿದೆ. ನಾಲ್ಕು ಹಂತಗಳಲ್ಲಿ ಜಿಲ್ಲೆಯ ಕೆರೆಗಳನ್ನು ತುಂಬಿಸುವ ಮಹತ್ವಾಕಾಂಕ್ಷಿ ಯೋಜನೆ ಜಾರಿ. ಈಗ ಮತ್ತೆ 110 ಕೆರೆಗಳಿಗೆ ನೀರು ತುಂಬಿಸುವ ಹೊಸ ಯೋಜನೆಗೆ ಚಾಲನೆ ಸಿಕ್ಕಿದೆ ಆದರೆ ಶಂಕುಸ್ಥಾಪ ವ್ಯಾಪ್ತಿಯಲ್ಲಿ ಬರುವ ಕೆರೆಗಳಿಗೆ ಕಳೆದ 5 ವರ್ಷಗಳಲ್ಲಿ ಒಂದು ವರ್ಷವೂ ಪೂರ್ಣ ಪ್ರಮಾಣದಲ್ಲಿ ನೀರು ಹರಿದಿಲ್ಲ. ಸರ್ಕಾರದ ನಿರ್ಧಾರ ಕಡತದಲ್ಲಿ ಮಾತ್ರ ಉಳಿದಿದೆ.ರೈತರ ಜಮೀನಿಗೆ ನೀರು ಬಂದಿಲ್ಲ. ಕಳೆದ ವರ್ಷದ ಮನವಿಗೆ ಸರ್ಕಾರದಿಂದ ಉತ್ತರ ಇಲ್ಲ ಎಂದರು.

### ಅರ್ಟಿಕಲ್ 19ರ ಉಲ್ಲಂಘನೆ

ಶಾಂತಿಯುತ ಉದ್ದೇಶ ಮತ್ತು ಇದಕ್ಕಾಗಿ ನಾವು ಕಾನೂನು ಪಾಲಿಸುವ ನಾಗರಿಕರಾಗಿ ಏ.17ರಂದೇ ಜಿಲ್ಲಾ ಎಸ್ಪಿ ಅವರಿಗೆ ಮನವಿ ಮಾಡಿದ್ದೇವೆ. ಅದರೆ, ಕಾನೂನು ಸುರಕ್ಷತೆ ಹಿತದೃಷ್ಟಿಯಿಂದ ನಿರಾಕರಿಸಲಾಗಿದೆ ನಿಮ್ಮ ಪ್ರತಿಭಟನೆಗೆ ಅನುಮತಿ ನೀಡಲು ಆಗುವುದಿಲ್ಲ ಎಂದು ಹಿಂಬರ ನೀಡುವ ಮೂಲಕ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಹಕ್ಕುಗಳನ್ನು ಕೇಳುವ ನಮ್ಮ ಬಾಯಿ ಮುಚ್ಚಿಸುವ ಪ್ರಯತ್ನ ಇದಾಗಿದೆ ಎಂದರು.

### ಮೂಲಭೂತ ಹಕ್ಕಿನ ಹರಣ

ಸಂವಿಧಾನದ ಅನುಚ್ಛೇದ 19(1)(ಚಿ) – ಅಭಿವ್ಯಕ್ತಿ ಸ್ವಾತಂತ್ರ್ಯ ಮತ್ತು 19(1)(ಛ) – ಶಾಂತಿಯುತವಾಗಿ ಸಭೆ ಸೇರುವ ಹಕ್ಕು ಅನ್ನು ಯಾವುದೇ ತುರ್ತು ಪರಿಸ್ಥಿತಿ ಇಲ್ಲದೆ ಮೊಟಕುಗೊಳಿಸಲಾಗಿದೆ. ಮನವಿ ಕೊಟ್ಟರೂ ಸ್ಪಂದನೆ ಇಲ್ಲ. ಶಾಂತಿಯುತವಾಗಿ ಪ್ರಶ್ನೆ ಮಾಡಿದರೆ ಅನುಮತಿ ನೀಡದೇ ಪ್ರಜಾಪ್ರಭುತ್ವದ ಕಗ್ಗೊಲೆಮಾಡಲಾಗುತ್ತಿದೆ ಎಂದು ಹೇಳಿದರು. ಗೋಷ್ಠಿಯಲ್ಲಿ ಜಿಲ್ಲಾಧ್ಯಕ್ಷ ಮಾಡ್ರಹಳ್ಳಿ ಎಸ್. ಮಹದೇವಪ್ಪ, ಜಿಲ್ಲಾ ಸಂಚಾಲಕ ಮೂರ್ತಿ, ಯಳಂದೂರು ತಾಲೂಕು ಅಧ್ಯಕ್ಷ ಪುಟ್ಟಬುದ್ದಿ, ತಾಲೂಕು ಅಧ್ಯಕ್ಷ ಹಿರಿಗಾಟಿ ಚಿಕ್ಕಣ್ಣ, ಅಂಬಲೆ ವಿಜಿ. ಮಹದೇವಸ್ವಾಮಿ, ಮಹದೇವಪ್ಪ, ಇತರರು ಹಾಜರಿದ್ದರು.


# ರೈತ ಸಂಘದಿಂದ ಮುಖ್ಯಮಂತ್ರಿ ಸಿದ್ದರಾಮಯ್ಯಗೆ ಮನವಿ

**ಗುಂಡ್ಲುಪೇಟೆ:** ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ರೈತ ಸಂಘದ ಪದಾಧಿಕಾರಿಗಳು ಸಿಎಂ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಿದರು.

ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಲು ಪಟ್ಟಣಕ್ಕೆ ಆಗಮಿಸಿದ ಸಿಎಂ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿದ ಕರ್ನಾಟಕ ರಾಜ್ಯ ರೈತ ಕಬ್ಬು ಬೆಳೆಗಾರ ಸಂಘದ ಮುಖಂಡರು ಜಿಲ್ಲೆಯ ರೈತರ ಸಮಸ್ಯೆಗಳು ಹಾಗೂ ಇತರೆ ಹಲವು ಬೇಡಿಕೆಗಳ ಕುರಿತು ಮನವಿ ಸಲ್ಲಿಸಿದರು.

ಜಿಲ್ಲೆಯಲ್ಲಿ ಅಕ್ರಮ ಗಣಿಗಾರಿಕೆ ಹೆಚ್ಚಾಗಿದ್ದು ಜಿಲ್ಲಾಡಳಿತ ಯಾವುದೇ ಕ್ರಮಕೈಗೊಳ್ಳದೇ ವಿಫಲವಾಗಿದೆ. ಹೆಚ್ಚಿನ ಭಾರದ ಟಿಪ್ಪರ್ ವಾಹನಗಳ ಸಂಚಾರದಿಂದ ಗ್ರಾಮೀಣ ರಸ್ತೆಗಳು ಹಾಳಾಗಿದ್ದು, ಅಪಘಾತಗಳು ಹೆಚ್ಚಾಗುತ್ತಿರುವುದರ ನಡುವೆಯೂ ಯಾವುದೇ ಕ್ರಮ ಕೈಗೊಳ್ಳಲಾಗುತ್ತಿಲ್ಲ ಎಂದು ಮನವಿಯಲ್ಲಿ ತಿಳಿಸಲಾಗಿದೆ.

ಚಾಮರಾಜನಗರ-ನಂಜನಗೂಡು ರಾಷ್ಟ್ರೀಯ ಹೆದ್ದಾರಿಯ ಪಣ್ಯದಹುಂಡಿ ಗ್ರಾಮದ ಬಳಿ ನಿರ್ಮಾಣವಾಗುತ್ತಿರುವ ರೈಲ್ವೆ ಮೇಲ್ಸುವೆ ಕಾಮಗಾರಿಗೆ



ವಶಪಡಿಸಿಕೊಂಡ ರೈತರ ಜಮೀನುಗಳಿಗೆ ಸಮರ್ಪಕ ಪರಿಹಾರ ನೀಡಿಲ್ಲ. ಕೂಡಲೇ ರೈತರಿಗೆ ಗುಂಟೆಗೆ ಕನಿಷ್ಠ15 ಲಕ್ಷ ರೂ ಪರಿಹಾರ ನೀಡಬೇಕು. ಜನರು ಮತ್ತು ಜಾನುವಾರುಗಳ ಸಂಚಾರಕ್ಕೆ ಅನುಕೂಲವಾಗುವಂತೆ ಬಸ್ ನಿಲ್ದಾಣ ಹಾಗೂ ಅಂಡರ್‌ಪಾಸ್ ನಿರ್ಮಿಸಬೇಕು ಎಂದು ಒತ್ತಾಯಿಸಿದರು. ಕಾಡುಪ್ರಾಣಿಗಳ ಹಾವಳಿಯಿಂದ ರೈತರು ಜೀವಭಯದಲ್ಲಿ ಜೀವನ ನಡೆಸುತ್ತಿದ್ದಾರೆ. ಹುಲಿ, ಚಿರತೆ ಹಾಗೂ ಕಾಡು ಹಂದಿಗಳ ದಾಳಿಯನ್ನು ತಡೆಗಟ್ಟಲು ಶಾಶ್ವತ ಯೋಜನೆ ರೂಪಿಸಿ ಜಿಲ್ಲೆಗೆ ವಿಶೇಷ ಅನುದಾನ ನೀಡಬೇಕು ಎಂದು ಮನವಿ ಮಾಡಿದರು.

ಮೂಲೆಹೊಳೆಯಿಂದ ಗುಂಡ್ಲುಪೇಟೆ ವ್ಯಾಪ್ತಿಯ ಕೆರೆ-ಕಟ್ಟೆಗಳಿಗೆ ನೀರಾವರಿ ಯೋಜನೆ ಜಾರಿಗೊಳಿಸಬೇಕು. ರೈತರ ಸಮಸ್ಯೆಗಳ ಬಗ್ಗೆ ನಿರ್ಲಕ್ಷ್ಯ ಧೋರಣೆ ಅನುಸರಿಸುತ್ತಿರುವ ಜಿಲ್ಲಾಡಳಿತಕ್ಕೆ ಸೂಕ್ತ ನಿರ್ದೇಶನ ನೀಡಬೇಕು ಎಂದು ಆಗ್ರಹಿಸಿದರು. ಇದಕ್ಕೆ ಸ್ಪಂದಿಸಿದ ಸಿಎಂ ಸಿದ್ದರಾಮಯ್ಯ ಅವರು ಸ್ಥಳದಲ್ಲಿದ್ದ ಜಿಲ್ಲಾಧಿಕಾರಿ ಶ್ರೀರೂಪ ಅವರಿಗೆ ಸೂಚನೆ ನೀಡಿದರು. ಈ ಸಂದರ್ಭದಲ್ಲಿ ರೈತ ಸಂಘದ ಪದಾಧಿಕಾರಿಗಳು ಹಾಜರಿದ್ದರು.

## ನಾಳೆ ಶ್ರೀ ಭಗೀರಥ ಜಯಂತಿ

**ಹಾಸನ:** ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಸಹಯೋಗದಲ್ಲಿ ಏ.23 ರಂದು ಬೆಳಿಗ್ಗೆ 11 ಗಂಟೆಗೆ ನಗರದ ಹಾಸನಾಂಬ ಕಲಾಕ್ಷೇತ್ರದಲ್ಲಿ ಶ್ರೀ ಭಗೀರಥ ಜಯಂತಿ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ಮಾಜಿ ಪ್ರಧಾನ ಮಂತ್ರಿಗಳು ಹಾಗೂ ರಾಜ್ಯಸಭಾ ಸದಸ್ಯರಾದ ಹೆಚ್.ಡಿ ದೇವೇಗೌಡ ಘನ ಉಪಸ್ಥಿತರಿರಲಿದ್ದು, ಕಂದಾಯ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಕೃಷ್ಣ ಭೈರೇಗೌಡ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ, ಕರ್ನಾಟಕ ರಾಜ್ಯ ಗೃಹ ಮಂಡಳಿಯ ಅಧ್ಯಕ್ಷರು ಹಾಗೂ ಅರಸೀಕೆರೆ ಕ್ಷೇತ್ರದ ಶಾಸಕರಾದ ಕೆ.ಎಂ ಶಿವಲಿಂಗೇಗೌಡ ಅವರು ಗೌರವ ಉಪಸ್ಥಿತಿ ವಹಿಸಲಿದ್ದಾರೆ, ಶಾಸಕರಾದ ಸ್ವರೂಪ್ ಪ್ರಕಾಶ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ.

ಸಂಸದರಾದ ಶ್ರೇಯಸ್ ಎಂ. ಪಟೇಲ್, ಶಾಸಕರುಗಳಾದ ಹೆಚ್.ಡಿ ರೇವಣ್ಣ, ಸಿ.ಎನ್ ಬಾಲಕೃಷ್ಣ, ಎ.ಮಂಜು, ಹೆಚ್.ಕೆ ಸುರೇಶ್, ಸಿಮೆಂಟ್ ಮಂಜು, ವಿಧಾನ ಪರಿಷತ್ ಶಾಸಕರುಗಳಾದ ಸೂರಜ್ ರೇವಣ್ಣ, ಮಧು ಜಿ, ಮಾದೇಗೌಡ ಮುಂತದವರು ಉಪನ್ಯಾಸ ನೀಡಲಿದ್ದಾರೆ.

ಕಾರ್ಯಕ್ರಮದ ಅಂಗವಾಗಿ ಅಂದು ಬೆಳಿಗ್ಗೆ 10.30ಕ್ಕೆ ಜಿಲ್ಲಾಧಿಕಾರಿಗಳ ಕಚೇರಿ ಆವರಣದಲ್ಲಿ ಶ್ರೀ ಭಗೀರಥ ರವರ ಭಾವಚಿತ್ರಕ್ಕೆ ಪುಷ್ಪಾರ್ಚನೆಯೊಂದಿಗೆ ಮೆರವಣಿಗೆಗೆ ಚಾಲನೆ ನೀಡಲಾಗುವುದು.

## ಮಕ್ಕಳಿಗೆ ಸಂಸ್ಕಾರ ಜ್ಞಾನ ಶಿಬಿರ



**ಕೆ.ಆರ್.ಪೇಟೆ:** ತಾಲ್ಲೂಕಿನ ಕಿಕ್ಕೇರಿ ಸಮೀಪದ ಬೆಡದಹಳ್ಳಿಯ ಶ್ರೀ ಪಂಚಭೂತೇಶ್ವರ ದೇವಾಲಯದ ಮಠದಲ್ಲಿ ಮಕ್ಕಳಿಗೆ ವಸತಿ ಸಹಿತ ಸಂಸ್ಕಾರ ಜ್ಞಾನ ಶಿಬಿರವನ್ನು ಆಯೋಜನೆ ಮಾಡಲಾಗಿತ್ತು..

ಶಾಸಕ ಹೆಚ್.ಟಿ.ಮಂಜು ಕಾರ್ಯಕದಮವನ್ನು ಉದ್ಘಾಟಿಸಿ ಮಾತನಾಡಿ ಮಕ್ಕಳಿಗೆ ಶಿಕ್ಷಣದ ಜೊತೆಗೆ ಸಂಸ್ಕಾರದವನ್ನು ಕಲಿಕೆಯಾಗಬೇಕು ಅದೇ ರೀತಿ ಕಳೆದ ಮೂರು ವರ್ಷಗಳಿಂದ ಶ್ರೀ ಪಂಚಭೂತೇಶ್ವರ ಸುಕ್ಷೇತ್ರದಲ್ಲಿ ಪೀಠಾಧ್ಯಕ್ಷರದ ಶ್ರೀ ರುದ್ರುಮುನಿ ಸ್ವಾಮೀಜಿ ರವರು ಮಕ್ಕಳಿಗೆ ಸಂಸ್ಕಾರದ ಅರಿವು ಮತ್ತು ಚಿತ್ರಕಲೆ, ಸಂಗೀತಾ, ನೃತ್ಯ ಸೇರಿದಂತೆ ಹತ್ತು ಹಲವು ಕಾರ್ಯಕ್ರಮದೊಂದಿಗೆ ಸುಮಾರು 50 ಕ್ಕೂ ಹೆಚ್ಚು ಮಕ್ಕಳು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದು ಈ ಶಿಭಿರದ ಪ್ರಯೋಜನವನ್ನು ಮಕ್ಕಳು ಪಡೆದುಕೊಳ್ಳುವಂತೆ ತಿಳಿಸಿದ್ರು..

ಶ್ರೀ ಪಂಚಭೂತೇಶ್ವರ ಸುಕ್ಷೇತ್ರ ಪೀಠಾಧ್ಯಕ್ಷರಾದ ಶ್ರೀ ರುದ್ರಮುನಿ ಸ್ವಾಮೀಜಿ ಮಾತನಾಡಿ ಪ್ರತಿ ವರ್ಷದಂತೆ ದಾನಿಗಳ ಸಹಾರದೊಂದಿಗೆ ಊಟ ವಸತಿ ಸಹಿತ 10 ದಿನದ ಮಕ್ಕಳಿಗೆ ಸಂಸ್ಕಾರ ಶಿಭಿರ ಆಯೋಜನೆ ಮಾಡಲಾಗಿದ್ದು ಈ ಕಾರ್ಯಕ್ರಮಕ್ಕೆ ಧಾನಿಗಳು ಕೈಲಾದ ಸಹಾಯ ಮಾಡುವುದರ ಜೊತೆಗೆ ಮಕ್ಕಳ ಕಲಿಗೆ ಕೈ ಜೋಡಿಸುವಂತೆ ತಿಳಿಸಿದ್ರು..

ಕಾರ್ಯಕ್ರಮದಲ್ಲಿ ಶ್ರೀ ರುದ್ರಮುನಿ ಸ್ವಾಮಿಜಿ, ಶಾಸಕ ಹೆಚ್ ಟಿ ಮಂಜು, ಟಿಎಪಿ.ಎಂಎಸ್ ನಿರ್ದೇಶಕ ದೀಲೀಪ್, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಮಂಜೇಗೌಡ, ಬಿ.ಜೆ.ಪಿ ತಾಲ್ಲೂಕು ಅಧ್ಯಕ್ಷ ಸಾರಂಗಿ ನಾಗಣ್ಣ, ಉದ್ಯಮಿ ಎಂ ಎಸ್ ಸುಬ್ರಹ್ಮಣ್ಯ, ಶಿಕ್ಷಕ ಮಹೇಶ್, ಗ್ರಾಮ ಪಂಚಾಯಿತಿ ಮಾಜಿ ಉಪಾಧ್ಯಕ್ಷ ಸುನೀಲ್, ಶಿಕ್ಷಕ ಪ್ರಕಾಶ್, ಮಠದ ಕಾರ್ಯದರ್ಶಿ ಕಾಂತರಾಜು ಪತ್ರಕರ್ತರಾದ ಶ್ರೀನಿವಾಸ್, ಚಂದ್ರು ಕಾಡುಮೆಣಸ, ಸೇರಿದಂತೆ ಮತ್ತಿತ್ತರರು ಇದ್ದರು.

## ವಿಪ್ರ ಮಹಿಳಾ ಮಂಡಳಿ ವತಿಯಿಂದ ಶ್ರೀ ಶಂಕರಚಾರ್ಯರ ಜಯಂತಿ ಆಚರಣೆ

**ರಾಮನಗರ:** ಇಲ್ಲಿನ ವಿಪ್ರ ಮಹಿಳಾ ಮಂಡಳಿ ವತಿಯಿಮದ ಜಗದ್ಗುರು ಶ್ರೀ ಶಂಕರಚಾರ್ಯರ ಜಯಂತಿ ಉತ್ಸವ ಶ್ರದ್ಧಾ ಭಕ್ತಿಯಿಂದ ಆಚರಿಸಲಾಯಿತು.

ಶ್ರೀ ಶಂಕರಚಾರ್ಯರ ಜಯಂತಿ ಅಂಗವಾಗಿ ಮಂಗಳವಾರ ಬೆಳಿಗ್ಗೆ ನಗರದ ಶ್ರೀ ರಾಮ ಮಂದಿರದಲ್ಲಿ ವಿವಿಧ ದಾರ್ಮಿಕ ಕಾರ್ಯಗಳು ನಡೆದವು. ಬಿ.ಆರ್.ಉಮೇಶ್ ಶಾಸ್ತ್ರಿ ಅವರ ನೇತೃತ್ವದಲ್ಲಿ ಪೂಜಾ ಕೈಂಕರ್ಯ ನಡೆದವು. ವಿಪ್ರ ಮಹಿಳಾ ಮಂಡಳಿ ಸದಸ್ಯರು ಶ್ರೀ ಶಂಕರರ ಭಾವಚಿತ್ರವನ್ನು ಹಿಡಿದು ಮೆರವಣಿಗೆ ನಡೆಸಿದರು. ಜತೆಗೆ ಭಜನಾ ಗೀತೆ ಪ್ರಸ್ತುತಿ ಪಡಿಸಿದರು. ಮಹಾಮಂಗಳಾರತಿ ಬಳಿಕ ಪ್ರಸಾದ ವಿನಿಯೋಗ ನಡೆಸಲಾಯಿತು.

ವಿಪ್ರ ಮಹಿಳಾ ಮಂಡಳಿ ಅಧ್ಯಕ್ಷೆ ರತ್ನಪ್ರಸಾದ್, ಪ್ರಧಾನ ಕಾರ್ಯದರ್ಶಿ ಸುಧಾ ದೇಶಪಾಂಡೆ, ಖಜಾಂಚಿ ಪದ್ಮ ಮಂಜುನಾಥ್, ವಿಪ್ರ ಮಹಿಳಾ ಮಂಡಳಿ ಮಾಜಿ ಅಧ್ಯಕ್ಷೆ ಸರಸ್ವತಿ ರಾಮಗೋಪಾಲ್, ಪ್ರಮುಖರಾದ ಕೆ.ಎನ್.ಜಯಲಕ್ಷ್ಮಿ, ರಮಾ, ವೀಣಾ, ವಿದ್ಯಾ, ಶ್ರೀದೇವಿ, ಜ್ಯೋತಿ ವಟುಗಳಾದ ಗಗನ್, ವಿನ್ಯಾಸ್ ಸೇರಿದಂತೆ ಹಲವರು ಇದ್ದರು.



## ಶಿಕ್ಷಣದಿಂದ ಮಾತ್ರ ದಾಸ್ಯದಿಂದ ಹೊರ ಬರಲು ಸಾಧ್ಯ

ಮೈಸೂರು: ಡಾ.ಬಿ.ಆರ್.ಅಂಬೇಡ್ಕರ್ ಹೇಳಿದಂತೆ ಶಿಕ್ಷಣ ನಮ್ಮ ಹಕ್ಕು. ಅವರ ಆಶಯದಂತೆ ಪ್ರತಿಯೊಬ್ಬರೂ ಶಿಕ್ಷಣವನ್ನು ಪಡೆಯಬೇಕು. ಶಿಕ್ಷಣದಿಂದ ಮಾತ್ರ ಮಾನಸಿಕ ದಾಸ್ಯದಿಂದ ಹೊರಬ ರಲು ಸಾಧ್ಯ ಎಂದು ವಿಶ್ರಾಂತ ಕುಲಪತಿ ಡಾ. ಸಬಿಹಾ ಸ್ವಾಮಿಗೌಡ ಹೇಳಿದರು.

ನಗರದ ಶಂಕರಮಠದ ರಸ್ತೆ ಯಲ್ಲಿರುವ ನಟರಾಜ ಸಭಾಂಗಣ ದಲ್ಲಿ ಬಾಬಾ ಸಾಹೇಬ್ ಡಾ.ಬಿ.ಆರ್.ಅಂಬೇಡ್ಕರ್ ರವರ 135ನೇ ಜನ್ಮದಿನದ ಅಂಗವಾಗಿ ಬಹುತ್ವದ ಭಾರತವನ್ನು ಛಿದ್ರಗೊಳಿ ಸುತ್ತಿರುವ ಸರ್ಕಾರಗಳ ದಮನಕಾರಿ ಹುನ್ನಾರ ಖಂಡಿಸಿ ಶೋಷಿತ ತಳ ಸಮುದಾಯಗಳ ಐಕ್ಯತಾ ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದರು. ಡಾ.ಬಿ.ಆರ್.ಅಂಬೇಡ್ಕರ್ ಅವರು ಪ್ರತಿ ಭಾಷಣದಲ್ಲಿ ಪ್ರತಿ ಕಾರ್ಯಕ್ರಮಗಳಲ್ಲಿ ಮಕ್ಕಳಿಗೆ ಶಿಕ್ಷಣ ನೀಡಿ, ಮುಂದಿನ ಪೀಳಿಗೆಗೆ ಶಿಕ್ಷಣ ಅವರ ಹಕ್ಕು ಎಂದು ಹೇಳುತ್ತಿದ್ದರು. ಎಷ್ಟೇ ಕಷ್ಟವಾದರೂ ಪರವಾಗಿಲ್ಲ ಮಕ್ಕಳಿಗೆ ಶಿಕ್ಷಣ ಕೊಡಿಸಿ ಎಂದು ಹೇಳು ತ್ತಿದ್ದರು. ಶಿಕ್ಷಣದಿಂದ ಅರಿವು ಮೂಡಲು ಸಾಧ್ಯ. ನಮ್ಮ ಸುತ್ತಮುತ್ತಲಿನ ಪರಿಸರ ದಲ್ಲಿ ನ್ಯಾಯ ಮತ್ತು ಅನ್ಯಾಯವನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತದೆ ಎಂದು ತಿಳಿಸಿ ದರು. ನ್ಯಾಯ ಮತ್ತು ಅನ್ಯಾಯ ವನ್ನು ಅರ್ಥ ಮಾಡಿಕೊಳ್ಳಲು ಶಿಕ್ಷಣ ಒಂದು ಪ್ರಕರ ದಾರಿ ಎಂದು ಅಂಬೇಡ್ಕರ್ ಅವರು ಭಾವಿ ಸಿದ್ದರು. ಹೀಗಾಗಿ



ಅಂಬೇಡ್ಕರ್ ತಮ್ಮ ನೆಲೆಯಲ್ಲಿಯೇ ಅನೇಕ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ ದ್ದರು. ಹುಡುಗರು, ಹುಡುಗಿಯರು ಒಟ್ಟಿಗೆ ಓದುವ ಶಿಕ್ಷಣ ಸಂಸ್ಥೆಯನ್ನು ಹುಟ್ಟು ಹಾಕಿದ್ದರು. ಅವರು ಆರಂಭಿಸಿದ ಶಿಕ್ಷಣ ಸಂಸ್ಥೆಗಳಲ್ಲಿ ಹೆಚ್ಚು ಹೆಚ್ಚು ಹೆಣ್ಣು ಮಕ್ಕಳು ಪ್ರವೇಶ ಪಡೆಯುತ್ತಿದ್ದರು ಎಂದರು. ಅಂಬೇಡ್ಕರ್ ಅವರು ಸಭೆ, ಸಮಾರಂಭಗಳನ್ನು ಮಾಡುವಾಗ ಕೇವಲ ಪುರುಷರಿರುವ ಸಭೆಯನ್ನು ಅವರು ಒಪ್ಪುತ್ತಿರಲಿಲ್ಲ ಎಂದರು. ಸಭೆ, ಹೋರಾಟಗಳಲ್ಲಿ ಹೆಣ್ಣುಮಕ್ಕಳ ಪಾಲ್ಗೊ ಳ್ಳುವಿಕೆಯನ್ನು ಎಚ್ಚರದಿಂದ ಗುರುತಿಸುತ್ತಿದ್ದರು ಎಂದರು. ಕಾರ್ಯಕ್ರಮದಲ್ಲಿ ದಲಿತ ಸಂಘರ್ಷ ಸಮಿತಿಯ ಜಿಲ್ಲಾ ಸಂಚಾಲಕ ಬೆಟ್ಟಯ್ಯ ಕೋಟೆ, ಹಿರಿಯ ಪ್ರಾಧ್ಯಾಪಕ ಡಾ.ಜೆ.ಸೋಮಶೇಖರ್, ದಸಂಸ ಜಿಲ್ಲಾ ಸಂಘಟನಾ ಸಂಚಾಲಕ ಹೆಗ್ಗನೂರು ನಿಂಗರಾಜು, ಜಿಲ್ಲಾ ಖಜಾಂಚಿ ಬಿ.ಡಿ.ಶಿವಬುದ್ಧಿ, ಆರ್.ಸೊಮಣ್ಣ . ಕುಪ್ಪೇಗಾಲ, ಎಸ್ ಕಲ್ಲಹಳ್ಳಿ ಕುಮಾರ್ ಹಾಜರಿದ್ದರು

## ಮಹಿಳಾ ಮೀಸಲಿಗಾಗಿ ಸಹಿ ಸಂಗ್ರಹದ ಆಗ್ರಹ



ಮೈಸೂರು: ಮಹಿಳಾ ಮೀಸಲಾತಿಯನ್ನು ಕಲ್ಪಿಸುವಂತೆ ಆಗ್ರಹಿಸಿ ನಗರದಲ್ಲಿ ಮಹಿಳಾ ಕಾಂಗ್ರೆಸ್ ಕಾರ್ಯಕರ್ತರು ಸಹಿ ಸಂಗ್ರಹ ಚಳವಳಿ ನಡೆಸಿ ಗಮನ ಸೆಳೆದರು.

ನಗರದ ಜಿಲ್ಲಾ ಕಾಂಗ್ರೆಸ್ ಭವನದಲ್ಲಿ ನಗರ ಮತ್ತು ಜಿಲ್ಲಾ ಗ್ರಾಮಾಂತರ ಮಹಿಳಾ ಕಾಂಗ್ರೆಸ್ ಸಮಿತಿಯಿಂದ ಆಯೋಜಿಸಿದ್ದ ಶೇ.33ರಷ್ಟು ಮಹಿಳಾ ಮೀಸಲಾತಿಗಾಗಿ ಆಗ್ರಹಿಸಿ ಸಹಿ ಸಂಗ್ರ ಅಭಿಯಾನಕ್ಕೆ ಎಲ್ಲರೂ ಸಹಿ ಮಾಡಿದರು. ಅಲ್ಲದೆ, ಕಾಂಗ್ರೆಸ್ ಭವನದ ಎದುರು ಜಮಾವಣೆಗೊಂಡು ಕೇಂದ್ರ ಬಿಜೆಪಿ ಸರ್ಕಾರ ಮಹಿಳಾ ಮೀಸಲಾತಿ ಜಾರಿಗೊಳಸಬೇಕು. ಕಾಂಗ್ರೆಸ್ ಮಹಿಳಾ ಮೀಸಲಾತಿ ಪರವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಮೈಸೂರು ಜಿಲ್ಲಾ ಮಹಿಳಾ ಘಟಕದ ಪುಷ್ಪಲತಾ ಟಿ.ಬಿ.ಚಿಕ್ಕಣ್ಣ, ಮಾಜಿ ಮೇಯರ್ ಮೋದಾಮಣಿ ಸೇರಿ ಅನೇಕರು ಉಪಸ್ಥಿತರಿದ್ದರು.

## ದೇವನೂರಿನಲ್ಲಿ 9 ಎಕರೆ ಒತ್ತುವರಿ ತೆರವು

ಮೈಸೂರು: ಮೈಸೂರು ಅಭಿವೃದ್ಧಿ ಪ್ರಾಧಿಕಾರದ ಅಧಿಕಾರಿಗಳು ನಗರದ ಹೊರವಲಯದ ದೇವನೂರಿನಲ್ಲಿ ಎರಡು ಕಡೆ ಪ್ರತ್ಯೇಕ ಕಾರ್ಯಾಚರಣೆ ನಡೆಸಿ ಒತ್ತುವರಿಯಾಗಿದ್ದ ಒಟ್ಟು 9 ಎಕರೆ ಜಾಗವನ್ನು ತೆರವುಗೊಳಿಸಿದರು.



ಎಂಡಿಎ ಆಯುಕ್ತ ಕೆ.ಆರ್. ರಕ್ಷಿತ್ ಅವರ ಸೂಚನೆ ಮೇರೆಗೆ ಪೊಲೀಸ್ ಭದ್ರತೆಯೊಂದಿಗೆ ಸ್ಥಳಕ್ಕೆ ಆಗಮಿಸಿದ ಅಧಿಕಾರಿಗಳು, ಜೆಸಿಬಿ ಯಂತ್ರಗಳ ಮೂಲಕ ವಾಹನ ಪಾರ್ಕಿಂಗ್ ಹಾಗೂ ಇತರೆ ಶೆಡ್‌ಗಳನ್ನು ತೆರವು ಮಾಡಿದರು. ಮೈಸೂರು ತಾಲೂಕು ದೇವನೂರು ಬಡಾವಣೆಯ ಸರ್ವೇ ನಂ.155, 156, 153/2ರ ವ್ಯಾಪ್ತಿಯ 5 ಎಕರೆ, 19 ಗುಂಟೆ ಹಾಗೂ ಸರ್ವೇ ನಂ. 228/2, 229/1, 229/2ರ ವ್ಯಾಪ್ತಿಯ 3 ಎಕರೆ, 22 ಗುಂಟೆ ಜಾಗವನ್ನು ತೆರವು ಮಾಡಲಾಯಿತು. ಎಂಡಿಎ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಸುನಿತಾ ಸೇರಿ ಅಧಿಕಾರಿಗಳು ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

# ಜಿಲ್ಲೆಯ ವಿದ್ಯಾರ್ಥಿಗಳು ಕೆ-ಸಿಇಟಿ, ಜೆಇಇ, ನೀಟ್ ಪರೀಕ್ಷೆಗಳಿಗೆ ಸಿದ್ಧ: ನಗರಸಭೆ ಅಧ್ಯಕ್ಷ ಕೆ.ಶೇಷಾದ್ರಿ

**ನಗರಸಭೆವತಿಯಿಂದ ಪ್ರವೇಶ ಪರೀಕ್ಷೆಗಳಿಗೆ ಉಚಿತ ತರಬೇತಿ ಯಶಸ್ವಿ | ಅಕ್ಕಾ ಐಎಎಸ್ ಅಕಾಡೆಮಿವತಿಯಿಂದ ತರಬೇತಿ**

**ರಾಮನಗರ:** ವೃತ್ತಿಪರ ಕೋರ್ಸುಗಳಿಗೆ ಪ್ರವೇಶ ಪರೀಕ್ಷೆ ಎಂಬ ಯುದ್ಧಕ್ಕೆ ರಾಮನಗರ ನಗರಸಭೆ ಮತ್ತು ಅಕ್ಕ ಅಕಾಡೆಮಿ ನಿಮ್ಮನ್ನು ಅಣಿಗೊಳಿಸಿದೆ. ನೀವು ಅದರಲ್ಲಿ ಜಯಶೀಲರಾಗಬೇಕು ಎಂದು ನಗರಸಭೆ ಅಧ್ಯಕ್ಷ ಕೆ. ಶೇಷಾದ್ರಿ ಕೆ-ಸಿಇಟಿ, ನೀಟ್ ಮತ್ತು ಜೆಇಇ ಪರೀಕ್ಷೆಗಳಿಗೆ ತರಬೇತಿ ಪಡೆದ ವಿದ್ಯಾರ್ಥಿಗಳಿಗೆ ಶುಭ ಕೋರಿದರು.

ಇಲ್ಲಿನ ಸರ್ಕಾರಿ ಬಾಲಕಿಯರ ಪದವಿ ಪೂರ್ವ ಕಾಲೇಜಿನಲ್ಲಿ ನಗರಸಭೆ ಮತ್ತು ಅಕ್ಕ ಐಎಎಸ್ ಅಕಾಡೆಮಿ ವತಿಯಿಂದ ಮಂಗಳವಾರ ಹಮ್ಮಿಕೊಂಡಿದ್ದ ಕೆ-ಸಿಇಟಿ, ನೀಟ್ ಹಾಗೂ ಜೆಇಇ ಪರೀಕ್ಷೆಗಳಿಗೆ ಉಚಿತ ತರಬೇತಿಯ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು.

ವೃತ್ತಿಪರ ಕೋರ್ಸುಗಳಿಗೆ ಪ್ರವೇಶ ಪಡೆಯಲು ವಿವಿಧ ಪ್ರವೇಶ ಪರೀಕ್ಷೆಗಳನ್ನು ವಿದ್ಯಾರ್ಥಿಗಳು ಸಮರ್ಥವಾಗಿ ಎದುರಿಸಲು ಕಳೆದ ಸಾಲಿನ ಬಜೆಟ್‌ನಲ್ಲಿ ನಗರಸಭೆ ವ್ಯಾಪ್ತಿ ಮಾತ್ರವಲ್ಲದೆ, ಇಡೀ ತಾಲ್ಲೂಕಿಗ ಅನ್ವಯಿಸುವಂತೆ ತರಬೇತಿ ನೀಡಲು ಅನುದಾನ ಮೀಸಲಿರಿಸಲಾಗಿತ್ತು. ತರಬೇತಿ ನೀಡಲು ಪ್ರತಿಷ್ಠಿತ ತರಬೇತಿ ಸಂಸ್ಥೆ ಅಕ್ಕಾ ಐಎಎಸ್ ಅಕಾಡೆಮಿಯನ್ನು ಆಯ್ಕೆ ಮಾಡಿದ್ದೆವು. ಅಕಾಡೆಮಿಯ ಡಾ.ಶಿವಕುಮಾರ್ ತರಬೇತಿ ನೀಡಿದ್ದಾರೆ. ಖಾಸಗಿಯಾಗಿ ಇಂತಹ ತರಬೇತಿ ಪಡೆಯಲು ಸಾವಿರಾರು ರೂಗಳು ವೆಚ್ಚವಾಗುತ್ತಿತ್ತು. ಆದರೆ ನಗರಸಭೆವತಿಯಿಂದ ವಿದ್ಯಾರ್ಥಿಗಳಿಗೆ ಉಚಿತ ತರಬೇತಿ ಸಿಕ್ಕಿದೆ. ತರಬೇತಿ ಪಡೆದ ಎಲ್ಲರೂ ನಿಮ್ಮ ಆಯ್ಕೆಯ ಪ್ರವೇಶ ಪರೀಕ್ಷೆಗಳಲ್ಲಿ ಉತ್ತಮ ಅಂಕಗಳನ್ನು ಗಳಿಸಿ, ವೃತ್ತಿಪರ ಪದವಿಯನ್ನು ಗಳಿಸಿ ಎಂದು ಕೆ.ಶೇಷಾದ್ರಿ ಶುಭ ಕೋರಿದರು.

ಜನರು ನಗರಸಭೆ ಮೇಲೆ ಭಾರಿ ನಿರೀಕ್ಷೆ ಇಟ್ಟುಕೊಂಡಿದ್ದಾರೆ. ಅದನ್ನು ಈಡೇರಿಸಿ ವಿಶ್ವಾಸ ಉಳಿಸಿಕೊಳ್ಳಲು ಈ ಅತ್ಯುತ್ತಮ ಕಾರ್ಯಕ್ರಮ ರೂಪಿಸಿದೆವು. ಇದೇನು ನಗರಸಭೆಯ ಕಡ್ಡಾಯ ಕಾರ್ಯಕ್ರಮವಲ್ಲ. ಆದರೆ, ಅದನ್ನು ಮೀರಿ ಜನಪರವಾಗಿ



ಮಾಡಬೇಕಾದ ಕರ್ತವ್ಯವಿದು. ಇದಕ್ಕೆ ನಗರಸಭೆ ಸದಸ್ಯರ ಬೆಂಬಲ ಮರೆಯುವಂತಿಲ್ಲ. ಎಲ್ಲಾ ಕಾರ್ಯಕ್ರಮಗಳಿಗೂ ಬೆಂಬಲ ನೀಡುತ್ತಾ ಬಂದಿದ್ದಾರೆ. ತರಬೇತಿಗೆ ಪೂರಕವಾದ ಅನುಕೂಲಗಳನ್ನು ಕಾಲೇಜಿನಲ್ಲಿ ಒದಗಿಸಿದ್ದಾರೆ ಎಂದರು.

### ಸ್ಪರ್ಧಾತ್ಮಕ ಪರೀಕ್ಷೆಗಳಿಗೂ ಮಾರ್ಗದರ್ಶನ – ಡಾ.ಶಿವಕುಮಾರ್

ಅಕಾಡೆಮಿ ನಿರ್ದೇಶಕ ಡಾ. ಶಿವಕುಮಾರ್ ಮಾತನಾಡಿ, ರಾಜ್ಯದಲ್ಲಿ ನಗರಸಭೆಯ ಮೂಲಕ ಇಂತಹ ತರಬೇತಿ ಆಯೋಜನೆಯಾಗಿರುವುದು ಇದೇ ಮೊದಲು. ರಾಮನಗರ ನಗರಸಭೆ ಅಕ್ಕಾ ಅಕಾಡೆಮಿಯನ್ನು ಆಯ್ಕೆ ಮಾಡಿರುವುದು ನಮ್ಮ ಭಾಗ್ಯ. ಅದಕ್ಕೆ ನಾವು ನ್ಯಾಯ ಒದಗಿಸುವ ಕೆಲಸ ಮಾಡಿದ್ದೇವೆ. ವೃತ್ತಿಪರ ಕೋರ್ಸ್ ಗಳ ಪರೀಕ್ಷೆಯಲ್ಲಿ ಅಕಾಡೆಮಿಯು ವಿದ್ಯಾರ್ಥಿಗಳ ಜೊತೆ ಮುಂದೆಯೂ ಸಂಪರ್ಕದಲ್ಲಿದ್ದು, ಉದ್ಯೋಗಕ್ಕೆ ಸಂಬಂಧಿಸಿದ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿಗೆ ಮಾರ್ಗದರ್ಶನ ನೀಡುತ್ತೇವೆ ಎಂದರು. ಕರ್ನಾಟಕವು ದಾಸೋಹ ಪರಂಪರೆಗೆ ಹೆಸರುವಾಸಿ. ಅನ್ನ, ಶಿಕ್ಷಣ ಸೇರಿದಂತೆ ವಿವಿಧ ರೀತಿಯ ದಾಸೋಹದಂತೆ ನಗರಸಭೆಯು ಈ ಉಚಿತ ತರಬೇತಿಯ ದಾಸೋಹ ಹಮ್ಮಿಕೊಂಡಿದೆ. ಅಕಾಡೆಮಿಯು ಈಗಾಗಲೇ ಹಲವು ಕೋರ್ಸ್ ಗಳ ಪ್ರವೇಶ ಪರೀಕ್ಷೆಗೆ ತರಬೇತಿ ನೀಡಿದ್ದು, ಹಲವು ವಿದ್ಯಾರ್ಥಿಗಳು ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶ ಪಡೆದಿದ್ದಾರೆ ಎಂದರು.

### ಸರ್ಕಾರಿ ಸೀಟು ಪಡೆದರೆ, ತರಬೇತಿ ಸಾರ್ಥಕ-ಡಾ.ಜಯಣ್ಣ

ನಗರಸಭೆ ಪೌರಾಯುಕ್ತ ಡಾ. ಜಯಣ್ಣ, ನಗರಸಭೆ ಯಾವುದೇ ಕೆಲಸ ಮಾಡುವಾಗಲೂ ಸಾರ್ವಜನಿಕ ಅಭಿಪ್ರಾಯ ಸಂಗ್ರಹಿಸುತ್ತೇವೆ. ಆಗ, ವಿದ್ಯಾರ್ಥಿಗಳಿಗೆ ತರಬೇತಿ ನೀಡುವ ಸಲಹೆ ಬಂತು. ಆ ಮೇರೆಗೆ ಇಂತಹದ್ದೊಂದು ತರಬೇತಿ ಕಾರ್ಯಕ್ರಮ ರೂಪುಗೊಂಡಿದೆ. ವಿದ್ಯಾರ್ಥಿಗಳು ವೃತ್ತಿಪರ ಕೋರ್ಸ್ ಗಳ ಪ್ರವೇಶ ಪರೀಕ್ಷೆಯಲ್ಲಿ ಉತ್ತಮ ರ‍್ಯಾಂಕ್ ಪಡೆದು, ಉತ್ತಮ ಕೋರ್ಸ್ ಗಳಿಗೆ ಸರ್ಕಾರಿ ಸೀಟು ಪಡೆದರೆ ಈ ತರಬೇತಿ ಸಾರ್ಥಕವಾಗಲಿದೆ ಎಂದರು.

ತರಬೇತಿಯು ಯಶಸ್ವಿಯಾಗುವಲ್ಲಿ ಎಲ್ಲಾ ಹಂತದಲ್ಲಿ ಅಗತ್ಯ ಸಹಕಾರ ನೀಡಿದ ಕಾಲೇಜಿನ ಪ್ರಾಂಶುಪಾಲರು ಹಾಗೂ ಬೋಧಕರ ನೆರವು ಮರೆಯುವಂತಿಲ್ಲ. ನಗರಸಭೆ ಸದಸ್ಯರು ಸಹ ಈ ಕಾರ್ಯಕ್ರಮಕ್ಕೆ ಒಕ್ಕೊರಲಿನಿಂದ ಬೆಂಬಲಿಸಿದೆ. ಮುಂದಿನ ವರ್ಷವೂ ಮುಂದುವರಿಸಲು ನಿರ್ಣಯಿಸಿದೆ. ವಿದ್ಯಾರ್ಥಿಗಳು ತಮ್ಮ ಮುಂದಿನ ಶಿಕ್ಷಣದಲ್ಲಿ ಉತ್ತಮ ಸಾಧನೆ ಮಾಡುವ ಮೂಲಕ ತಂದೆ-ತಾಯಿ ಹಾಗೂ ಕಾಲೇಜಿಗೆ ಕೀರ್ತಿ ತರಬೇಕು ಎಂದು ಸಲಹೆ ನೀಡಿದರು. ನಗರಸಭೆ ಸದಸ್ಯ ಹಾಗೂ ಕಾಲೇಜು ಅಭಿವೃದ್ಧಿ ಉಪಾಧ್ಯಕ್ಷ ಬೈರೇಗೌಡ, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಜಿ.ಡಿ. ಶೇಖರ್ ಮಾತನಾಡಿದರು. ಅಣಕು ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳಾದ ಸಿಂಚನ ಮತ್ತು ನೂರ್ ಸಿಮ್ರಾನ್ ಅವರಿಗೆ ಗಣ್ಯರು ಬಹುಮಾನ ನೀಡಿದರು. ತರಬೇತಿ ಕುರಿತು ವಿದ್ಯಾರ್ಥಿಗಳು ಅಭಿಪ್ರಾಯ ಹಂಚಿಕೊಂಡರು. ಅಕ್ಕ ಐಎಎಸ್ ಅಕಾಡೆಮಿ ಸಂಯೋಜಕ ಡಾ. ಲಕ್ಷ್ಮಣ್ ಬಿ. ಅತಿಥಿಗಳನ್ನು ಸ್ವಾಗತಿಸಿದರು. ತರಬೇತುದಾರ ಡಾ. ಸಂದೀಪ್ ಆರ್.ಎಸ್ ವಂದನಾರ್ಪಣೆ ಮಾಡಿದರು. ಕಾಲೇಜಿನ ಉಪನ್ಯಾಸಕರಾದ ಮಹೇಶ್, ಮುತ್ತುರಾಜ್ ಹಾಗೂ ಇತರರು ಇದ್ದರು.

### ನಗರಸಭೆವತಿಯಿಂದ ಹೊಸ ಇತಿಹಾಸ

ಕಾಲೇಜಿನ ಪ್ರಾಂಶುಪಾಲ ಅನ್ಸರ್ ಉಲ್ ಹಕ್ ಕೆ. ಮಾತನಾಡಿ, ಸರ್ಕಾರಿ ಕಾಲೇಜಿಗಳ ಮಕ್ಕಳಿಗೆ ಉಚಿತ ತರಬೇತಿ ಕಾರ್ಯಕ್ರಮವು ರಾಮನಗರದಲ್ಲಿ ಒಂದು ಹೊಸ ಇತಿಹಾಸ. ಇದಕ್ಕೆ ನಗರಸಭೆ ಅಧ್ಯಕ್ಷ ಕೆ. ಶೇಷಾದ್ರಿ ಶಶಿ ಅವರ ದೂರದೃಷ್ಟಿ ಕಾರಣ. ಈ ವಿಷಯದಲ್ಲಿ ನಮ್ಮ ಕಾಲೇಜಿನ ವಿದ್ಯಾರ್ಥಿಗಳು ಅದೃಷ್ಟವಂತರು. ಸ್ಥಳೀಯವಾಗಿ ಎಲ್ಲೂ ತರಬೇತಿ ಸಿಗದ ಕಾರಣ ಹಿಂದೆ ನಾನು ಸಹ ನನ್ನ ಮಗನಿಗೆ ಐವತ್ತು ಸಾವಿರ ರೂ ಕೊಟ್ಟು ಬೆಂಗಳೂರಿಗೆ ಕೋಚಿಂಗ್‌ಗೆ ಕಳಿಸಿದೆ. ಆದರೆ, ತಾಲ್ಲೂಕಿನ ಎಲ್ಲಾ ಬಡ ವಿದ್ಯಾರ್ಥಿಗಳಿಗೆ ಉಚಿತವಾಗಿ ತರಬೇತಿ ನೀಡಿರುವುದು ಮಹತ್ಕಾರ್ಯವಾಗಿದೆ. ಈ ಕಾರ್ಯಕ್ರಮದಿಂದಾಗಿ ನಮ್ಮ ಕಾಲೇಜಿನ ಪ್ರತಿಷ್ಠೆ ಹೆಚ್ಚಾಗಿದೆ. ಪೋಷಕರು ತಮ್ಮ ಮಕ್ಕಳನ್ನು ಈ ಕಾಲೇಜಿಗೆ ಸೇರಿಸಲು ಮುಂದೆ ಬರುತ್ತಿದ್ದಾರೆ ಎಂದು ಸಂತಸ ವ್ಯಕ್ತಪಡಿಸಿದರು.

# ಸಾರ್ವಜನಿಕರಿಗೆ ಗೌರವ ನೀಡಿ: ಶ್ರೇಯಸ್ ಎಂ ಪಟೇಲ್

**ಹಾಸನ:** ಸರ್ಕಾರಿ ಕಚೇರಿಗಳಿಗೆ ಬರುವಂತಹ ಸಾರ್ವಜನಿಕರನ್ನು ಗೌರವಯುತವಾಗಿ ಕಾಣುವುದರ ಜೊತೆಗೆ ಕಾನೂನು ಚೌಕಟ್ಟಿನಲ್ಲಿ ಅವರ ಕೆಲಸ ಮಾಡಲು ಆದ್ಯತೆ ನೀಡಿ ಎಂದು ಸಂಸದರಾದ ಶ್ರೇಯಸ್ ಎಂ ಪಟೇಲ್ ಅವರು ತಿಳಿಸಿದ್ದಾರೆ.

ಜಿಲ್ಲಾಡಳಿತ ಮತ್ತು ಜಿಲ್ಲಾ ಪಂಚಾಯತ್ ಹಾಗೂ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ಜಿಲ್ಲಾ ಶಾಖೆ ಇವರ ಸಂಯುಕ್ತಾಶ್ರಯದಲ್ಲಿ ಇಂದು ಹಾಸನಾಂಬ ಕಲಾಕ್ಷೇತ್ರದಲ್ಲಿ ಏರ್ಪಡಿಸಿದ್ದ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ದಿನಾಚರಣೆ ಹಾಗೂ 2024 ನೇ ಮತ್ತು 2025 ನೇ ಸಾಲಿನ ಜಿಲ್ಲಾ ಮಟ್ಟದ ಸರ್ವೋತ್ತಮ ಸೇವಾ ಪ್ರಶಸ್ತಿ ಪ್ರಧಾನ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು ಸರ್ಕಾರಿ ನೌಕರರಲ್ಲಿ ತಾಳ್ಮೆ ಬಹು ಮುಖ್ಯ ಯಾವುದೇ ಒತ್ತಡವಿದ್ದರು ಅದನ್ನು ಸಂಭಾಳಿಸಿಕೊಂಡು ಮುಂದೆ ಸಾಗಬೇಕು ಎಂದರು.

ಯಾವುದೇ ಕೆಲಸವಾದರೂ ಸಹ ಪ್ರಾಮಾಣಿಕತೆಯಿಂದ ಮಾಡುವುದು ಅತಿ ಮುಖ್ಯ, ನೌಕರರು



ಸಾರ್ವಜನಿಕರ ಧ್ವನಿಯಾಗಿ ಕೆಲಸ ಮಾಡಬೇಕು ಎಂದು ತಿಳಿಸಿದರು.

ಒಂದು ಜಿಲ್ಲೆ ಪ್ರಗತಿಯನ್ನು ಕಾಣಬೇಕು ಎಂದರೆ ಅದಕ್ಕೆ ಮುಖ್ಯ ಕಾರಣ ಹಾಸನ ಜಿಲ್ಲೆಯಲ್ಲಿ ಎಲ್ಲಾ ಅಧಿಕಾರಿಗಳು ಹಾಗೂ ಸಿಬ್ಬಂದಿಗಳೇ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವುದು ರಿಂದ ಜಿಲ್ಲೆ ಎಲ್ಲದರಲ್ಲೂ ಉತ್ತಮ ಸ್ಥಾನದಲ್ಲಿದೆ ಎಂದು ತಿಳಿಸಿದರು.

ಶಾಸಕರಾದ ಸ್ವರೂಪ್ ಪ್ರಕಾಶ್ ಅವರು ಕಾರ್ಯ ಕ್ರಮದ ಅಧ್ಯಕ್ಷತೆವಹಿಸಿ ಮಾತನಾಡಿ ಜಿಲ್ಲೆಯ ಸರ್ಕಾರಿ ನೌಕರರು ಬಹಳ ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿರುವುದರಿಂದ ಜಿಲ್ಲೆಯು ಪ್ರಗತಿಶೀಲವಾಗಿದೆ ಎಂದು ಹೇಳಿದರು.

ಯಾವುದೇ ಕೆಲಸವಾಗಿರಲ್ಲಿ ಪ್ರಾಮಾಣಿಕವಾಗಿ ಮಾಡಿ ಕೆಲಸಕ್ಕೆ ಗೌರವ ನೀಡಬೇಕು , ನಾಗರಿಕರು ಮತ್ತು ಸಾರ್ವಜನಿಕರ ಕೆಲಸಕ್ಕೆ ಹೆಚ್ಚು ಒತ್ತು ನೀಡುವ ಮೂಲಕ ಸಹಕರಿಸಬೇಕು ಎಂದರು.

ಜಿಲ್ಲಾಧಿಕಾರಿ ಕೆ.ಎಸ್ ಲತಾಕುಮಾರಿ ಅವರು ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿ ನಾವು ಮಾಡುವ ಕೆಲಸಕ್ಕೆ ಪ್ರಶಸ್ತಿ ಬೇಕಿಲ್ಲ, ಮಾಡುವ ಕೆಲಸದಲ್ಲಿ ಪ್ರಾಮಾಣಿಕತೆ ಇದ್ದರೆ ಸಾಕು ಎಂದರು.

ಅಪರ ಜಿಲ್ಲಾಧಿಕಾರಿ ಜಗದೀಶ್ ಗಂಗಣ್ಣನವರ್, ತಹಶೀಲ್ದಾರ್ ಗೀತಾ ಹಾಗೂ ಮತ್ತಿತರರು ಉಪಸ್ಥಿತಿದ್ದರು.

## ಪ್ರತಿಷ್ಠಿತ ಶಾಲೆಗಳಿಗೆ ಅರ್ಜಿ ಆಹ್ವಾನ

**ಹಾಸನ:** ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಪ್ರತಿಷ್ಠಿತ ಶಾಲೆಗೆ 2026-27 ನೇ ಸಾಲಿನ ಶೈಕ್ಷಣಿಕ ವರ್ಷದ 6ನೇ ತರಗತಿ ಪ್ರವೇಶ ಬಯಸುವ ಅರ್ಹ ಪ್ರತಿಭಾವಂತ ಪ್ರ.ಜಾತಿ/ಪ್ರ.ವರ್ಗದ ಬಾಲಕ/ಬಾಲಕಿಯರಿಂದ ಅರ್ಹ ವಿದ್ಯಾರ್ಥಿಗಳಿಗೆ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ ಎಂದು ಬೇಲೂರು ತಾಲ್ಲೂಕಿನ ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.




5ನೇ ತರಗತಿಯಲ್ಲಿ ಶೇಕಡ 60 ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದಿರಬೇಕು ಹಾಗೂ ವಾರ್ಷಿಕ 2.50 ಲಕ್ಷ ಆದಾಯದ ಮಿತಿಯೊಳಗಿರುವ ಅರ್ಹ ವಿದ್ಯಾರ್ಥಿಗಳು ಇಲಾಖಾ ವೆಬ್‌ಸೈಟ್‌ನಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ.

ಆನ್‌ಲೈನ್ ನಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ ಮೇ 04, ಆನ್‌ಲೈನ್ ನಲ್ಲಿ ಸಲ್ಲಿಸಿದ ಅರ್ಜಿಯನ್ನು ಸೂಕ್ತ ದಾಖಲಾತಿಗಳೊಂದಿಗೆ ಮೇ 04 ರೊಳಗೆ ಸಹಾಯಕ ನಿರ್ದೇಶಕರು ಸಮಾಜ ಕಲ್ಯಾಣ ಇಲಾಖೆ ಬೇಲೂರು ಕಚೇರಿಗೆ ತಲುಪಿಸುವುದು, ಅವಧಿ ಮೀರಿ ಬಂದಂತಹ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬಹುದಾಗಿದೆ ಎಂದು ಬೇಲೂರು ತಾಲ್ಲೂಕು ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.

# ಅರ್ಜಿ ಆಹ್ವಾನ

**ಮೈಸೂರು:** ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು (ಕಾವಾ), ಸಿದ್ದಾರ್ಥನಗರ ಮೈಸೂರು ಸಂಸ್ಥೆಯಲ್ಲಿ ಬ್ಯಾಚುಲರ್ ಆಫ್ ವಿಜುಯಲ್ ಆರ್ಟ್ಸ್ (ಬಿ.ವಿ.ಎ.) (ನಾಲ್ಕು ವರ್ಷದ ಎಂಟು ಸೆಮಿಸ್ಟರ್ ಗಳ "ರಾಷ್ಟ್ರೀಯ ಶಿಕ್ಷಣ ಪದ್ಧತಿ' (STATE EDUCATION POLICY), ಯನ್ವಯ ದೃಶ್ಯ ಕಲೆಯಲ್ಲಿ 2026–27 ನೇ ಶೈಕ್ಷಣಿಕ ಸಾಲಿಗೆ ಪ್ರಥಮ ವರ್ಷದ ಬಿ.ವಿ.ಎ. ಸ್ನಾತಕೋತ್ತರ ಪದವಿ ಪ್ರವೇಶಾತಿಗಾಗಿ ದ್ವಿತೀಯ ಪಿ.ಯು.ಸಿ. ಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಂದ ಹಾಗೂ ದ್ವಿತೀಯ ಪಿ.ಯು.ಸಿ.ಗೆ ಸಮಾನಾಂತರ ಕೋರ್ಸು ಮಾಡಿರುವ ಅಭ್ಯರ್ಥಿಗಳು ಮೈಸೂರು ವಿಶ್ವವಿದ್ಯಾನಿಲಯದ ಪ್ರವೇಶಾತಿ ಅಧಿಸೂಚನೆ ಸಂಖ್ಯೆ:ಎಸಿ–4/01/2026–27 ಏಪ್ರಿಲ್ 09–04–2026 ರಿಂದ ಔಟಿಟುಟಿಜ (ಗಗಅಒಖ) ಮೂಲಕ 30–05–2026 ರವರೆಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಸದರಿ ಪದವಿಯಲ್ಲಿ 3 ನೇ ಸೆಮಿಸ್ಟರ್ ನಿಂದ ಚಿತ್ರಕಲೆ, ಶಿಲ್ಪಕಲೆ, ಗ್ರಾಫಿಕ್ಸ್ ಕಲೆ (ಅಚ್ಚಕಲೆ), ಅನ್ವಯಕಲೆ, ಕಲಾ ಇತಿಹಾಸ ಹಾಗೂ ಛಾಯಾಚಿತ್ರ ಮತ್ತು ಛಾಯಾಚಿತ್ರ ಪತ್ರಿಕೋದ್ಯಮ ವಿಭಾಗಗಳಲ್ಲಿ ವಿಶೇಷ ಅಧ್ಯಯನದ ಸ್ನಾತಕ ಪದವಿಯಾಗಿರುತ್ತದೆ.

ಆಸಕ್ತ ಅಭ್ಯರ್ಥಿಗಳು ಕರ್ನಾಟಕ ಸರ್ಕಾರದ ಅಂತರ್ಜಾಲ ವಿಳಾಸದ "htts;//uucms.karnataka.gov.in CxÀªÁhtts;//www.cavamysore.karnataka.gov.in ಮೂಲಕವೇ ಅರ್ಜಿ ಸಲ್ಲಿಸಬೇಕು. ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳಿಗೆ ಪ್ರವೇಶಾತಿಗಾಗಿ ಅರ್ಹತಾ ಪರೀಕ್ಷೆಯ ದಿನಾಂಕ ಮತ್ತು ಸಂದರ್ಶನದ ದಿನಾಂಕದ ಮಾಹಿತಿಯನ್ನು ಪ್ರತ್ಯೇಕವಾಗಿ ತಿಳಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ 0821–2438931 ನ್ನು ಸಂಪರ್ಕಿಸಬಹುದು ಎಂದು ಚಾಮರಾಜೇಂದ್ರ ಸರ್ಕಾರಿ ದೃಶ್ಯ ಕಲಾ ಕಾಲೇಜಿನ ಡೀನ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ರಾಜ್ಯದಲ್ಲಿ 400 ಕ್ಕೂ ಹೈಟೆಕ್ ಹಾರ್ವೆಸ್ಟ್ ಹಬ್ ಯಂತ್ರಗಳನ್ನು ರೈತರಿಗೆ ವಿತರಣೆ : ಚೆಲುವರಾಯಸ್ವಾಮಿ

## 2 ಸಾವಿರ ಕೋಟಿಗೂ ಹೆಚ್ಚಿನ ಮೌಲ್ಯದ ಕೃಷಿ ಯಂತ್ರೋಪಕರಣಗಳ ವಿತರಣೆ






**ಮಂಡ್ಯ:** ರೈತರ ಅಭಿವೃದ್ಧಿಗಾಗಿ ಮಂಡ್ಯ ಜಿಲ್ಲೆಗೆ ಕೃಷಿ ವಿಶ್ವವಿದ್ಯಾನಿಲಯ ತರಲಾಗಿದೆ ಜಿಲ್ಲೆಯ ರೈತರು ಕೃಷಿ ವಿಶ್ವವಿದ್ಯಾನಿಲಯದ ಸದುಪಯೋಗವನ್ನು ಪಡೆದುಕೊಳ್ಳಬೇಕು ಎಂದು ಕೃಷಿ ಹಾಗೂ ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಎನ್ ಚಲುವರಾಯಸ್ವಾಮಿ ಹೇಳಿದರು.

ಮಂಗಳವಾರ ಕೃಷಿ ಇಲಾಖೆಯ ವತಿಯಿಂದ ಮಂಡ್ಯ ವಿಶ್ವವಿದ್ಯಾಲಯದ ಆವರಣದಲ್ಲಿ ಆಯೋಜಿಸಲಾಗಿದ್ದ ಹೈಟೆಕ್ ಹಾರ್ವೆಸ್ಟ್ ಹಬ್ ಮತ್ತು ಸೆಕೆಂಡರಿ ಕೃಷಿ ಯೋಜನೆಗಳ ರೈತ ಫಲಾನುಭವಿಗಳಿಗೆ ಯಂತ್ರೋಪಕರಣಗಳ ವಿತರಣಾ ಕಾರ್ಯಕ್ರಮವನ್ನು ದೀಪ ಬೆಳಗಿಸುವುದರ ಮೂಲಕ ಉದ್ಘಾಟಿಸಿ ಮಾತನಾಡಿದ ಅವರು ಕಳೆದ ಮೂರು ವರ್ಷಗಳಿಂದ 2 ಸಾವಿರ ಕೋಟಿಗೂ ಹೆಚ್ಚಿನ ಮೌಲ್ಯದ ಕೃಷಿ ಯಂತ್ರೋಪಕರಣಗಳನ್ನು ರಾಜ್ಯದ ರೈತರಿಗೆ ನೀಡಲಾಗಿದೆ ಎಂದು ಹೇಳಿದರು.

ಪರಿಶಿಷ್ಟ ವರ್ಗಗಳಿಗೆ ರೂ 50 ಲಕ್ಷ ಮತ್ತು ಸಾಮಾನ್ಯ ವರ್ಗಗಳಿಗೆ ರೂ 40 ಲಕ್ಷ ಸಬ್ಸಿಡಿಯನ್ನು ದರದಲ್ಲಿ ಹೈಟೆಕ್ ಹಾರ್ವೆಸ್ಟ್ ಹಬ್ ಖರೀದಿಸಲು ನೀಡಲಾಗುತ್ತಿದೆ. ದೇಶದ ಯಾವುದೇ ರಾಜ್ಯದಲ್ಲೂ ಸದರಿ ಯೋಜನೆ ಇಲ್ಲ ಎನ್ನಬಹುದು. ಹೈಟೆಕ್ ಹಾರ್ವೆಸ್ಟ್ ಹಬ್ನ ಸಂಪೂರ್ಣ ಯೋಜನೆ ರಾಜ್ಯ ಸರ್ಕಾರದ್ದಾಗಿದೆ, ರಾಜ್ಯದಲ್ಲಿ 400 ಕ್ಕೂ ಹೈಟೆಕ್ ಹಾರ್ವೆಸ್ಟ್ ಹಬ್ ಯಂತ್ರಗಳನ್ನು ರೈತರಿಗೆ ನೀಡಲಾಗಿದೆ ಎಂದು ಹೇಳಿದರು.

ವಿವಿಧ ಬೆಳೆಗಳ ಕಟಾವಿಗೆ ಹೈಟೆಕ್ ಹಾರ್ವೆಸ್ಟ್ ಹಬ್ ಯಂತ್ರಗಳು ಉಪಯುಕ್ತವಾಗಿದೆ. ಕೃಷಿ ಕೆಲಸಗಳಿಗೆ ಮಾನವ ಸಂಪನ್ಮೂಲ ಕಡಿಮೆಯಾಗಿರುವ ಈ ಕಾಲಘಟ್ಟದಲ್ಲಿ ಈ ಯಂತ್ರೋಪಕರಣಗಳನ್ನು ಬಳಸಿ ಕಡಿಮೆ ವೆಚ್ಚದಲ್ಲಿ ಹೆಚ್ಚು ಪರಿಣಾಮಕಾರಿಯಾಗಿ ಬೆಳೆಗಳನ್ನು ಕಟಾವು ಮಾಡಬಹುದಾಗಿದೆ ಹಾಗೂ ರೈತನಿಗೆ ಹಣ ಉಳಿತಾಯವಾಗುತ್ತದೆ ಎಂದು ತಿಳಿಸಿದರು.

ಕಳೆದ ಮೂರು ವರ್ಷಗಳಿಂದ ನಾನು ಕೃಷಿ ಸಚಿವನಾಗಿ ರೈತರಿಗೆ ಕೃಷಿ ತಾಂತ್ರಿಕ ತರಬೇತಿ ಹಾಗೂ ಯಂತ್ರೋಪಕರಣಗಳ ವಿತರಣೆ ಸೇರಿದಂತೆ ಹಲವಾರು ಯೋಜನೆಗಳನ್ನು ಯಶಸ್ವಿಯಾಗಿ ಜಾರಿಗೊಳಿಸಿದ್ದೇನೆ ಎಂದು ಹೇಳಿದರು.

ನಮ್ಮ ಸರ್ಕಾರ ಬರುವ ಮೊದಲು 12 ಲಕ್ಷಕ್ಕೂ ಹೆಚ್ಚು ರೈತರು ಬೆಳೆ ವಿಮೆ ತೆಗೆದುಕೊಂಡಿದ್ದರು ಆದರೆ ಇಂದು 28 ಲಕ್ಷಕ್ಕೂ ಅಧಿಕ ರೈತರು ತಮ್ಮ ಬೆಳೆಗಳಿಗೆ ವಿಮೆಯನ್ನು ಮಾಡಿಸಿದ್ದಾರೆ. ವಿಮೆಯಲ್ಲಿ ಸರಿಸುಮಾರು 6,000 ಕೋಟಿಗೂ ಹೆಚ್ಚು ಹಣವನ್ನು ನೀಡಲಾಗಿದೆ ಎಂದರು.

ಶ್ರೀರಂಗಪಟ್ಟಣ ವಿಧಾನಸಭಾ ಕ್ಷೇತ್ರದ ಶಾಸಕ ಹಾಗೂ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದ ಅಧ್ಯಕ್ಷರಾದ ರಮೇಶ್ ಬಂಡಿಸಿದ್ದೇಗೌಡ ಅವರು ಮಾತನಾಡಿ ಚೆಲುವರಾಯಸ್ವಾಮಿ ಅವರು ಕೃಷಿ ಸಚಿವರಾದ ನಂತರ ರಾಜ್ಯದ ರೈತರ ಆರ್ಥಿಕ ಸ್ಥಿತಿಯನ್ನು ಹೆಚ್ಚಿಸಲು ಹಲವಾರು ಯೋಜನೆಗಳನ್ನು ಜಾರಿಗೊಳಿಸಿದ್ದಾರೆ. ಮಂಡ್ಯ ಕೃಷಿ ಪ್ರಧಾನ ಜಿಲ್ಲೆಯಾಗಿದ್ದು ಜಿಲ್ಲೆಯ ರೈತರ ಅಭಿವೃದ್ಧಿಗಾಗಿ ಮಂಡ್ಯದಲ್ಲಿ ಕೃಷಿ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಿದ್ದಾರೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಡಾ ಕುಮಾರ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ ಆರ್ ನಂದಿನಿ, ಕೃಷಿ ಇಲಾಖೆಯ ಜಂಟಿ ನಿರ್ದೇಶಕ ಅಶೋಕ್, ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

**ಹೈಟೆಕ್ ಹಾರ್ವೆಸ್ಟ್ ಹಬ್ ಯಂತ್ರಗಳ ವಿತರಣೆ:** ನಂತರ ಅರ್ಹ ಫಲಾನುಭವಿಗಳಿಗೆ 13 ಹೈಟೆಕ್ ಹಾರ್ವೆಸ್ಟ್ ಹಬ್ ಯಂತ್ರಗಳನ್ನು ಜಿಲ್ಲಾ ಉಸ್ತುವಾರಿ ಸಚಿವರಾದ ಎನ್ ಚಲುವರಾಯಸ್ವಾಮಿ ಅವರು ಹಸ್ತಾಂತರಿಸಿದರು.

ಶಾಸಕ ರಮೇಶ್ ಬಂಡಿಸಿದ್ದೇಗೌಡ, ಜಿಲ್ಲಾಧಿಕಾರಿ ಡಾ.ಕುಮಾರ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ ಆರ್ ನಂದಿನಿ ಸೇರಿದಂತೆ ಇನ್ನಿತರ ಅಧಿಕಾರಿಗಳು ಸಾಥ್ ನೀಡಿದರು.

# ಮಂಡ್ಯ– ಜನಗಣತಿ ಕಾರ್ಯವನ್ನು ಪರಿಶೀಲಿಸಿದ ಡಿಸಿ ಕುಮಾರ

**ಮಂಡ್ಯ :** 2026ರ ಏಪ್ರಿಲ್‌ನಿಂದ ಡಿಜಿಟಲ್ ಮಾದರಿಯಲ್ಲಿ ನಡೆಯುತ್ತಿರುವ ಜನಗಣತಿ ಕಾರ್ಯದ ಅಂಗವಾಗಿ, ಜಿಲ್ಲಾಧಿಕಾರಿ ಡಾ ಕುಮಾರ ಮಂಡ್ಯ ನಗರದಲ್ಲಿ ಸ್ಥಳ ವೀಕ್ಷಿಸಿ, ಜನ ಗಣತಿ ಪ್ರಗತಿಯನ್ನು ಪರಿಶೀಲಿಸಿದರು. ಜನಗಣತಿ ಪ್ರಕ್ರಿಯೆಯು ನಿಖರ ಮತ್ತು ಸುಗಮವಾಗಿ ನಡೆಯಲು ಜನಗಣತಿದಾರರು ಮನೆ ಮನೆಗೆ ಭೇಟಿ ನೀಡಿದ್ದಾಗ ಸಾರ್ವಜನಿಕರು ನಿಖರವಾದ ಮಾಹಿತಿ ನೀಡಿ ಸಹಕರಿಸಬೇಕು ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಮಂಡ್ಯ ಉಪ ವಿಭಾಗಧಿಕಾರಿ ಎಂ. ಶಿವಮೂರ್ತಿ, ನಗರಸಭೆ ಆಯುಕ್ತೆ ಪಂಪಾಶ್ರೀ ಹಾಗೂ ಅಧಿಕಾರಿಗಳು ಉಪಸ್ಥಿತರಿದ್ದರು.



# ಉಡುತೊರೆ ಜಲಾಶಯದ ಹಿನ್ನೀರಿನ ಕೆಸರಿನಲ್ಲಿ ಸಿಲುಕಿದ್ದ ಮೂರು ಆನೆಗಳ ರಕ್ಷಣೆ



**ಹನೂರು:** ತಾಲೂಕಿನ ಮಲೆ ಮಹದೇಶ್ವರ ವನ್ಯಜೀವಿ ವಲಯದ ಉಡುತೊರೆ ಹಳ್ಳ ಜಲಾಶಯದ ಹಿನ್ನೀರಿನ ಕೆಸರಿನಲ್ಲಿ ಹೂತುಕೊಂಡ ಮೂರು ಆನೆಗಳನ್ನು ಅರಣ್ಯ ಇಲಾಖೆಯ ಅಧಿಕಾರಿ ಸಿಬ್ಬಂದಿಗಳು ಕಾರ್ಯಾಚರಣೆ ಮೂಲಕ ರಕ್ಷಣೆ ಮಾಡಿದ್ದಾರೆ. ಇದರಲ್ಲಿ ಅಸ್ವಸ್ಥಗೊಂಡ ಒಂದು ಆನೆಗೆ ಸ್ಥಳದಲ್ಲಿ ಚಿಕಿತ್ಸೆ ನೀಡಿ ಹಾರೈಕೆ ಮಾಡಲಾಗುತ್ತಿದೆ.

ಮಲೆ ಮಹದೇಶ್ವರ ವನ್ಯಜೀವಿ ಧಾಮ ಹನೂರು ಬಫರ್ ವಲಯಕ್ಕೆ ಸೇರಿದ ಉಡುತೊರೆ ಹಳ್ಳ ಜಲಾಶಯದ ಹಿನ್ನೀರಿನ ಭಾಗದಲ್ಲಿ ನೀರು ಕುಡಿಯಲು ನಾಲ್ಕು ಆನೆಗಳು ಬಂದಿದೆ. ಈವೇಳೆ ಮೂರು ಆನೆಗಳು ಕೆಸರಿನಲ್ಲಿ ಸಿಲುಕಿ ಹೂತುಕೊಂಡಿವೆ. ಇದರಲ್ಲಿ ಒಂದು ಆನೆಯು ಹೇಗೋ ನೀರು ಕುಡಿದುಕೊಂಡು ಅರಣ್ಯದೊಳಗೆ ಹೊರಟುಹೋಗಿದೆ.

ಶನಿವಾರ ಸಂಜೆ ಅಥವಾ ರಾತ್ರಿ ವೇಳೆಯಲ್ಲಿ ನೀರು ಕುಡಿಯಲು ಬಂದ ಆನೆಗಳು ಕೆಸರಿನಲ್ಲಿ ಹೂತು ಕೊಂಡು ಹೊರಬರಲು ಸಾಧ್ಯವಾಗದೆ ಸಾವು ಬದುಕಿನ ಜತೆ ಹೋರಾಡುತ್ತಾ ಗಿಳಾಡುತ್ತಿದ್ದವು ಎನ್ನಲಾಗಿದೆ. ಅದನ್ನು ಅರಣ್ಯ ಇಲಾಖೆಯ ಗಸ್ತು ಸಿಬ್ಬಂದಿ ಭಾನುವಾರ ಮಧ್ಯಾಹ್ನ ಗಮನಿಸಿ, ಹಿರಿಯ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದಾರೆ

ಕೂಡಲೇ ಸ್ಥಳಕ್ಕೆ ಧಾಮಿಸಿದ ಮಲೆ ಮಹದೇಶ್ವರ ವನ್ಯಜೀವಿ ಧಾಮದ ಡಿ.ಸಿ.ಎಫ್ ಭಾಸ್ಕರ್, ಎ.ಸಿ.ಎಫ್ ವಿರಾಜ್ ಹೊಸೂರ್, ವಲಯ ಅರಣ್ಯಾಧಿಕಾರಿ ಜಿತೇಂದ್ರ, ವೈದ್ಯಾಧಿಕಾರಿಗಳು, ಅಗ್ನಿಶಾಮಕ ಠಾಣಾಧಿಕಾರಿ ಮಹೇಶ್ ಹಾಗೂ ಸಿಬ್ಬಂದಿ, ಆನೆಗಳ ರಕ್ಷಣೆಗೆ ಮುಂದಾದರು. ಹಲವು ಗಂಟೆಗಳ ಸತತ ಕಾರ್ಯಾಚರಣೆ ನಡೆಸಿ ಸಂಜೆ ವೇಳೆಗೆ ರಕ್ಷಿಸಿದರು. ಅದರಲ್ಲಿ ಎರಡು ಆನೆಗಳು ಕಾಡಿನೊಳಗೆ ಹೊರಟು ಹೋದವು.

ಆನೆಗಳು ಕೆಸರಿನಲ್ಲಿ ಸಿಲುಕಿದ್ದು ಯಾವಾಗ ಎಂಬ ಖಚಿತ ಮಾಹಿತಿ ಇಲ್ಲ ಎಂಬುದು ಅರಣ್ಯ ಅಧಿಕಾರಿಗಳ ಮಾಹಿತಿ. ಆದರೆ ಹಲವು ಗಂಟೆಗಳ ಕಾಲ ನೀರಿನಲ್ಲಿಯೇ ಇದ್ದಿದ್ದರಿಂದ ಆನೆಗಳು ನಿತ್ರಾಣಗೊಂಡಿದ್ದವು. ಪಶುವೈದ್ಯಾಧಿಕಾರಿಗಳು ಚಿಕಿತ್ಸೆ ನೀಡಿದ ಬಳಿಕ ಚೇತರಿಸಿಕೊಂಡವು ಎನ್ನಲಾಗಿದೆ.

ಕೆಸರಿನಲ್ಲಿ ಸಿಲುಕಿಕೊಂಡು ನಿತ್ರಾಣಗೊಂಡಿದ್ದ ಆನೆಗಳಿಗೆ ಮೊದಲಿಗೆ ಕಲ್ಲಂಗಡಿ, ಕಬ್ಬು ಇನ್ನಿತರ ಆಹಾರ ಪದಾರ್ಥಗಳನ್ನು ಒದಗಿಸಲಾಯಿತು. ಬಳಿಕ ಅರಿವಳಿಕೆ ಚುಚ್ಚುಮದ್ದು ನೀಡಲಾಯಿತು. ನಂತರ ನುರಿತ ಬೋಟ್ ಮ್ಯಾನ್ ಗಳ ಸಹಾಯದಿಂದ ಅರಣ್ಯ, ಅಗ್ನಿಶಾಮಕ ಇಲಾಖಾಧಿಕಾರಿಗಳು ಹಾಗೂ ಸಿಬ್ಬಂದಿ, ತೆಪ್ಪದಲ್ಲಿ ಆನೆಗಳ ಬಳಿ ತೆರಳಿದರು.

ಒಂದು ಆನೆಗೆ ಬೆಲ್ಟ್ ಹಾಕಿ ಟ್ರ್ಯಾಕ್ಟರ್ ಸಹಾಯದಿಂದ ಮೇಲಕ್ಕೆ ಎತ್ತಲಾಯಿತು. ಇನ್ನೊಂದು ಆನೆ ಸ್ವಯಂ ಶಕ್ತಿಯಿಂದ ತಾನಾಗಿಯೇ ಕೆಸರಿನಿಂದ ಬಿಡಿಸಿಕೊಂಡು ಕಾಡಿನತ್ತ ಹೊರಟಿತು. ಶಕ್ತಿಹೀನವಾಗಿದ್ದ ಮತ್ತೊಂದು ಆನೆಯನ್ನು ಕೆಸರಿನಿಂದ ಮೇಲೆತ್ತಲು ಸಹಾಯಕ್ಕಾಗಿ ಮತ್ತಿಗೋಡು ಶಿಬಿರದಿಂದ ಸಾಕಾನೆ ಮಹೇಂದ್ರನನ್ನು ಕರೆಸಲಾಯಿತು. ಭಾನುವಾರ ರಾತ್ರಿ 10–00 ಗಂಟೆಯ ವರೆಗೂ ಕಾರ್ಯಾಚರಣೆ ನಡೆಯಿತು.

ಇಂದು ಸೋಮವಾರ ಬೆಳಗ್ಗೆಯಿಂದಲೂ ಸಂಜೆವರೆಗೂ ಶಕ್ತಿಹೀನವಾಗಿದ್ದ ಆನೆಗೆ ಚಿಕಿತ್ಸೆ ಹಾರೈಕೆ ಮಾಡಲಾಗುತ್ತಿದ್ದು. ನೀನು ಚೇತರಿಕೆ ಕಂಡುಬಾರದೆ ಇರುವುದರಿಂದ ಹಾರೈಕೆ ಮುಂದುವರೆದಿದೆ. ಕಾರ್ಯಾಚರಣೆಯಲ್ಲಿ ಡಿ.ಸಿ.ಎಫ್ ಭಾಸ್ಕರ್, ಎ.ಸಿಎಫ್ ವಿರಾಜ್ ಹೊಸೂರು, ವೈದ್ಯಧಿಕಾರಿ ರಮೇಶ್ ತಂಡ, ಹನೂರು, ಹೂಗ್ಯಂ, ಪಿ.ಜಿ ಪಾಳ್ಯ ವಿಭಾಗದ ಆರ್.ಎಫ್.ಓ ಗಳು ಹಾಗೂ ಸಿಬ್ಬಂದಿಗಳು ಇದ್ದರು.

# ಅದ್ವೈತ ಸಿದ್ಧಾಂತದಿಂದ ಜಗತ್ತಿಗೆ ಮಾದರಿಯಾದ ಆದಿ ಶಂಕರಾಚಾರ್ಯರು: ಶಾಸಕ ಟಿ.ಎಸ್. ಶ್ರೀವತ್ಸ

**ಮೈಸೂರು :** ಅದ್ವೈತ ಸಿದ್ಧಾಂತದ ಮೂಲಕ ಜಗತ್ತಿಗೆ ಮಾದರಿಯಾದವರು ಆದಿ ಶಂಕರಚಾರ್ಯರು ಎಂದು ಕೃಷ್ಣರಾಜ ಕ್ಷೇತ್ರದ ವಿಧಾನಸಭೆಯ ಶಾಸಕ ಟಿ.ಎಸ್ ಶ್ರೀವತ್ಸ ಹೇಳಿದರು.

ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮೈಸೂರು ಮಹಾನಗರ ಪಾಲಿಕೆ ಹಾಗೂ ಮೈಸೂರು ಶ್ರೀ ಶಂಕರಾಚಾರ್ಯ ಜಯಂತೋತ್ಸವ ಸಮಿತಿ ವತಿಯಿಂದ ಕರ್ನಾಟಕ ಕಲಾಮಂದಿರದ ಆವರಣದಲ್ಲಿ ಇರುವ ಕಿರುರಂಗಮಂದಿರದಲ್ಲಿ ಆಯೋಜಿಸಲಾಗಿದ್ದ ಶ್ರೀ ಶಂಕರಚಾರ್ಯ ಜಯಂತಿಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಶಂಕರಾಚಾರ್ಯರು ಅವರ ತಂದೆ–ತಾಯಿಗಳ ಸುದೀರ್ಘ ತಪಸ್ಸಿನ ಫಲವಾಗಿ ಜನಿಸಿದ ಅದ್ಭುತ ಬಾಲಕ. ಅವರು ದೇವರ ಅನುಗ್ರಹದಿಂದ ಜನಿಸಿದ 'ಬಾಲ ಶಿವ' ಎಂದರೆ ಅತಿಶಯೋಕ್ತಿಯಾಗಲಾರದು ಎಂದರು.

ಶಂಕರಾಚಾರ್ಯರು ಇಡೀ ಭಾರತವನ್ನು ಕಾಲ್ನಡಿಗೆಯಲ್ಲೇ ಸಂಚರಿಸಿ, ಅದ್ವೈತ ಸಿದ್ಧಾಂತವನ್ನು ಪ್ರತಿಪಾದಿಸಿದ ಅನೇಕ ಕಥೆಗಳನ್ನು ನಾವು ಕೇಳಿದ್ದೇವೆ. ಅವರು ಮುನ್ನೂರಕ್ಕೂ ಹೆಚ್ಚು ಶ್ಲೋಕಗಳನ್ನು ರಚಿಸಿದ್ದು, ಅವುಗಳಲ್ಲಿ 'ಭಜಗೋವಿಂದಂ' ಇದು ಅತ್ಯಂತ ಶ್ರೇಷ್ಠವಾದ ಶ್ಲೋಕ ಎಂದರು

ಶಂಕರಾಚಾರ್ಯರು ಭಾರತದ ನಾಲ್ಕು ದಿಕ್ಕುಗಳಲ್ಲಿ ಚತುರ್ದಾಮ ಪೀಠಗಳನ್ನು (ಮಠಗಳನ್ನು) ಸ್ಥಾಪಿಸಿದರು. ಕೇವಲ 32 ವರ್ಷಗಳ ಅಲ್ಪಾಯುಷ್ಯದಲ್ಲೇ, ಮುಂಬರುವ ಹಲವಾರು ಪೀಳಿಗೆಗಳು ನೆನಪಿನಲ್ಲಿಟ್ಟುಕೊಳ್ಳುವಂತಹ ಅಭೂತಪೂರ್ವ ಸಾಧನೆಯನ್ನು ಮಾಡಿ ಜಗತ್ತಿಗೆ ಮಾದರಿಯಾಗಿದ್ದಾರೆ ಎಂದರು.

ಶ್ರೀ ರಾಮಕೃಷ್ಣ ಆಶ್ರಮದ ಕನ್ನಡ ಪುಸ್ತಕ ಪ್ರಕಟಣಾ ವಿಭಾಗದ ಸ್ವಾಮಿ ಸರ್ವಜಯಾನಂದಜಿ ಅವರು ದಿವ್ಯ ಸಾನಿಧ್ಯ ವಹಿಸಿ ಮಾತನಾಡಿ ಶಂಕರರು ತಾವು ಜೀವಿಸಿದ ಅಲ್ಪ ಕಾಲಾವಧಿಯಲ್ಲಿ ಅಪಾರವಾದ ಸಾಧನೆಯನ್ನು ಮಾಡಿದ್ದಾರೆ. ಶಂಕರರ ಅದ್ವೈತ ತತ್ವವನ್ನು ಪ್ರತಿಪಾದಿಸಿದ್ದರು, ಅದನ್ನು ಸಾಮಾನ್ಯ ಜನರ ಜೀವನದಲ್ಲಿ, ಸೇವಾ ಕಾರ್ಯಗಳಲ್ಲಿ ಅನ್ವಯಿಸಬಹುದೆಂದು ಜನ ಸಾಮಾನ್ಯರಿಗೆ ಸರಳ ರೂಪದಲ್ಲಿ ತಲುಪಿಸಬೇಕಿದೆ ಎಂದರು.

ಆಚಾರ್ಯರ ಜೀವನ ಮಾರ್ಗ ನಮ್ಮ ಜೀವನದಲ್ಲಿ ನಾವು ನಡೆಯಬೇಕಾದ ಎಲ್ಲ ಮಾರ್ಗಗಳನ್ನು ತೋರಿಸಿಕೊಡುವ ಮಾರ್ಗವಾಗಿದೆ. ಆದಿ ಶಂಕರಾಚಾರ್ಯರು ಅದ್ವೈತ ವೇದಾಂತ ಪ್ರಚಾರಕ್ಕಾಗಿ ಮತ್ತು ಸನಾತನ ಧರ್ಮದ ರಕ್ಷಣೆಗಾಗಿ ಭಾರತದ ನಾಲ್ಕು ದಿಕ್ಕುಗಳಲ್ಲಿ ನಾಲ್ಕು ಪ್ರಮುಖ ಮಠಗಳನ್ನು ಸ್ಥಾಪಿಸಿದರು ಎಂದು ತಿಳಿಸಿದರು.

ಸಂಸ್ಕೃತಿ ಚಿಂತಕರು ಮತ್ತು ವಿಮರ್ಶಕರಾದ ಗಾ.ನಾ ಭಟ್ ಅವರು ಮಾತನಾಡಿ ಭಗವತ್ಪಾದ ಶಂಕರಾಚಾರ್ಯರು ಹಿಂದು ಧರ್ಮದ ಪುನರುತ್ಪಾದಕರು. ಭಾವುಕತೆ ಮತ್ತು ವೈಚಾರಿಕತೆಗಳೆರಡು ಒಬ್ಬರ ಮನಸ್ಸಿನಲ್ಲಿ ಸಂಗಮಿಸಿತ್ತು ಎಂದರೆ ಅದು ಶಂಕರರ ಮನದಲ್ಲಿ ಮಾತ್ರ. ಅವರು ತಮ್ಮ 8 ವಯಸ್ಸಿನಲ್ಲೇ ನಾಲ್ಕು ವೇದಗಳನ್ನು ಪಠಣ ಮಾಡಿದ್ದರು. ಗೋವಿಂದ ಭಗವತ್ಪಾದರ ಪರಮ ಶಿಷ್ಯರಾಗಿದ್ದರು. ದೇಶದ 4 ಸ್ಥಳಗಳಲ್ಲಿ ಮೂರ್ತಿಗಳನ್ನು ಸ್ಥಾಪಿಸಿ ಭಗವಂತನಿಗೆ ರೂಪವನ್ನು ಕೊಟ್ಟು ಪೂಜಿಸುವಂತೆ ಮಾಡಿದರು. ಜ್ಞಾನ ಮಾರ್ಗ ತಲುಪಲು ಒಂದು ಏಣಿಯಾಗಿ ಮೂರ್ತಿ ಪೂಜೆಯನ್ನು ತಂದವರು ಶಂಕಾಚಾರ್ಯರು ಎಂದು ಹೇಳಿದರು.

ಸನಾತನ ಭಾರತದ ಸಂಸ್ಕೃತಿಯನ್ನು ಜಗತ್ತಿಗೆ ಸಾರಿ ಹೇಳಿದ ಆಚಾರ್ಯತ್ರಯರಲ್ಲಿ ಶಂಕರಾಚಾರ್ಯರು ಮೊದಲಿಗರು. ಕೇವಲ 32 ವರ್ಷಗಳ ಕಾಲ ಜೀವಿಸಿದ್ದರು. ಶಂಕರಾಚಾರ್ಯರು, ಈ ಅಲ್ಪಾವಧಿಯಲ್ಲಿಯೇ ದೇಶದ ಮೂಲೆ ಮೂಲೆ ಗಳಿಗೆ ಸಂಚರಿಸಿ ಗೀತಾಚಾರ್ಯ ಶ್ರೀಕೃಷ್ಣನ ಸಿದ್ಧಾಂತ ವಾದ "ಅದ್ವೈತ" ತತ್ವವನ್ನು ಪ್ರತಿಪಾದಿಸುತ್ತ ಜಗತ್ತಿಗೆ ಸಾರಿ, ಹಲವಾರು ಮತಗಳಿಂದ ದಾಳಿಗೊಳಗಾಗುತ್ತಿದ್ದ ಸನಾತನ ಹಿಂದೂ ಧರ್ಮವನ್ನು ಪುನರುತ್ಥಾನಗೊಳಿಸಿದರು. ಶೈವ, ವೈಷ್ಣವ, ಶಾಕ್ತ, ಗಾಣಪತ್ಯ, ಸೌರ ಹಾಗೂ ಸ್ಕಂದ ಮತಗಳನ್ನು ಒಗ್ಗೂಡಿಸಿ, ಷಣ್ಮತ ಪ್ರತಿಷ್ಠಾಪಕರಾದರು. ಆದಿಶಂಕರರು ಭಗವದ್ಗೀತೆ, ಉಪನಿಷತ್ ಹಾಗು ಬ್ರಹ್ಮ ಸೂತ್ರಗಳಿಗೆ ಭಾಷ್ಯ ಬರೆದ ಮೊದಲ ಆಚಾರ್ಯರಾದರು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕರಾದ ವಿ.ಎನ್ ಮಲ್ಲಿಕಾರ್ಜುನಸ್ವಾಮಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಡಾ.ಎಂ.ಡಿ ಸುದರ್ಶನ್, ಗಣ್ಯರಾದ ಜಿ.ಟಿ ಪ್ರಕಾಶ್ ಹಾಗೂ ಶ್ರೀಕಂಠ ಕುಮಾರ್ ಅವರು ಉಪಸ್ಥಿತರಿದ್ದರು.



# ಭಗೀರಥ ಮಹರ್ಷಿ ಜಯಂತಿ ಆಚರಣೆ

## ಭವ್ಯ ಮೆರವಣಿಗೆ, ವೇದಿಕೆ ಕಾರ್ಯಕ್ರಮ ಎ.23ಕ್ಕೆ




**ಮೈಸೂರು:** ಶ್ರೀಭಗೀರಥ ಮಹರ್ಷಿ ಜಯಂತೋತ್ಸವ ಎ.23ರಂದು ನಗರದಲ್ಲಿ ಜಿಲ್ಲಾಡಳಿತ ಹಾಗೂ ಜಿಲ್ಲಾ ಶ್ರೀಭಗೀರಥ ಜಯಂತೋತ್ಸವ ಸಮಿತಿಯ ಸಹಯೋಗದಲ್ಲಿ ಭವ್ಯವಾಗಿ ಆಚರಿಸಲಾಗುತ್ತದೆ ಎಂದು ಪ್ರಚಾರ ಸಮಿತಿ ಅಧ್ಯಕ್ಷ ಕೆ.ಟಿ.ಮೋಹನ್ ಕುಮಾರ್ ತಿಳಿಸಿದರು.

ನಗರದ ಜಿಲ್ಲಾ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಉಪ್ಪಾರ ಸಮಾಜದ ಮೂಲ ಕಸುಬಾದ ಉಪ್ಪು ತಯಾರಿಕೆಯನ್ನು ಪ್ರತಿಬಿಂಬಿಸುವ ಉಪ್ಪಿನ ರಾಶಿ ಮತ್ತು ಗಂಗಾ ಕಳಸ ಪೂಜೆಯೊಂದಿಗೆ ಶ್ರೀ ಭಗೀರಥ ಮಹರ್ಷಿಯವರ ಭಾವಚಿತ್ರವನ್ನು ಅಲಂಕೃತಗೊಂಡ ವಾಹನದಲ್ಲಿ ಪ್ರತಿಷ್ಠಾಪಿಸಿ ಮೆರವಣಿಗೆ ನಡೆಸಲಾಗುತ್ತದೆ ಎಂದು ಹೇಳಿದರು. ಮೆರವಣಿಗೆ ಅರಮನೆ ಮುಂಭಾಗದ ಶ್ರೀ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದಿಂದ ಪ್ರಾರಂಭವಾಗಿ ಕೆ.ಆರ್. ವೃತ್ತ, ದೇವರಾಜ ಅರಸು ರಸ್ತೆ ಮಾರ್ಗವಾಗಿ ಹುಣಸೂರು ರಸ್ತೆಯಲ್ಲಿರುವ ಕರ್ನಾಟಕ ಕಲಾಮಂದಿರಕ್ಕೆ ಸಾಗಲಿದೆ. ಅಲ್ಲಿ ವೇದಿಕೆ ಕಾರ್ಯಕ್ರಮ ನಡೆಯಲಿದೆ.

ಮೆರವಣಿಗೆಯಲ್ಲಿ ಸತ್ತಿಗೆ, ಸೂರಿಪಾನಿ, ಮಾರಿಕುಣಿತ, ಬೀಸು ಕಂಸಾಳೆ, ಡೊಳ್ಳು ವರಸೆ ಸೇರಿದಂತೆ ವಿವಿಧ ಜನಪದ ಕಲಾತಂಡಗಳು ಭಾಗವಹಿಸಲಿವೆ.

ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಹೊಸದುರ್ಗದ ಭಗೀರಥ ಪೀಠದ ಡಾ.ಶ್ರೀಶ್ರೀ ಪುರುಷೋತ್ತಮಾನಂದ ಪುರಿ ಮಹಾಸ್ವಾಮೀಜಿಗಳು ಹಾಗೂ ಮಳವಳ್ಳಿಯ ಅಯ್ಯನ ಸರಗೂರು ಮಠದ ಶ್ರೀ ಮಹದೇವಸ್ವಾಮಿಗಳು ವಹಿಸಲಿದ್ದಾರೆ. ಸಚಿವರು, ಶಾಸಕರು, ಸಂಸದರು, ವಿಧಾನ ಪರಿಷತ್ ಸದಸ್ಯರು ಸೇರಿದಂತೆ ಹಲವು ಗಣ್ಯರು ಪಾಲ್ಗೊಳ್ಳಲಿದ್ದಾರೆ.

ಜಿಲ್ಲಾ ಉಪ್ಪಾರ ನೌಕರರ ಹಾಗೂ ವೃತ್ತಿಪರರ ಸಂಘದ ಅಧ್ಯಕ್ಷ ಎಂ.ರಾಮಚಂದ್ರು ಮಾತನಾಡಿ, ಸೂರ್ಯವಂಶ ಕ್ಷತ್ರಿಯರ ಅನುವಂಶಿಯಾದ ಉಪ್ಪಾರ ಸಮಾಜದ ಆರಾಧ್ಯ ದೈವ ಶ್ರೀಭಗೀರಥ ಮಹರ್ಷಿಗಳು ಕಠಿಣ ತಪಸ್ಸಿನ ಮೂಲಕ ದೇವಗಂಗೆಯನ್ನು ಭೂಮಿಗೆ ತಂದ ಮಹಾನ್ ವ್ಯಕ್ತಿ. ಈ ಸಾಧನೆಯೇ ಭಗೀರಥ ಪ್ರಯತ್ನ ಎಂದು ಪ್ರಸಿದ್ಧಿ ಪಡೆದಿದೆ ಎಂದು ಹೇಳಿದರು.

ಜಿಲ್ಲಾ ಉಪ್ಪಾರ ಸಂಘದ ಅಧ್ಯಕ್ಷ ಕರಳಾಪುರ ನಾಗರಾಜು ಮಾತನಾಡಿ, ಈ ಬಾರಿ ಜಿಲ್ಲಾಮಟ್ಟದಲ್ಲಿ ಅತ್ಯಂತ ಅರ್ಥಪೂರ್ಣವಾಗಿ ಜಯಂತಿ ಆಚರಿಸಲಾಗುತ್ತಿದ್ದು, ಜಿಲ್ಲೆಯ ಎಲ್ಲಾ ಭಾಗದ ಉಪ್ಪಾರ ಸಮಾಜದವರು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು ಎಂದು ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ಸ್ವಾಗತ ಸಮಿತಿ ಅಧ್ಯಕ್ಷ ಕನಕನಗರ ಮಹದೇವ್, ಆರ್ಥಿಕ ಸಮಿತಿ ಅಧ್ಯಕ್ಷ ಡಾ.ಎಂ. ಗೋವಿಂದರಾಜು, ಆಹಾರ ಸಮಿತಿ ಅಧ್ಯಕ್ಷ ಟಿ.ಆರ್.ಶಿವರಾಜು ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ಜಗತ್ತಿಗೆ ಮಾನವಿಯತೆ ಸಂದೇಶ ನೀಡಿದ ಶಂಕರರು : ಗಂಗಾಧರ ಸ್ವಾಮಿ

**ಮಂಡ್ಯ :** ಶಂಕರಾಚಾರ್ಯರು ಜಗತ್ತಿಗೆ ಮಾನವೀಯ ಸಂದೇಶ ಸಾರುವ ಮೂಲಕ ಲೋಕ ಕಲ್ಯಾಣಕ್ಕಾಗಿ ಶ್ರಮಿಸಿದ್ದಾರೆ ಎಂದು ಅಪರ ಪೊಲೀಸ್ ಅಧೀಕ್ಷಕ ಗಂಗಾಧರ ಸ್ವಾಮಿ ಅವರು ಹೇಳಿದರು.

ಮಂಗಳವಾರ ಜಿಲ್ಲಾಡಳಿತ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದೊಂದಿಗೆ ನಗರದ ಕಲಾಮಂದಿರದಲ್ಲಿ ಆಯೋಜಿಸಲಾಗಿದ್ದ ಶ್ರೀ ಶಂಕರಾಚಾರ್ಯ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಅದ್ವೈತ ಸಿದ್ಧಾಂತವನ್ನು ಶಂಕರಾಚಾರ್ಯರು ಪ್ರತಿಪಾದಿಸಿದರು, ಹಿಂದೂ ಧರ್ಮದ ಮೌಲ್ಯಗಳನ್ನು ಜಗತ್ತಿಗೆ ಕಾಣುವಂತೆ ಎತ್ತಿ ಹಿಡಿದ ಮಹನೀಯರು ಎಂದು ಹೇಳಿದರು.

ಶಂಕರಾಚಾರ್ಯರ ತತ್ವ ಆದರ್ಶಗಳನ್ನು ನಾವು ಜೀವನದಲ್ಲಿ ರೂಢಿಸಿಕೊಳ್ಳುವ ಮೂಲಕ ಸಮಾಜದಲ್ಲಿ ಸಾಮರಸ್ಯ ಕಾಪಾಡಬೇಕು ಎಂದರು.

ಕಾರ್ಯಕ್ರಮದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಬಿ.ವಿ ನಂದೀಶ್, ಮುಖಂಡರುಗಳಾದ ಶಂಕರನಾರಾಯಣ ಶಾಸ್ತ್ರಿ, ಬಿ ಜಿ ಉಮಾ, ಗೋಪಾಲಕೃಷ್ಣ ಶೆಣೈ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.




# ಜಿಲ್ಲಾಡಳಿತ ಭವನದಲ್ಲಿ ಬಸವಣ್ಣ–ಶಂಕರರ ಸ್ಮರಣೆ

**ಬೆಂಗಳೂರು:** ಬಸವ ಜಯಂತಿ ಹಾಗೂ ಶಂಕರಾಚಾರ್ಯರ ಜಯಂತಿ ಅಂಗವಾಗಿ ಜಿಲ್ಲಾಡಳಿತ ಭವನದ ಆವರಣದಲ್ಲಿ ಬಸವಣ್ಣನವರ ಕಂಚಿನ ಪ್ರತಿಮೆ ಮಂಟಪದ ಬಳಿ ಜಿಲ್ಲಾಧಿಕಾರಿ ಡಾ. ಕೆ.ಎನ್.ಅನುರಾಧ ಅವರು ಪುಷ್ಪಾರ್ಚನೆ ಮಾಡಿ ಗೌರವ ನಮನ ಸಲ್ಲಿಸಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಕಾಯಕಯೋಗಿ ಬಸವಣ್ಣನವರ 893ನೇ ಜಯಂತಿ ಹಾಗೂ ಶಂಕರಾಚಾರ್ಯರ 1238ನೇ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ಈ ಸಂದರ್ಭದಲ್ಲಿ ಅಪರ ಜಿಲ್ಲಾಧಿಕಾರಿ ಸೈಯಿದಾ ಆಯಿಷಾ, ಉಪಕಾರ್ಯದರ್ಶಿ ಶಿವಕುಮಾರ್, ಬೆಳ್ಳಾವಿ ಮಠದ ಶ್ರೀಮಹಾಂತ ಶಿವಾಚಾರ್ಯ ಸ್ವಾಮೀಜಿ, ಖಾನಿ ಮಠದ ಬಸವರಾಜ ಸ್ವಾಮೀಜಿ ಸೇರಿದಂತೆ ಹಲವು ಗಣ್ಯರು ಮತ್ತು ಸಿಬ್ಬಂದಿ ಉಪಸ್ಥಿತರಿದ್ದರು.

# ಬದುಕನ್ನು ರೂಪಿಸುವ ಪ್ರತಿಕ್ರಿಯೆ...ಒಂದು ವಿಶ್ಲೇಷಣೆ



| ವೀಣಾ ಹೇಮಂತ್‌ಗೌಡ ಪಾಟೀಲ್

ಒಂದು ಕ್ಷಣದ ನಮ್ಮ ಪ್ರತಿಕ್ರಿಯೆ ನಮ್ಮ ಆ ಇಡೀ ದಿನದ ಮನಸ್ಥಿತಿಯನ್ನು ಆಳುತ್ತದೆ. ನಮ್ಮ ಬಾಯಿಂದ ಹೊರಟ ಒಂದು ಕೆಟ್ಟ ಮಾತು ಒಂದು ಒರಟಾದ ಪ್ರತಿಕ್ರಿಯೆ, ಒಂದು ಅನವಶ್ಯಕ ಕೀಟಲೆ ನಮ್ಮ ಇಡೀ ದಿನವನ್ನು ಕೆಡಿಸುವ ಮಟ್ಟಿಗೆ ನಮ್ಮ ಬದುಕನ್ನು ಆಳುತ್ತದೆ. ನಮ್ಮ ಹೃದಯ ಭಾರವಾಗುತ್ತದೆ ನಮ್ಮ ಮನಸ್ಸು ಗೊಂದಲದ ಗೂಡಾಗುತ್ತದೆ. ನಮ್ಮ ಭಾವನೆಗಳ ಮೇಲೆ ನಾವು ನಿಯಂತ್ರಣವನ್ನು ಕಳೆದುಕೊಳ್ಳುತ್ತೇವೆ. ಬಹಳಷ್ಟು ಬಾರಿ ಯಾವುದೋ ಒಂದು ಸನ್ನಿವೇಶದಲ್ಲಿ ನಾವು ಹೇಗೆ ನಡೆದುಕೊಳ್ಳುತ್ತೇವೆ, ನಮ್ಮ ಪ್ರತಿಕ್ರಿಯೆ ಹೀಗಿರುತ್ತದೆ ಎಂಬುದು ನಮ್ಮ ದಿನವನ್ನು ನಂತರ ನಿಧಾನವಾಗಿ ನಮ್ಮ ಬದುಕನ್ನು ನಿರ್ದೇಶಿಸುತ್ತದೆ ಎಂಬುದಕ್ಕೆ ನಿದರ್ಶನ ಈ ಕಥೆ. ಇಂತಹ ಒಂದು ಕ್ಷಣದಲ್ಲಿ ತನ್ನ ಭಾವನೆಗಳ ಮೇಲೆ ಹಿಡಿತವಿಟ್ಟುಕೊಂಡ, ಶಾಂತ ಮನಸ್ಥಿತಿಯನ್ನು ಕಾಯ್ದುಕೊಳ್ಳುವ ವ್ಯಕ್ತಿ ಬದುಕಿನಲ್ಲಿ ಗೆಲ್ಲುತ್ತಾನೆ.

ಅದೊಂದು ಪುಟ್ಟ ಹಳ್ಳಿ. ಅಲ್ಲಿ ವಾಸವಾಗಿದ್ದ ಯುವಕನೊಬ್ಬ ವಯೋಸಹಜವಾಗಿ ಗಟ್ಟಿಮುಟ್ಟಾಗಿದ್ದರೂ ಕೂಡ ಮಾನಸಿಕವಾಗಿ

ಬಲಹೀನ ನಾಗಿದ್ದ, ತನ್ನ ಕೋಪಕ್ಕೆ ಹೆಸರಾಗಿದ್ದ. ಬೇರೊಬ್ಬರು ಆತನೊಂದಿಗೆ ಕೋಪದಿಂದ ಮಾತನಾಡಿದರೆ ಆತ ಅದಕ್ಕೆ ಅಷ್ಟೇ ಬಲವಾದ ಕೋಪದಿಂದ ಉತ್ತರಿಸುತ್ತಿದ್ದ. ಬೇರೊಬ್ಬರು ಕೆಟ್ಟ ಮಾತುಗಳನ್ನು ಆತನಿಗೆ ಹೇಳಿದರೆ ಆತನು ಕೂಡ ಅಷ್ಟೇ ಕೆಟ್ಟದಾಗಿ ಪ್ರತಿ ಮಾತನಾಡುತ್ತಿದ್ದ. ನೀನು ತಳ್ಳಿದರೆ ನಾನು ತಳ್ಳುವೆ, ನೀನು ಕಲ್ಲೆಸೆದರೆ ನಾನು ಕೂಡ ಮರಳಿ ಕಲ್ಲನ್ನು ಎಸೆಯುವೆ ಎಂಬಂತೆ ಆತ ಎಲ್ಲ ಕ್ರಿಯೆಗಳಿಗೂ ತೀವ್ರವಾದ ಪ್ರತಿಕ್ರಿಯೆಯನ್ನು ನೀಡುತ್ತಿದ್ದ. ಬೇರೆಯವರು ತನ್ನ ಕುರಿತು ಆಡಿದ ಮಾತುಗಳನ್ನು ತನ್ನ ಮನಸ್ಸಿನಲ್ಲಿಯೇ ಇಟ್ಟುಕೊಂಡು ಕೊರಗುತ್ತಿದ್ದ ಮಾತ್ರವಲ್ಲ...ಭಾರವಾದ ಕಲ್ಲಿನ ತುಂಡುಗಳಂತೆ ಮಾನಸಿಕವಾಗಿ ತನ್ನ ಬೆನ್ನ ಮೇಲಿನ ಚೀಲದಲ್ಲಿ ಸದಾ ಹೊರುತ್ತಿದ್ದ.

ದಿನಗಳೆದಂತೆ ಆತನ ಪ್ರತಿಕ್ರಿಯೆಗಳ ಕಾರಣದಿಂದ ಉಂಟಾಗುವ ಆತನ ಬೆನ್ನ ಭಾರ ಹೆಚ್ಚಾಯಿತು. ಮಾನಸಿಕವಾಗಿ ಆತ ಕುಗ್ಗಿ ಹೋದ. ಹೀಗೆಯೇ ದಿನಗಳು ವಾರಗಳಾಗಿ, ವಾರಗಳು ತಿಂಗಳುಗಳಾಗಿ ವರ್ಷವೂ ಉರುಳಿ ಹೋಯಿತು. ಇದೀಗ ಆತನಿಗೆ ಯಾವುದರಲ್ಲೂ ಜೀವಂತಿಕೆ ಕಂಡು ಬರುತ್ತಿರಲಿಲ್ಲ ಬೆಳ್ಳಂ ಬೆಳಗನ್ನು ಸೂಸುವ ದಿನಗಳು ಕೂಡ ಆತನ ಕಣ್ಣಿಗೆ ಕಡುಗತ್ತಲೆಯನ್ನು ತೋರ್ಪಡಿಸುತ್ತಿದ್ದವು. ಮನಸ್ಸು ಸದಾ ಗೊಂದಲದ ಗೂಡಾಗಿರುತ್ತಿತ್ತು ಆತನ ಹೆಜ್ಜೆಗಳು ಕಾಣದ ಭಾರವನ್ನು ಹೊತ್ತಂತೆ ನಿಧಾನವಾಗ ತೊಡಗಿದವು ಮುಖದಲ್ಲಿನ ಕಳೆ ಮಾಸಿತ್ತು , ಜೀವನೋತ್ಸಾಹ ಕೂಡ ಕುಂದಿ ಹೋಯಿತು.

ಇದೆಲ್ಲದರಿಂದ ಬೇಸತ್ತ ಆತ ಒಂದು ದಿನ ಇನ್ನಾದರೂ ನನ್ನ ಮನಸ್ಸಿನ ಭಾರವನ್ನಿಳುಹಿಕೊಳ್ಳೋಣ, ಒಂದಷ್ಟು ತಾಜಾ ಹವೆಯನ್ನು ಸೇವಿಸೋಣ ಬದುಕಿನಲ್ಲಿ ಹೊಸತನ್ನು ನೋಡೋಣ ಎಂಬ ಆಶಯವನ್ನು ಹೊತ್ತು ತನ್ನ ಮನೆಯಿಂದ ಹೊರಬಿದ್ದು ಪಕ್ಕದಲ್ಲಿಯೇ ಇದ್ದ ಬೆಟ್ಟವನ್ನು ಏರಲು ಆರಂಭಿಸಿದ. ಅತ್ಯಂತ ಸುಂದರವಾದ ಆ ಬೆಟ್ಟದ ಪ್ರದೇಶ, ತಣ್ಣಗಿನ ಮುಂಜಾವು, ಹಕ್ಕಿಗಳ ಕಲರವ, ಚಂದದ ಸೂರ್ಯೋದಯ ಇದಾವುದೂ ಆತನಿಗೆ ಮುದವನ್ನು ನೀಡದಷ್ಟು ಆತ ತನ್ನದೇ ಯೋಚನೆಗಳಲ್ಲಿ ಕಳೆದು ಹೋಗಿದ್ದ. ಭಾರವನ್ನು ಹೊತ್ತು ಬಳಲಿದವರಂತಹ ಮುಖ ಮುದ್ರೆಯನ್ನು ಧರಿಸಿದ ಆತ ಮುಂದೆ ಸಾಗುತ್ತಿದ್ದಾಗ ಓರ್ವ ವೃದ್ಧ ಆತನಿಗೆ ಜೊತೆಯಾದ. ಸುಂದರವಾದ ನಗುವನ್ನು ಹೊತ್ತ ಮುಖದ ಆತನ ಕಾಲುಗಳಲ್ಲಿ ಲವಲವಿಕೆಯ ಓಘವಿತ್ತು.ಸಂತಸದಿಂದ ಹಾಡೊಂದನ್ನು ಗುನುಗುತ್ತಾ ಬರುತ್ತಿದ್ದ ಆತನ ಕಣ್ಣಿಗೆ ಚಿಂತೆಯ ಭಾರದಿಂದ ಬಳಲಿದವನಂತೆ ತೋರಿದ ಯುವಕನನ್ನು ಕಂಡು ಕುತೂಹಲದ ಜೊತೆಗೆ ಕನಿಕರವೂ ಉಂಟಾಯಿತು.



ಮುಂದೆ ಸಾಗಿದ ಆತ ಯುವಕನನ್ನು ಸಮೀಪಿಸಿ ಮಗು... ಯಾವುದೋ ಚಿಂತೆ ನಿನ್ನನ್ನು ಸತಾಯಿಸುತ್ತಿದೆ ಎಂದು ನನಗೆ ಭಾಸವಾಗುತ್ತಿದೆ ನಿನಗೆ ತೊಂದರೆ ಇಲ್ಲ ಎನ್ನುವುದಾದರೆ ನಿನ್ನ ಮನದ ಭಾರವನ್ನು ನನ್ನ ಮುಂದೆ ಹೇಳಿಕೊಂಡು ಹಗುರಾಗು ಎಂದು ಹೇಳಿದನು.

ನಿಟ್ಟುಸಿರಿಟ್ಟ ಯುವಕ 'ಹೌದು.. ನಾನು ನನ್ನದೇ ಮನದ ಭಾರದಿಂದ ಬಳಲಿದ್ದೇನೆ. ನನ್ನ ಊರಿನ ಜನರು ನನ್ನತ್ತ ಎಸೆಯುವ ಕೋಪ,ಅಸಹನೆ, ಅವಾಚ್ಯ ಪದಗಳು ಹಾಗೂ ನಡವಳಿಕೆಗಳ ಕಾರಣದಿಂದ ನಾನು ಮಾನಸಿಕವಾಗಿ ನೊಂದಿದ್ದೇನೆ. ಅವರು ನನ್ನತ್ತ ಎಸೆದ ಎಲ್ಲಾ ಕಲ್ಲುಗಳನ್ನು ನಾನು ನನ್ನ ಹೆಗಲ ಮೇಲೆ ಹೊತ್ತು ಆ ಭಾರದಿಂದ ಬಳಲಿದ್ದೇನೆ ಎಂದು ಹೇಳಿದ.

ಈ ಮಾತನ್ನು ಕೇಳಿ ವೃದ್ಧ ಆಶ್ಚರ್ಯಚಕಿತನಾದ. ಅದು ಹೇಗೆ ? ಎಂದು ಯುವಕನನ್ನು ಕೇಳಿದ. ಬೇರೆಯವರು ನನ್ನ ಕುರಿತು ಕೆಟ್ಟ ಮಾತುಗಳನ್ನಾಡಿದಾಗ ನನಗೆ ಅತ್ಯಂತ ಆಳವಾಗಿ ನೋವಾಗುತ್ತದೆ ಹಾಗೂ ಆ ಮಾತುಗಳನ್ನು ನಾನು ಕಲ್ಲುಗಳ ರೂಪದಲ್ಲಿ ಸಂಗ್ರಹಿಸಿ ನನ್ನ ಬೆನ್ನ ಮೇಲೆ ಇಟ್ಟುಕೊಳ್ಳುತ್ತೇನೆ ಅವರು ಮಾತನಾಡಿದ ಮಾತುಗಳು ನನ್ನ ಕುರಿತು ಆಗಿರುವುದರಿಂದ ಅವುಗಳು ನನ್ನವು ಆದ್ದರಿಂದ ಅವುಗಳ ಭಾರ ಕೂಡ ನನ್ನದೇ ಆಗಿರುತ್ತದೆ ಎಂದು ಹೇಳಿದ.

ಇದೀಗ ವೃದ್ಧನಿಗೆ ಎಲ್ಲವೂ ಅರ್ಥವಾಯಿತು. ಅತ್ಯಂತ ಮೆದುವಾದ ಸ್ವರದಲ್ಲಿ ಆತ ಯುವಕನಿಗೆ ಮಗು... ನಾವಿಬ್ಬರು ಹೀಗೆಯೇ ಮೇಲೆ ಹತ್ತುತ್ತಾ ಹೋಗೋಣ ಬಾ ಎಂದು ಹೇಳಿದ. ಅವರಿಬ್ಬರೂ ಮಾತನಾಡುತ್ತಾ ಮುಂದೆ ಸಾಗಿದರು ಅಲ್ಲಿದ್ದ ಎರಡು ಪುಟ್ಟ ಕಲ್ಲುಗಳನ್ನು ತೋರಿಸಿ ಅದರಲ್ಲಿ ಒಂದು ಕಲ್ಲನ್ನು ಯುವಕನ ಕೈಗೆ ನೀಡಿದ ಮತ್ತೊಂದು ಕಲ್ಲನ್ನು ನೆಲದ ಮೇಲೆ ಹಾಕಿದ. ನಿನ್ನ ಕುರಿತು ಮಾತನಾಡಿದ ಮಾತುಗಳು ಈ ಕಲ್ಲಿನಂತೆ... ಇವು ರಸ್ತೆಯಲ್ಲಿ ಬಿದ್ದಿರುತ್ತವೆ. ಆ ಮಾತುಗಳನ್ನು ಹೇಳಿದ ವ್ಯಕ್ತಿ ಅವುಗಳನ್ನು ಮರೆತುಬಿಡುತ್ತಾನೆ ಆದರೆ ಆ ಮಾತುಗಳನ್ನು ನೀನು ಈ ಪುಟ್ಟ ಕಲ್ಲಿನಂತೆ ಕೈಯಲ್ಲಿ ಹಿಡಿದುಕೊಂಡಿರುವೆ ಎಂದು

ಯುವಕನ ಕೈಗೆ ತಾನು ಕೊಟ್ಟ ಇನ್ನೊಂದು ಕಲ್ಲನ್ನು ತೋರಿಸಿ ಹೇಳಿದ. ಈ ಕಲ್ಲು ನಿನಗೆ ಭಾರವಾಗುತ್ತದೆ ಇಂತಹದೇ ಕಲ್ಲುಗಳ ಭಾರ ನಿನ್ನನ್ನು ಬಳಲುವಂತೆ ಮಾಡುತ್ತದೆ ಆದರೆ ನಿನಗೆ ನೋವನ್ನು ಉಂಟು ಮಾಡಿದ ವ್ಯಕ್ತಿ ಅತ್ಯಂತ ನಿರಾಳವಾಗಿ ಮುಂದೆ ಬದುಕಿನಲ್ಲಿ ಸಾಗುತ್ತಾನೆ... ಆದರೆ ನೀನು ಅದೇ ಮಾತುಗಳನ್ನು ಮತ್ತೆ ಮತ್ತೆ ನೆನಪಿಸಿಕೊಳ್ಳುತ್ತಾ ನಿನ್ನ ಬದುಕನ್ನು ಭಾರವಾಗಿಸಿಕೊಳ್ಳುವೆ ಎಂದು ಹೇಳಿದಾಗ ಆ ಯುವಕನಿಗೆ ತಣ್ಣಗಿನ ಗಾಳಿ ಸೋಕಿದಂತೆ ಭಾಸವಾಯಿತು.

ತನ್ನ ಮಾತನ್ನು ಮುಂದುವರೆಸಿದ ವೃದ್ಧ ವ್ಯಕ್ತಿ ಅವರ ಕ್ರಿಯೆಗಳು ಹಾಗೂ ಮಾತುಗಳು ನಿನಗೆ ಭಾರವಾಗಿಲ್ಲ... ಆದರೆ ಅವರು ಅಂದು, ಆಡಿದ ಮಾತುಗಳಿಗೆ ನೀನು ನೀಡುವ ಪ್ರತಿಕ್ರಿಯೆ ನಿನ್ನ ಮಾನಸಿಕತೆಯನ್ನು ಭಾರವಾಗಿಸುತ್ತದೆ. ವೃದ್ಧನ ಈ ಮಾತುಗಳು ಆತನ ಹೃದಯದ ಆಳವನ್ನು ತಾಕಿ ಆತನಿಗೆ ಕೊಂಚಮಟ್ಟಿಗೆ ಸತ್ಯದ ಅರಿವಾಯಿತು.

ಹಾಗಾದರೆ ನನ್ನ ಭಾರವನ್ನು ನಾನು ಹೇಗೆ ಕಡಿಮೆ ಮಾಡಿಕೊಳ್ಳಲಿ ಎಂದು ಯುವಕ ಕೇಳಲು ನಸು ನಗುತ್ತಾ ಅಜ್ಜ ಹೇಳಿದ.... ಮಗು ನೀನು ಸಂಗ್ರಹಿಸಿರುವ ಬೇರೆಯವರ ಮಾತಿನ ವಿರುದ್ಧದ ನಿನ್ನ ಪ್ರತಿಕ್ರಿಯೆಗಳನ್ನು ನಿಧಾನವಾಗಿ ಬಿಡುಗಡೆ ಮಾಡು ಅವು ಈ ಪಂಚಭೂತಗಳಲ್ಲಿ ಒಂದಾಗಲಿ.. ಆಗ ನಿನ್ನ ಬೆನ್ನ ಮೇಲಿನ ಭಾರ ಕಡಿಮೆಯಾಗುತ್ತದೆ ಎಂದು ಹೇಳಿದಾಗ ಪ್ರತಿಯೊಬ್ಬರ ಮಾತಿನ ಪ್ರತಿಕ್ರಿಯೆಗಳನ್ನು ತನ್ನ ಬೆನ್ನ ಮೇಲೆ ಕಲ್ಲಿನ ರೂಪದಲ್ಲಿ ಹೊತ್ತಿದ್ದ ಯುವಕ ಒಂದೊಂದು ಕಲ್ಲುಗಳನ್ನು ಬೆಟ್ಟದ ಮೇಲಿನಿಂದ ಕೆಳಗೆ ಎಸೆಯತೊಡಗಿದ. ಹಾಗೆ ಒಂದೊಂದು ಕಲ್ಲುಗಳನ್ನು ಎಸೆದಾಗ ಆತನ ಹೃದಯದ ಭಾರ ಸ್ವಲ್ಪ ಸ್ವಲ್ಪ ಕಡಿಮೆಯಾಗುತ್ತಾ ಅಂತಿಮವಾಗಿ ಆತನ ಕೈಯಲ್ಲಿದ್ದ ಕೊನೆಯ ಕಲ್ಲನ್ನು ಎಸೆದಾಗ ಸಂಪೂರ್ಣ ನೆಮ್ಮದಿ ಆತನದಾಯಿತು. ನಿಡಿದಾದ ಉಸಿರನ್ನು ಬಿಟ್ಟು ಅತ್ಯಂತ ತೃಪ್ತಿಯಿಂದ ತಿರುಗಿದ ಯುವಕನ ಮುಖವನ್ನು ನೋಡಿದ ವೃದ್ಧ. ಇದೀಗ ಯುವಕನ ಮುಖ ಪ್ರಫುಲ್ಲಿತವಾಗಿತ್ತು. ಭುಜಗಳು ಅಗಲವಾಗಿದ್ದವು. ಆತನ ಮನಸ್ಸು ಮತ್ತು ಹೃದಯ ಗಾಳಿಯಲ್ಲಿ ನೆಮ್ಮದಿಯಿಂದ ತೇಲಿದ ಭಾವವನ್ನು ಹೊಂದಿದ್ದರೆ ನೋಡುವ ನೋಟ ಸ್ಪಷ್ಟವಾಗಿತ್ತು.ತನ್ನ ಕಣ್ಣು ತೆರೆಸಿದ ವೃದ್ಧನಿಗೆ ಧನ್ಯವಾದಗಳನ್ನು ಹೇಳಿ ಅತ್ಯಂತ ಸಮಾಧಾನದಿಂದ ಆತ ಹಳ್ಳಿಗೆ ಮರಳಿದ.

ಹೀಗೆಯೇ ದಿನಗಳು, ವಾರಗಳು, ತಿಂಗಳುಗಳು ಕೂಡ ಉರುಳಿದವು. ಹಳ್ಳಿಯ ಜನರಲ್ಲಿ ಯಾರಾದರೂ ಯುವಕನನ್ನು ಕೆಣಕಿದಾಗ ಆತ ಅತ್ಯಂತ ಶಾಂತವಾಗಿ ಇರುತ್ತಿದ್ದ. ಯಾವುದೇ ರೀತಿಯ ಪ್ರತಿಕ್ರಿಯೆಯನ್ನು ನೀಡುತ್ತಿರಲಿಲ್ಲ. ಯಾರಾದರೂ ಆತನನ್ನು ಸಿಟ್ಟಿಗೆಬ್ಬಿಸಲು ಪ್ರಯತ್ನಿಸಿದಾಗ ಅವರೊಂದಿಗೆ ತಾನು ವಾದ ಮಾಡುವ ಅವಶ್ಯಕತೆ ಇದೆಯೇ ? ಎಂದು ತನ್ನನ್ನು ತಾನು ಪ್ರಶ್ನಿಸಿಕೊಂಡು ಬೇಡವೆಂಬ ಮನದ ಮಾತನ್ನು ಅರಿತು ಮುಂದೆ ಸಾಗುತ್ತಿದ್ದ.... ಇದೀಗ ಆತನ ನಡಿಗೆಯಲ್ಲಿ ಲವಲವಿಕೆಯಿತ್ತು ಬದುಕಿನಲ್ಲಿ ಸಂತಸವಿತ್ತು. ನೆಮ್ಮದಿಯೂ ಇತ್ತು. ಇದೀಗ ಬದುಕಿನ ಎಲ್ಲಾ ಭಾವಗಳನ್ನು ಆತ ಆಸ್ವಾದಿಸುತ್ತಿದ್ದ. ನೆಮ್ಮದಿಯ ಮುಂಜಾವು ಆತನನ್ನು ಮುದಗೊಳಿಸಿದರೆ ಮಕ್ಕಳ ಕಲರವ ಆತನಲ್ಲಿ ಸಂತಸವನ್ನು ಹುಟ್ಟುಹಾಕುತ್ತಿತ್ತು ಸೂರ್ಯೋದಯ ಸೂರ್ಯಾಸ್ತಗಳನ್ನು ಆತ ಅತ್ಯಂತ ಪ್ರೀತಿಯಿಂದ ಎದುರುಗೊಳ್ಳುತ್ತಿದ್ದ. ವಸ್ತು, ವಿಷಯ ಮತ್ತು ವಾದಗಳಿಗೆ ನಾವು ನೀಡುವ ಪ್ರತಿಕ್ರಿಯೆ ನಾವು ಹೊರುವ ಭಾರವಾಗಿದೆ ಎಂದು ಹೇಳಿದ ವೃದ್ಧನ ಮಾತುಗಳು ಆತನ ಕಿವಿಯಲ್ಲಿ ಸದಾ ಗುನುಗುನಿಸುತ್ತಿದ್ದವು.

ನೋಡಿದ್ರಾ ಸ್ನೇಹಿತರೆ, ನಮ್ಮ ಬದುಕಿನಲ್ಲಿಯೂ ನಾವು ಅನೇಕ ಕ್ರಿಯೆ ಮತ್ತು ಪ್ರತಿಕ್ರಿಯೆಗಳ ಭಾರವನ್ನು ನಮ್ಮ ಮನದಲ್ಲಿ ಹೊತ್ತಿರುತ್ತೇವೆ. ಇಂತಹ ಭಾರವನ್ನು ಕೆಳಗಿಳಿಸುವ ನಿಟ್ಟಿನಲ್ಲಿ ಪ್ರತಿ ದಿನ ರಾತ್ರಿ ಮಲಗುವ ಮುನ್ನ ಒಂದೆರಡು ನಿಮಿಷಗಳ ಕಾಲ ಕಣ್ಣು ಮುಚ್ಚಿ ಆ ದಿನ ನಡೆದ ಎಲ್ಲ ಘಟನೆಗಳನ್ನು ನೆನಪಿಸಿಕೊಂಡು ನಾವು ನೀಡಿದ ಅನಾವಶ್ಯಕ ಪ್ರತಿಕ್ರಿಯೆಯನ್ನು ಕಲ್ಲಿನ ರೂಪದಲ್ಲಿ ಭಾವಿಸಿ ಅದನ್ನು ನೆಲದ ಮೇಲೆ ಇಡುವ ರೀತಿಯಲ್ಲಿ ಊಹೆ ಮಾಡಿಕೊಂಡು ಇದು ನನ್ನ ಭೂತದಲ್ಲಿ ಮರೆಯಾಗಿ ಹೋಗಲಿ. ಈ ಪ್ರತಿಕ್ರಿಯೆ ನನ್ನ ಬದುಕನ್ನು ಬಾಧಿಸದಿರಲಿ ಎಂದು ಅದನ್ನು ದೂರ ಬಿಡಬೇಕು..ದೀರ್ಘವಾದ ಉಸಿರಾಟ ಪ್ರಕ್ರಿಯೆಯ ಮೂಲಕ ಅದನ್ನು ಮನದಿಂದ ಹೊರ ಹಾಕಬೇಕು. ಹೀಗೆ ಮಾಡುವ ಮೂಲಕ ನಿಮ್ಮ ಹೃದಯವನ್ನು ಹಗುರಾಗಿಸಿಕೊಳ್ಳಿ ನಿಮ್ಮ ಯೋಚನೆಗಳನ್ನು ಸ್ಪಷ್ಟವಾಗಿಸಿಕೊಳ್ಳಿ ಹಾಗೂ ಮನಸ್ಸನ್ನು ಒತ್ತಡ ರಹಿತವಾಗಿಸಿಕೊಳ್ಳಬೇಕು. ಇತರರು ಹೇಗೆ ಮಾತನಾಡಬೇಕು ಎಂಬುದು ನಮ್ಮ ನಿಯಂತ್ರಣದಲ್ಲಿ ಇಲ್ಲ ಆದರೆ ಇತರರ ಮಾತುಗಳಿಗೆ ಹೇಗೆ ಪ್ರತಿಕ್ರಿಯಬೇಕು ಎಂಬುದನ್ನು ನಾವು ನಮ್ಮ ನಿಯಂತ್ರಣದಲ್ಲಿ ಇಟ್ಟುಕೊಳ್ಳಬಹುದು. ಎಷ್ಟೋ ಬಾರಿ ನಮ್ಮ ಪ್ರತಿಕ್ರಿಯೆಗಳೇ ನಮ್ಮ ಬದುಕನ್ನು ರೂಪಿಸುತ್ತವೆ ಶಾಂತಿಯು ನಮಗೆ ಹೊರಗಿನಿಂದ ದೊರೆಯುವುದಿಲ್ಲ ಶಾಂತಿಯನ್ನು ನಮ್ಮ ಬದುಕಿನಲ್ಲಿ ಹೊಂದಲು ನಾವು ನಮ್ಮ ಮನಸ್ಥಿತಿಯನ್ನು ಸಜ್ಜುಗೊಳಿಸಿಕೊಳ್ಳಬೇಕು

**ಏನಂತೀರಾ ಸ್ನೇಹಿತರೆ ?**

# ಹಳ್ಳಿಗಳ ಪಾಲಿನ ನಡೆದಾಡುವ ಸಂಜೀವಿನಿ



| ಡಾ.ಸುಧಾಕರ.ಜಿ.ಲಕ್ಕವಳ್ಳಿ

ಸ್ಫೂರ್ತಿ ಸುಧೆ - 02

ಇಂದಿನ ಉನ್ನತ ಶಿಕ್ಷಣದ ಓಟದಲ್ಲಿ ಪದವಿಗಳು ಕೇವಲ ಬ್ಯಾಂಕ್ ಬ್ಯಾಲೆನ್ಸ್ ಹೆಚ್ಚಿಸುವ ಸಾಧನಗಳಾಗಿ ಬದಲಾಗುತ್ತಿವೆ. ಆದರೆ, ತಾನು ಕಲಿತ ಉನ್ನತ ವಿದ್ಯೆ ಮತ್ತು ಕೌಶಲಗಳು ತನ್ನ ಮಣ್ಣಿನ ಬಡ ಜನರ ಕಣ್ಣೀರು ಒರೆಸಲು ಬಳಕೆಯಾಗಬೇಕು ಎಂದು ನಂಬಿ, ಅದನ್ನು ಕಾರ್ಯರೂಪಕ್ಕೆ ತಂದವರು ಖ್ಯಾತ ನರರೋಗ ತಜ್ಞೆ ಡಾ. ಬಿಂದು ಮೆನನ್.

ನಗರದ ಐಷಾರಾಮಿ ಆಸ್ಪತ್ರೆಗಳಲ್ಲಿ ಎಸಿ ರೂಮಿನ ಸುಖವನ್ನೇ ಜೀವನ ಎಂದು ಭಾವಿಸಬಹುದಾಗಿದ್ದ ಇವರು, ಇಂದು ಹಳ್ಳಿಗಳ ಪಾಲಿನ ನಡೆದಾಡುವ ಸಂಜೀವಿನಿಯಾಗಿದ್ದಾರೆ.

ಪಾರ್ಶ್ವವಾಯು ಮತ್ತು ಅಪಸ್ಮಾರದಂತಹ ಭಯಾನಕ ಕಾಯಿಲೆಗಳು ಬಂದಾಗ ದಾರಿ ಕಾಣದೆ ಕತ್ತಲಲ್ಲಿ ತಡಕಾಡುವ ಗ್ರಾಮೀಣ ಬಡವರ ಮನೆಬಾಗಿಲಿಗೇ ವೈದ್ಯಕೀಯ ಸೇವೆಯನ್ನು ಒಯ್ದ ಇವರ ಶ್ರಮ ಯುವಜನತೆಗೆ ದೊಡ್ಡ ಪಾಠ. ಡಾ. ಬಿಂದು ಮೆನನ್ ಅವರಿಗೆ ಅಂತರಾಷ್ಟ್ರೀಯ ಸಾಧಕ ಪ್ರಶಸ್ತಿ ಮತ್ತು ಅಮೆರಿಕನ್ ಅಕಾಡೆಮಿ ಆಫ್ ನ್ಯೂರಾಲಜಿಯಂತಹ ವಿಶ್ವದ ಪ್ರತಿಷ್ಠಿತ ಗೌರವಗಳು ಲಭಿಸಿವೆ.

ಇಷ್ಟೆಲ್ಲಾ ಕೀರ್ತಿ ಇದ್ದರೂ, ವಾರಾಂತ್ಯದ ರಜೆಗಳಲ್ಲಿ ಅವರು ವಿಶ್ರಾಂತಿ ಪಡೆಯುವ ಬದಲು ಹಳ್ಳಿಗಳ ಧೂಳಿನ ಹಾದಿಯಲ್ಲಿ ಸಂಚರಿಸುತ್ತಾ ಉಚಿತ ಚಿಕಿತ್ಸೆ ನೀಡುತ್ತಾರೆ.

ಯುವ ತರುಣ ತರುಣಿಯರೇ, ಇವರಿಂದ ನಾವು ಕಲಿಯಬೇಕಾದದ್ದು ಕೇವಲ ವೈದ್ಯಕೀಯ ಸೇವೆಯನ್ನಲ್ಲ, ಬದಲಾಗಿ ನಮ್ಮ ವೃತ್ತಿಯ ಬಗ್ಗೆ ನಮಗಿರಬೇಕಾದ ಸಾಮಾಜಿಕ ಜವಾಬ್ದಾರಿಯನ್ನು.


ನೀವು ಇಂಜಿನಿಯರ್ ಆಗಿರಲಿ, ಶಿಕ್ಷಕರಾಗಿರಲಿ ಅಥವಾ ಕೃಷಿಕರಾಗಿರಲಿ; ನಿಮ್ಮ ಜ್ಞಾನ ಸಮಾಜದ ಕಟ್ಟಕಡೆಯ ವ್ಯಕ್ತಿಯ ಮುಖದಲ್ಲಿ ನಗು ಮೂಡಿಸಿದರೆ ಮಾತ್ರ ನಿಮ್ಮ ಸಾಧನೆಗೆ ನಿಜವಾದ ಬೆಲೆ ಸಿಗುತ್ತದೆ.

ಕೇವಲ ಸಾಮಾಜಿಕ ಜಾಲತಾಣಗಳಲ್ಲಿನ ಲೈಕ್ಸ್ ಅಥವಾ ವ್ಯವಸ್ಥೆಯ ಮೇಲಿನ ದೂರುಗಳು ಸಮಾಜವನ್ನು ಬದಲಿಸುವುದಿಲ್ಲ. ಬದಲಿಗೆ, ಬದಲಾವಣೆಯ ಕಿಡಿ ನಮ್ಮ ಒಳಗೇ ಆರಂಭವಾಗಬೇಕು.

ನಮ್ಮ ವೃತ್ತಿ ನಮಗೆ ಬದುಕು ನೀಡಿದರೆ, ನಮ್ಮ ಪ್ರವೃತ್ತಿ ಸಮಾಜಕ್ಕೆ ನೆಮ್ಮದಿ ನೀಡಬೇಕು ಎನ್ನುವ ಬಿಂದು ಮೆನನ್ ಅವರ ಮಾತುಗಳು ನಿಮ್ಮನ್ನು ಹುರಿದುಂಬಿಸಲಿ. ದೊಡ್ಡ ಬಜೆಟ್ ಇಲ್ಲದೆಯೂ, ಕೇವಲ ಮಿಡಿಯುವ ಮನಸ್ಸಿದ್ದರೆ ಅದ್ಭುತಗಳನ್ನು ಮಾಡಬಹುದು ಎಂಬುದಕ್ಕೆ ಇವರೇ ಸಾಕ್ಷಿ.

ಬನ್ನಿ, ನಿಮ್ಮಲ್ಲಿರುವ ಪ್ರತಿಭೆಯನ್ನು ಕೇವಲ ಸ್ವಾರ್ಥಕ್ಕಾಗಿ ಬಳಸದೆ, ಈ ದೇಶದ ಅಭಿವೃದ್ಧಿಗೆ ಮತ್ತು ನೊಂದವರ ಸೇವೆಗೆ ಧಾರೆ ಎರೆಯಿರಿ.

ಜ್ಞಾನವು ಸೇವೆಯೊಂದಿಗೆ ಬೆರೆತಾಗ ಮಾತ್ರ ಅದು ಪವಿತ್ರವಾಗುತ್ತದೆ ಎಂಬ ಸತ್ಯವನ್ನು ಅರಿತು, ಹೊಸ ಭಾರತದ ನಿರ್ಮಾಣಕ್ಕೆ ಇಂದೇ ಕೈಜೋಡಿಸಿ. ನಿಮ್ಮ ಒಂದು ಸಣ್ಣ ಸಮಾಜಮುಖಿ ಹೆಜ್ಜೆ ಲಕ್ಷಾಂತರ ಜೀವಗಳಿಗೆ ಭರವಸೆಯ ಬೆಳಕಾಗಬಹುದು. ಇಂತಹ ನಿಸ್ವಾರ್ಥ ಹಾದಿಯಲ್ಲಿ ಸಾಗಲು ಇಂದೇ ಸನ್ನದ್ಧರಾಗಿ. ನಿಮ್ಮ ಪ್ರತಿಭೆ ಮಣ್ಣಿನ ಸೇವೆಗೆ ಮುಡಿಪಾಗಿರಲಿ.




# ನಾನು ಮತ್ತು ನನ್ನದು ಎಂಬ ಅಹಂಕಾರಕ್ಕೆ ಉದಾಸೀನವೇ ಮದ್ದು




| ಪುಷ್ಪ ಪ್ರಸಾದ್

ಅಹಂಕಾರದ ಮದ (ಗರ್ವ/ಸೊಕ್ಕು) ಮನುಷ್ಯನ ಬುದ್ಧಿಯನ್ನು ಮರೆಮಾಚಿ, "ನಾನು" ಮತ್ತು "ನನ್ನದು" ಎಂಬ ಭಾವನೆಯಲ್ಲಿ ಮುಳುಗಿಸಿ, ಇತರರನ್ನು ಕಡೆಗಣಿಸುವಂತೆ ಮಾಡುವ ಭೀಕರ ಸ್ಥಿತಿ. ಇದು ಸೌಂದರ್ಯ, ಹಣ, ಜ್ಞಾನ ಅಥವಾ ಅಧಿಕಾರದಿಂದ ಬರುತ್ತದೆ ಮತ್ತು ವ್ಯಕ್ತಿಯನ್ನು ವಿನಾಶದತ್ತ ಕೊಂಡೊಯ್ಯುತ್ತದೆ. ವಿನಯವೇ ಈ ಅಹಂಕಾರದ ಕತ್ತಲೆಯನ್ನು ನೀಗಿಸುವ ದಿವ್ಯ ಬೆಳಕು. ಅಹಂಕಾರ ಮತ್ತು ಸಂಸ್ಕಾರದ ನಡುವಿನ ವ್ಯತ್ಯಾಸವೇನೆಂದರೆ ಅಹಂಕಾರಿಗಳು ಇತರರನ್ನು ತಲೆ ತಗ್ಗಿಸುವಂತೆ ಮಾಡಿ ಸಂತೋಷ ಪಡುತ್ತಾರೆ. ಆದರೆ ಸಂಸ್ಕಾರಿಗಳು ತಮ್ಮಷ್ಟಕ್ಕೆ ತಾವೇ ತಲೆ ತಗ್ಗಿಸಿ ನಮಸ್ಕರಿಸುವ ಮೂಲಕ ಸಂತೋಷ ಪಡುತ್ತಾರೆ.

ಹೌದು ನಮ್ಮ ನಡುವೆ ಇಂತಹ ಅಹಂಕಾರಿ ಜನಗಳಿರುತ್ತಾರೆ. ತುಂಬಿದ ಸಭೆಯಲ್ಲೋ, ಗೆಳೆಯರ ಗುಂಪಿನಲ್ಲಿ ಚರ್ಚೆಯ ಸಮಯದಲ್ಲೋ ಅಥವಾ ಹರಟೆಯ ಸಮಯದಲ್ಲೋ, ಯಾವ ಸಂದರ್ಭದಲ್ಲಿಯೂ ಅವರು ಹಿಂದೆ ಮುಂದೆ ನೋಡುವುದಿಲ್ಲ. ಸದಾ ನಿಮ್ಮನ್ನು, ನಿಮ್ಮ ಮಾತುಗಳನ್ನು, ನಮ್ಮ ವ್ಯಕ್ತಿತ್ವವನ್ನು ಅಲ್ಲಗಳೆಯುತ್ತಾರೆ, ನಿಮ್ಮನ್ನು ಕೀಳಾಗಿ ಬಿಂಬಿಸುವ ಪ್ರಯತ್ನದಲ್ಲಿರುತ್ತಾರೆ. ಎಲ್ಲರ ಮುಂದೆ ನಮ್ಮ ದೌರ್ಬಲ್ಯವನ್ನು ಎತ್ತಿಹಿಡಿದು ನಮ್ಮನ್ನು ತಲೆತಗ್ಗಿಸುವಂತೆ ಮಾಡಿಬಿಡಬೇಕು ಎಂದು ಹವಣಿಸುತ್ತಾರೆ. ತಾವೇ ಮಹಾನ್ ಬುದ್ಧಿವಂತ ಎಂಬಂತೆ ಭಾವಿಸಿರುತ್ತಾರೆ. ಮತ್ತೊಬ್ಬರ ನಂಬಿಕೆಯನ್ನು ಒಪ್ಪುವುದೇ ಇಲ್ಲ. ಆದರೆ ಎಲ್ಲರೂ ಇವರ ಅಭಿಪ್ರಾಯಗಳನ್ನೇ ಒಪ್ಪಬೇಕು ಎಂಬ ಧೋರಣೆಯಲ್ಲಿರುತ್ತಾರೆ. ಅವರ ಅಭಿಪ್ರಾಯವನ್ನು ನಾವು ಒಪ್ಪದಿದ್ದರೇ ನಮ್ಮನ್ನು ಅವಿವೇಕಿ ಎಂದೇ ಅವರ ಭ್ರಮಿಸುತ್ತಾರೆ. ಇದಕ್ಕೆಲ್ಲಾ ಕಾರಣ ಅವರ ಅಹಂಕಾರ ಹಾಗೂ ಅಜ್ಞಾನ. ಅವರ ಸಂಪತ್ತಿನ ಬಗ್ಗೆ ಅವರಿಗೆ ಇರುವ ದುರಾಭಿಮಾನ. ಹಣ ಇದ್ದರಷ್ಟೇ ದೊಡ್ಡ ಮನುಷ್ಯ ಎಂದು ಅವರು ನಂಬಿರುತ್ತಾರೆ. ಹಾಗಾಗಿ ಅವರಿಗಿಂತ ಆರ್ಥಿಕವಾಗಿ ಹಿಂದೆ ಇರುವವರನ್ನು ಹೀಯ್ಯಾಳಿಸುವುದು, ನಮ್ಮ ಮಾತಿಗೆ ಕುಹಕವಾಡುವುದನ್ನು ಮೈಗೂಡಿಸಿಕೊಂಡಿರುತ್ತಾರೆ. ಅಷ್ಟೇ ಅಲ್ಲದೇ ನಮ್ಮ ಹಿಂದೆ ನಮಗೆ ಪರಿಚಯವಿರುವವರ ಬಳಿ ನಮ್ಮ ಬಗ್ಗೆ ಅವಹೇಳನಕಾರಿಯಾಗಿ ಆಡಿಕೊಳ್ಳುವುದನ್ನು ಮಾಡುತ್ತಾರೆ. ಅವನೇನು ಮಹಾ ಎಂಬಂತೆ ವರ್ತಿಸುತ್ತಾರೆ. ಹೀಗೆ ಮಾಡುವುರಿಂದ ಅವರಿಗೇನು ಲಾಭ ಎಂಬುದೇ ನಮಗರಿಯುವುದಿಲ್ಲ. ಹೀಗೆ ಮಾಡುವುದರಿಂದ ತಾನು ದೊಡ್ಡವನಾಗುತ್ತೇನೆ ಎಂದು ತಿಳಿದಿರುತ್ತಾರೆ. ಆದರೆ ಇನ್ನೊಬ್ಬರನ್ನು ಅವಹೇಳನ ಮಾಡಿ ಆಡಿಕೊಳ್ಳುವುದರಿಂದ ಅವರ ವ್ಯಕ್ತಿತ್ವ ಹಳ್ಳ ಹಿಡಿದಿರುತ್ತದೆ. ಇಂತವರಿಗೆ ಯಾರು ಸ್ನೇಹಿತರೇ ಇರುವುದಿಲ್ಲ. ಇದ್ದರೂ ಅವರ ಮುಂದೆ, ಅವರ ಹಣಕ್ಕೋ, ಅಧಿಕಾರಕ್ಕೋ ತಲೆಬಾಗಿ ಮಾತ್ರ ಸ್ನೇಹಿತರಂತೆ ನಾಟಕವಾಡುತ್ತಿರುತ್ತಾರೆ. ಆದರೆ ಅವರ ಹತ್ತಿರ ಹೆಚ್ಚು ಹೊತ್ತು ಇರಲು ಇಷ್ಟಪಡುವುದಿಲ್ಲ. ಇಂತಹ ದುರಹಂಕಾರವಿರುವವರು ಒಬ್ಬ ವ್ಯಕ್ತಿಯನ್ನು ವ್ಯಕ್ತಿಯ ವ್ಯಕ್ತಿತ್ವದ ಮೂಲಕ ಅಳೆಯದೇ ಕೇವಲ ಹಣದಿಂದ ಅಳೆಯುತ್ತಾರೆ. ನಾವು ಯಾವುದೇ ವಿಷಯವನ್ನು ವಸ್ತುನಿಷ್ಠವಾಗಿಯೇ ಹೇಳುತ್ತಿದ್ದರೂ ಅದಕ್ಕೆ ಆಕ್ಷೇಪಣೆ ಸಲ್ಲಿಸಿ, ತಮ್ಮ ಆಂಗಿಕ ಭಾಷೆಯಲ್ಲಿಯೇ, ಕಣ್ಣುಗಳ ನೋಟಗಳಿಂದಲೇ ನಮ್ಮ ಬಗ್ಗೆ ವಿರೋಧ ವ್ಯಕ್ತಪಡಿಸುತ್ತಾರೆ. ಅಷ್ಟಕ್ಕೂ ಅವರು ನಮ್ಮನ್ನು ದ್ವೇಷಿಸುವುದಕ್ಕೆ ಕಾರಣವೇ ಇರುವುದಿಲ್ಲ. ಆದರೂ ಅವರು ನಮ್ಮನ್ನು ಬೆನ್ನು ಬೀಳುತ್ತಾರೆ. ಅಹಂಕಾರದ ಮದ, ಎಲ್ಲ ಮದಗಳಿಗಿಂತ ಮಹಾ ಭಯಂಕರ! ನಾನು ನನ್ನದು ನನಗೆ... ಬಿಟ್ಟರೆ ಮಿಕ್ಕೇನನ್ನೂ ಕಾಣದಂತಾಗಿಸುವ ಮದ. ಇನ್ನು ಇಂತಹ ಅಹಂಕಾರಿಗಳು ತಾವೇನಾದರೂ ಸಮಾಜದಲ್ಲಿ ಉತ್ತಮ ಸ್ಥಾನದಲ್ಲಿದ್ದರೆ ಅಂದರೆ ಆರ್ಥಿಕವಾಗಿಯೋ, ಅಧಿಕಾರಿಯಾಗಿದ್ದರೇ ತಮ್ಮನ್ನು ತಾವು ಪರಿಚಯ ಮಾಡಿಕೊಳ್ಳುವುದು ತಮ್ಮ ಹೆಸರಿನಿಂದಲ್ಲ, ಬದಲಾಗಿ ತಮ್ಮ ಹುದ್ದೆಯಿಂದ, ಅಧಿಕಾರದಿಂದ. ತಾವು ಹುಟ್ಟಿದಾಗಿನಿಂದ ಅಧಿಕಾರಿಯಾಗಿಯೇ ಹುಟ್ಟಿದ್ದೇನೆ ಎಂಬಂತಿರುತ್ತದೆ ಅವರ ನಡವಳಿಕೆ. ಇದಕ್ಕೆ ಕಾರಣ ಅವರ ಅಲ್ಪಜ್ಞಾನ. ಇಂತಹ ಅಹಂಕಾರದ ವರ್ತನೆಗೆ ಸೂಕ್ತ ಉಪಾಯವೆಂದರೆ ?ಉದಾಸೀನ? ಮಾಡಿಬಿಡುವುದು. ಅವರು ಉದ್ದೇಶಪೂರ್ವಕವಾಗಿಯೇ ಈ ರೀತಿ ಮಾಡುತ್ತಾರೆ ಎಂಬುದು ನಮಗೆ ತಿಳಿದಿರುವುದರಿಂದ, ಅವರು ಹೇಳುವುದನ್ನು ಮನಸ್ಸಿಗೆ ಹಾಕಿಕೊಳ್ಳಬಾರದು. ಏನು ಆಗೆ ಇಲ್ಲವೆಂಬಂತೆ ಅವರ ಕುಹಕದ ನುಡಿಗಳಿಗೆ ಮುಗುಳ್ನಗೆಯನ್ನು ಬೀರಬೇಕು. ಅದೇ ಪರಿಹಾರ. ?ಅಹಂಕಾರಕ್ಕೆ ಉದಾಸೀನವೇ ಮದ್ದು–ಕುಹಕಕ್ಕೆ ಮುಗುಳ್ನಗೆಯೇ ಉತ್ತರ? ಆಗ ಅವರಿಗಾಗುವ ಮಾನಸಿಕ ಸೋಲು ಅವರನ್ನು ಕಂಗೆಡಿಸುತ್ತದೆ. ಮಾನಸಿಕವಾಗಿ ಅವರಿಗೆ ಗೊಂದಲವಾಗಿಬಿಡುತ್ತದೆ. ಅಹಂಭಾವವು ಹೊಲದಲ್ಲಿ ಬೆಳೆಯುವ ಹುಲ್ಲಿನಂತಿರುತ್ತದೆ. ಎಲ್ಲಿಯವರೆಗೆ ನಾವು ಆ ಹುಲ್ಲನ್ನು ಬೇರುಸಮೇತ ನಾಶಮಾಡುವುದಿಲ್ಲವೋ, ಅಲ್ಲಿಯವರೆಗೆ ಒಳ್ಳೆಯ ಬೆಳೆ ಬರುವುದಿಲ್ಲ. ಆ ಹುಲ್ಲನ್ನು ಸತತವಾಗಿ ನಾಶಮಾಡುತ್ತಲೇ ಇರಬೇಕಾಗುತ್ತದೆ; ಅದರಂತೆಯೇ ಅಹಂಭಾವವು ಸಂಪೂರ್ಣ ನಾಶವಾಗದ ಹೊರತು ಭಗವಂತನ ಕೃಪೆಯ ಬೆಳೆಯು ಬರಲು ಸಾಧ್ಯವಿಲ್ಲ. ಸಾಧನೆಯ ಉದ್ದೇಶವೇ ಅಹಂಭಾವವನ್ನು ನಾಶ ಮಾಡುವುದಾಗಿದೆ, ಆದರೂ ಮನುಷ್ಯನಲ್ಲಿ ಅಹಂಭಾವವು ಎಷ್ಟು ಬೇರೂರಿರುತ್ತದೆ ಎಂದರೆ ಸಾಧನೆಯನ್ನು ಮಾಡುವಾಗಲೂ ಅದನ್ನು ಸಂಪೂರ್ಣ ನಾಶಮಾಡಲು ಸಹಜ ಸಾಧ್ಯವಾಗುವುದಿಲ್ಲ. ಆದುದರಿಂದ ಸಾಧನೆಯಿಂದ ಅಹಂಭಾವವು ತಾನಾಗಿಯೇ ಕಡಿಮೆಯಾಗುವುದು ಎಂದು ವಿಚಾರವನ್ನು ಮಾಡದೇ ಅಹಂಭಾವವನ್ನು ಕಡಿಮೆ ಮಾಡಿಕೊಳ್ಳಲು ಸತತವಾಗಿ ಪ್ರಯತ್ನ ಮಾಡಬೇಕು. ಅಹಂ ಎಷ್ಟು ಹೆಚ್ಚಿರುತ್ತದೆಯೋ, ವ್ಯಕ್ತಿ ಅಷ್ಟೇ ಹೆಚ್ಚು ದುಃಖಿತನಾಗಿರುತ್ತಾನೆ. ಮನೋ ರೋಗಿಗಳಲ್ಲಿ ಸಾಮಾನ್ಯ ವ್ಯಕ್ತಿಗಿಂತ ಅಹಂಭಾವ ಹೆಚ್ಚಿರುತ್ತದೆ. ಆದುದರಿಂದ ಅವರು ಹೆಚ್ಚು ದುಃಖಿತರಾಗಿರುತ್ತಾರೆ. ನನ್ನ ಸಂಪತ್ತು, ನನ್ನ ಶರೀರ ಈ ವಿಧದ ವಿಚಾರಗಳಿದ್ದಲ್ಲಿ ಸಂಪತ್ತು ಕಡಿಮೆಯಾದಾಗ ಅಥವಾ ಶರೀರಕ್ಕೆ ಕಾಯಿಲೆ ಬಂದಾಗ ಆ ವ್ಯಕ್ತಿಯು ದುಃಖಿತನಾಗುತ್ತಾನೆ; ಆದರೆ ಇನ್ನೊಬ್ಬನ ಬಗ್ಗೆ ಹೀಗಾದರೆ ವ್ಯಕ್ತಿಯು ದುಃಖಿತನಾಗುವುದಿಲ್ಲ. ಅಹಂಭಾವದಿಂದ ಮನಸ್ಸಿಗೆ ಆಗುವ ದುಃಖವು ಶಾರೀರಿಕ ವೇದನೆಗಿಂತಲೂ ಹೆಚ್ಚು ಕಷ್ಟಕರವಾಗಿರುತ್ತದೆ. ಇದಕ್ಕೆ ವಿರುದ್ಧವಾಗಿ ಸಂತರು ಎಲ್ಲವೂ ಪರಮೇಶ್ವರನದ್ದೇ ಆಗಿದೆ, ತನ್ನದೇನೂ ಇಲ್ಲ ಎಂದು ತಿಳಿಯುತ್ತಾರೆ; ಆದ್ದರಿಂದ ಅವರು ಎಂದಿಗೂ ದುಃಖಿತರಾಗುವುದಿಲ್ಲ, ಯಾವಾಗಲೂ ಆನಂದದಲ್ಲಿಯೇ ಇರುತ್ತಾರೆ. ಅತಿಶಯೋಕ್ತಿ ಯಾದರು ಚಿಂತೆ ಇಲ್ಲ, ಅಹಂಕಾರಿಗಳು ಉಳುಕು ಮನಸಿನ ಅವಕಾಶವಾದಿಗಳು, ಕ್ಷಣಕ್ಕೊಮ್ಮೆ ಬಣ್ಣ ಬದಲಿಸುವ ಸಮಯ ಸಾಧಕರುಗಳನ್ನು, ದೂರವೇ ಬಿಟ್ಟು ನಡೆಯುವುದು ಯೋಗ್ಯವೇ ಸರಿ.





Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from No 170, Nirvikalpa Road, E&F block, Ramakrishna Nagar, Mysore - 570022, Editor K.N Ravi,